ಪ್ರಚೋದನೆ


ಲಂಕೇಶ್

04 ನವೆಂಬರ್ 2015

ರೂ. 15/-




ಗೋಹತ್ಯೆ ನೆಪ ಅಷ್ಟೇ



ಪೋಲೀಸು ಧೀರ ತಾಳ್ಮೆಯ ತೋರ


ೀರೋಚ್ಛಾಟನೆ ಆದೀತಾ?





ರಾಜೀನಾಮೆ ಸುನಾಮಿ

ಈಡಿಯೋಪತಿಕ್ ವೈದ್ಯಕುಲ ಮತ್ತು ಅಮಾಯಕ ರೋಗಿಗ



ಕೆಲವು ಅನುಭವಗಳನ್ನು ಉದಾಹರಿಸದೇ ವೈದ್ಯಕೀಯ ಲೋಕದ ಸಂಗತಿಗಳನ್ನು ವಿವರಿಸುವುದು ಕಷ್ಟ. ಇದೇ ರೀತಿಯ ಅನುಭವ ವಕೀಲರುಗಳದ್ದೂ ಇರಬಹುದು. ಎರಡೂ ಕ್ಷೇತ್ರಗಳಲ್ಲಿ ಕೇಸ್ ಸ್ಟಡಿ ಮುಖ್ಯವಾದದ್ದು. ಏನೇ ಥಿಯರಿಯನ್ನು ಅರೆದು ಕುಡಿದಿದ್ದರೂ, ವಾಸ್ತವ ಜಗತ್ತಿನಲ್ಲಿ ಪ್ರಾಯೋಗಿಕವಾಗಿ ಏನಾಯ್ತು, ಏನಾಗಬೇಕು ಎಂಬುದೇ ಇಲ್ಲಿ ಮುಖ್ಯ. ಹಾಗಾಗಿಯೇ ಈ ಬರಹವನ್ನೂ ಒಂದು ಕೇಸ್‌ನ ಉದಾಹರಣೆಯೊಂದಿಗೆ ನಿಮ್ಮ ಮುಂದಿಡುತ್ತಿದ್ದೇನೆ. ಸಿದ್ದರಾಜು ಈಗಾಗಲೇ ಸಾಕಷ್ಟು ಹೆಸರಾಗಿರುವ, ಶ್ರಮಜೀವಿಗಳ ಪರವಾದ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ವ್ಯಕ್ತಿ. ಕಾರ್ಮಿಕರ ಸೌಲಭ್ಯಗಳಿಗಾಗಿ ಹೋರಾಡಿದ ಸಂಘಟನೆಯಲ್ಲೂ ಇರುವುದರಿಂದ ಅವರಿಗೆ, ಅಸಂಘಟಿತ ಕಾರ್ಮಿಕರಿಗೆಂದೇ ಇರುವ ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ -ಆರ್‌ಎಸ್‌ಬಿವೈ ಗೊತ್ತು. ಆ ಯೋಜನೆಯ ಕಾರ್ಡನ್ನೂ ಹಿಡಿದುಕೊಂಡು ದೇಹದ ಕೆಲವು ಭಾಗಗಳ ಸ್ವಾಧೀನ ಇದ್ದಕ್ಕಿದ್ದಂತೆ ಕಳೆದುಕೊಂಡ ತಮ್ಮ ತಾಯಿಯನ್ನು ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋದರು.

ಆಸ್ಪತ್ರೆಯಲ್ಲಿ ಅವರು ಚೇತರಿಸಿಕೊಂಡರು. ಅಂದರೆ, ಅವರಿಗೆ ಸಂಪೂರ್ಣ ಪಾರ್ಶ್ವವಾಯು ಆಗಿರಲಿಲ್ಲ, ಮುಂದಿನ ದಿನಗಳಲ್ಲಿ ಪಾರ್ಶ್ವವಾಯು ಬರುವ ಸಾಧ್ಯತೆಯ ಎಚ್ಚರಿಕೆಯನ್ನು ನೀಡಿದ ಟಿಐಎ (**transient ischaemic attack**) ಆಗಿತ್ತು. ಆ ಆಸ್ಪತ್ರೆಗೇ ಹೊಂದಿಕೊಂಡಿರುವ ಪ್ರಯೋಗಾಲಯದಲ್ಲಿ ಮಾಡಿಸಿದ ಚಿಕಿತ್ಸೆಗಳು, ವೈದ್ಯರು ಬರೆದುಕೊಟ್ಟ ಇವರು ತಂದ ಔಷಧಿಗಳು ಎಲ್ಲಕ್ಕೂ ರೋಗಿಯ ಕುಟುಂಬದವರೇ ಹಣ ತೆತ್ತರು. ಕಡೆಗೆ ಆಸ್ಪತ್ರೆಯೊಳಗಿನ ಹಲವು ಚಿಕಿತ್ಸೆಗಳಿಗೂ ಹಣ ಕಟ್ಟಿಸಿಕೊಂಡರು. ಸಿದ್ದರಾಜು ಎಚ್ಚೆತ್ತುಕೊಂಡು ಆರ್‌ಎಸ್‌ಬಿವೈ ಯೋಜನೆಯಡಿ ನೀವು ಹಣ ಕಟ್ಟಿಸಿಕೊಳ್ಳುವ ಹಾಗಿಲ್ಲ ಎಂದು ಹೇಳಿದಾಗ, ಆಸ್ಪತ್ರೆ ಜನ ಅರ್ಥವಾಗಬಾರದ ಕೆಲವು ತಾಂತ್ರಿಕ ಅಂಶಗಳನ್ನು ಹೇಳಿದರು. ಅಲ್ಲಿಂದ ಸೀದಾ ಕಾರ್ಮಿಕ ಇಲಾಖೆಗೆ ಹೋಗಿ ದೂರು ನೀಡಿದ ಸಿದ್ದರಾಜುವನ್ನು ಅವರು ನಿರ್ಲಕ್ಷಿಸಲು ಸಾಧ್ಯವಿರಲಿಲ್ಲ. ಹಾಗಾಗಿ ಸಂಬಂಧಿಸಿದ ಅಧಿಕಾರಿಗಳು ಆಸ್ಪತ್ರೆಗೆ ಬಂದು, ದಬಾಯಿಸಿ ಅವರಿಗೆ ಹಣವನ್ನು ಮರಳಿಸಲು ಸೂಚಿಸಿದರು.

ಆ ಮಟ್ಟಿಗೆ ಇದೊಂದು ಮುಖ್ಯವಾದ ವಿಜಯವೇ. ಅದಾದ ನಂತರದ ಎರಡನೇ ರಾತ್ರಿ ಅದೇ ರೋಗಿಯು ಮತ್ತೆ ಏಕೋ ಕೈಕಾಲು ಸರಿಯಾಗಿ ಆಡಿಸುತ್ತಿಲ್ಲವೆನಿಸಿದಾಗ, ಈ ಬಾರಿ ಬೇರೊಂದು ವೈದ್ಯರ ಹತ್ತಿರ ಕರೆದುಕೊಂಡು ಹೋಗಲಾಯಿತು. ಈ ವೈದ್ಯರು ಅಂತಿಂಥವರಲ್ಲ, ಮೊದಲಿಗೆ ವೈದ್ಯರೇ ಅಲ್ಲ, ಆದರೂ, ಬಹಳ ತೀವ್ರ ಪಾರ್ಶ್ವವಾಯು/ಲಕ್ವಕ್ಕೆ ಈಡಾದವರನ್ನೆಲ್ಲಾ ಗುಣಪಡಿಸಿದ ಖ್ಯಾತಿ ಹೊಂದಿದವರು! ಇಂತಹ ಖ್ಯಾತಿಗೆ ಕಾರಣವೂ ಇದೆ. ಇದೇ ರೋಗಿಗೆ ಮೊದಲು ಆದಂತಹ, ಹೀಗೆ ಬಂದು ಹಾಗೆ ಹೋಗುವ ಟಿಐಎ ಪಾರ್ಶ್ವವಾಯುವು ಕೆಲವು ವೈದ್ಯರಿಗೆ 'ಪವಾಡ' ನಡೆಸುವ ಅವಕಾಶ ಕಲ್ಪಿಸುತ್ತದೆ. ಅಷ್ಟು ತೀವ್ರವಲ್ಲದ ಕೆಲವು ಅಸಲೀ ಪಾರ್ಶ್ವವಾಯುಗಳೂ ಸಹ, ಸೂಕ್ತ ಫಿಸಿಯೋಥೆರಪಿಯಿಂದ ಬಹುಮಟ್ಟಿಗೆ ಕಡಿಮೆಯಾಗುತ್ತದೆ. ಆ ರೀತಿ ಒಂದು ವೇಳೆ ನಿಮ್ಹಾನ್ಸ್‌ನಂತಹ ಆಸ್ಪತ್ರೆಯಲ್ಲಿ ಗುಣವಾದಲ್ಲಿ, ರೋಗಿಗಳಿಗೆ ಅದರಲ್ಲೇನೂ ಹೆಚ್ಚುಗಾರಿಕೆ ಕಾಣುವುದಿಲ್ಲ. ಆದರೆ, ಇಂತಹ 'ವಿಶೇಷ' ವೈದ್ಯರುಗಳ ಆಸ್ಪತ್ರೆಗಳಲ್ಲಿ ಗುಣವಾಗಿಬಿಟ್ಟರೆ ಅದು ದಂತಕಥೆಯಾಗಿ ಹುಟ್ಟುತ್ತದೆ. ಇಲ್ಲಿಯೂ ಗುಣ ಕಾಣದ ಸಾವಿರಾರು ಕೇಸುಗಳ ಸಮಸ್ಯೆಗೆ ಹಣೆಬರಹ ಕಾರಣವಾಗಿರುತ್ತದೆ.

ಆರ್‌ಎಸ್‌ಬಿವೈ ಯೋಜನೆಯ ಕುರಿತು ತಿಳಿದುಕೊಂಡು ಆಸ್ಪತ್ರೆಯ ಆಡಳಿತದ ಹತ್ತಿರ ಗುದ್ದಾಡಿ ಹಣ ವಾಪಸ್ಸು ಪಡೆದುಕೊಂಡ ವ್ಯಕ್ತಿಗೂ ಇಂತಹ ವಿಶೇಷ ವೈದ್ಯರ ಬಳಿ ವಿಮೆ ಮಾಡಲಾಗುವುದಿಲ್ಲ, ಏಕೆಂದರೆ, ಅಲ್ಲಿ ಕಾನೂನು, ಪದವಿ ಮುಖ್ಯವಲ್ಲ, ನಂಬಿಕೆ ಮುಖ್ಯವಾಗಿರುತ್ತದೆ. ಇಂತಹ 'ಕ್ವಾಕ್' ಡಾಕ್ಟರುಗಳನ್ನು ಬೇಟೆ ಮಾಡಲು ಈ ಕೇಸನ್ನು ವಾಚಕರ ಮುಂದಿಡುತ್ತಿಲ್ಲ, ಬದಲಿಗೆ ಅದಕ್ಕಿಂತ ಇನ್ನೂ ಒಂದು ಮುಖ್ಯ ಸಂಗತಿಯಿದೆ.


ಅದೇನೆಂದರೆ, ಮೊದಲನೆ ಆಸ್ಪತ್ರೆಗೆ ಹೋದಾಗಲೂ ಅಲ್ಲಿಯೂ ಇದೇ ರೀತಿ ವೈದ್ಯವೇ ನಡೆದಿತ್ತು! ಹೀಗೆ ಬಂದು ಹಾಗೆ ಹೋಗುವ ಪಾರ್ಶ್ವವಾಯುವು ಇನ್ನೂ ಮುಂದೆ ಬರಲಿರುವ ಪಾರ್ಶ್ವವಾಯುವಿನ ಮುನ್ಸೂಚನೆ ಕೊಡುತ್ತದೆ. ಹಾಗಾಗಿ ತಲೆಯಲ್ಲಿ ರಕ್ತ ಹೆಪ್ಪುಗಟ್ಟಬಹುದಾದ ಸಾಧ್ಯತೆಯನ್ನೂ, ದೇಹದ ಇನ್ನಿತರ ಭಾಗಗಳಲ್ಲಿ ಹೆಪ್ಪುಗಟ್ಟಿ ತಲೆಗೆ ಹೋಗಬಹುದಾದ ಸಾಧ್ಯತೆಯನ್ನೂ ವೈದ್ಯರು ಪರಿಶೀಲಿಸಬೇಕು. ಆಗ ಕಂಡುಬರಬಹುದಾದ ಅಂಶಗಳಿಗೆ ಮೊದಲೇ ಚಿಕಿತ್ಸೆ/ಜೀವನ ಶೈಲಿಯ-ಆಹಾರ ಶೈಲಿಯ ಬದಲಾವಣೆಯನ್ನು ಸೂಚಿಸಬೇಕು. ಅದರಲ್ಲಿ ಶೇ.50ನ್ನು ಮೊದಲನೆಯ 'ಆಧುನಿಕ ವೈದ್ಯ ವಿಜ್ಞಾನದ' ಆಸ್ಪತ್ರೆಯಲ್ಲೂ ಮಾಡಿರಲಿಲ್ಲ. ಹೃದಯದಲ್ಲಿ ರಕ್ತ ಹೆಪ್ಪುಗಟ್ಟುವ ಸಾಧ್ಯತೆ ಇರುತ್ತದಾದ್ದರಿಂದ, ಒಂದು ಹೃದಯದ ಸ್ಕ್ಯಾನ್ ಮತ್ತು ರಕ್ತದಲ್ಲಿನ ಕೊಬ್ಬಿನ ಅಂಶದ ಪರೀಕ್ಷೆಗಳಿಗೆ ಅವರು ಸುಮ್ಮನಾಗಿಬಿಟ್ಟಿದ್ದರು. ರಕ್ತನಾಳಗಳಲ್ಲಿ ಇರಬಹುದಾದ ಇತರ ತೊಂದರೆಗಳ ಪರೀಕ್ಷೆಗಳನ್ನಾಗಲೀ, ಕಠಿಣ ರಕ್ತನಾಳಗಳಲ್ಲಿ ತಲೆದೋರುವ ಸಮಸ್ಯೆಗಳ ಪತ್ತೆಗೆ ಬೇಕಾದ ಡಾಪ್ಲರ್ ಪರೀಕ್ಷೆಯನ್ನಾಗಲೀ ಅವರು ಮಾಡಿರಲಿಲ್ಲ. ಬೆಂಗಳೂರಿನ ಹೈಟೆಕ್ ಆಸ್ಪತ್ರೆಗಳಲ್ಲಿ ಹೈಟೆಕ್ ವಿಮಾ ಪಾಲಿಸಿ ಇದ್ದಲ್ಲಿ ನಿಮಗೆ ಅಗತ್ಯವಿರುವುದಕ್ಕಿಂತಲೂ 3 ಪಟ್ಟು ಪರೀಕ್ಷೆಗಳಿಗೆ ಒಳಗಾಗಿಬಿಡುತ್ತೀರಿ. ಆದರೆ, ಇದು ಸರ್ಕಾರದ ಲೋಟೆಕ್ ವಿಮಾ ಪಾಲಿಸಿ! ಇದರಿಂದ ಆದ ಪ್ರಯೋಜನ ಇಷ್ಟೇ. ಸರ್ಕಾರದ ಹಣ ಖಾಸಗಿಯವರಿಗೆ ಹೋಗಲು ಈ ರೋಗಿ ಕೇವಲ ವಾಹಕವಷ್ಟೇ.

ಅಂದರೆ ಸಾರಾಂಶದಲ್ಲಿ ಖಾಸಗೀ ಆಸ್ಪತ್ರೆಯಲ್ಲೂ, ಸರ್ಕಾರೀ ವಿಮೆ ಇದ್ದಾಗಲೂ ಸಿಗುವ ವೈದ್ಯಕೀಯ ಸೌಲಭ್ಯಕ್ಕೂ, ರೋಗಿಗಳನ್ನು ದಿಕ್ಕು ತಪ್ಪಿಸುವ ನಕಲೀ ವೈದ್ಯರ ಚಿಕಿತ್ಸೆಗೂ ದೊಡ್ಡ ವ್ಯತ್ಯಾಸವೇನಿಲ್ಲ, ಎರಡೂ ಕಡೆ ರೋಗಿ ಬದುಕುವುದು, ರೋಗಿಯ ದೇಹದಲ್ಲಿ ಇರುವ ಆಂತರಿಕ ಸಾಮರ್ಥ್ಯದಿಂದ!! ಎರಡೂ ಕಡೆ ರೋಗಿಯನ್ನು ಮೋಸಗೊಳಿಸುವುದು ಅವರ ಅಜ್ಞಾನದ ಮೂಲಕವೇ.

ಹಾಗೆ ನೋಡಿದರೆ ಇಡೀ ವೈದ್ಯಕೀಯ ಲೋಕಕ್ಕೇ ಎಲ್ಲವೂ ಗೊತ್ತಿದೆಯೆಂದೇನಲ್ಲ, ಹಲವಾರು ಕಾಯಿಲೆಗಳಿಗೆ 'ಈಡಿಯೋಪತಿಕ್' ಎಂಬ ಪೂರ್ವನಾಮ ಇರುವುದನ್ನು ನೀವು ಗಮನಿಸರಬಹುದು. ಈಡಿಯೋಪತಿಕ್ ಎಂದರೆ ನಿಘಂಟಿನಲ್ಲಿ **relating to or denoting any disease or condition which arises spontaneously or for which the cause is unknown** ಎಂಬರ್ಥವಿದೆ. ಅಂದರೆ, ಕಾರಣ ಗೊತ್ತಿಲ್ಲದ ಖಾಯಿಲೆ ಎಂದು. ವೈದ್ಯರಿಗೂ ಗೊತ್ತಿಲ್ಲ, ವೈದ್ಯಲೋಕಕ್ಕೇ ಗೊತ್ತಿಲ್ಲ, ಗೊತ್ತಿಲ್ಲದಿರುವುದೇ ಸಮಸ್ಯೆಯಲ್ಲ, ಆದರೆ, ನಮ್ಮ ವೈದ್ಯಕೀಯ ಪ್ರಾಕ್ಟೀಸ್ ನಡೆಯುತ್ತಿರುವುದು ಬಹುಪಾಲು ಈಡಿಯೋಪತಿಕ್ ರೀತಿಯಲ್ಲಿ ಎನ್ನುವುದೇ ಸಮಸ್[...] ತಮ್ಮತಮ್ಮಲ್ಲೇ ಮಾತಾಡಿಕೊಳ್ಳುವಾಗ ಹಲವಾ[...] ರೂಪಗಳನ್ನು ಬಳಸಿ ಮಾತಾಡುತ್ತಾರೆ. ಅದು [...] ಕಾರಣದಿಂದಾಗಿ, ಕೆಲವು ಬಾರಿ ರೋ[...] ಗೊತ್ತಾಗದಿರಲೆಂದು. ನಾವು ವೈದ[...] ವಿದ್ಯಾರ್ಥಿಗಳಾಗಿದ್ದಾಗ ಒಂದು ತಮಾಷೆ ಜಾರಿ[...] ರೋಗಿಯ ಎದುರಿಗೆ ಮಾತನಾಡಿಕೊಳ್ಳು[...] ರೋಗಿಯ ಕಾಯಿಲೆ ಬಗ್ಗೆ ನಿಮಗೇನನ್ನಿಸುತ್ತದೆ [...] ಅದು ಜಿಒಕೆ ಇರಬಹುದು ಎಂದು ಇನ್ನೊಬ್ಬ[...] ಹೇಳುತ್ತಾರೆ. ಜಿಒಕೆ ಎಂದರೆ **god only kno**[...] ಅಂದರೆ ದೇವರಿಗೆ ಮಾತ್ರ ಗೊತ್ತು ಅಂತ.

ಈ ದೇಶದಲ್ಲಿ ಇಂದಿಗೂ ಬಹುಪಾಲು ರೋ[...] ಅನಕ್ಷರಸ್ಥರಾಗಿರುವುದರಿಂದ, ಅವರಿಗೆ ಹೆಚ್ಚೇನೂ ಗ[...] ಅಗತ್ಯವಿಲ್ಲವೆಂದು ವೈದ್ಯಲೋಕ ಭಾವಿಸುತ್ತ[...] ಗೂಗಲ್ ಅಸ್ತ್ರ ಹೊಂದಿರುವ ಮಧ್ಯಮವರ್ಗವು [...] ಇಂಟರ್‌ನೆಟ್‌ನಲ್ಲಿ ಹುಡುಕಿ ವೈದ್ಯರುಗಳಿಗೂ [...] ತರುತ್ತಾರೆ, ತಮಗೂ ತೊಂದರೆ ತಂದುಕೊಳ್ಳುತ್ತಾ[...] ಎರಡು ಅತಿರೇಕಗಳ ನಡುವೆ ಬಹುಪಾಲು [...] ಸರಿಯಾದ ಚಿಕಿತ್ಸೆ ಸಿಗುತ್ತಿಲ್ಲ.

ಇವೆಲ್ಲಕ್ಕೂ ಬಿಡಿ ವೈದ್ಯರುಗಳು ಮಾತ್ರ ಕಾರ[...] ನಮ್ಮ ಇಡೀ ವೈದ್ಯಕೀಯ ವ್ಯವ[...] ಪುನರ್‌ರಚನೆಯಾಗಬೇಕಿದೆ. ಆದರೆ, ಮುಂದಿನ [...] ಖಾಸಗೀಕರಣ ಹಾಗೂ ಖಾಸಗಿಯಲ್ಲೂ [...] ಪಡೆದುಕೊಳ್ಳಲು ಅಗ್ಗದ ಸರ್ಕಾರೀ ವಿಮೆ [...] ಪರಿಹಾರವೆಂದು ವ್ಯವಸ್ಥೆ ಸೂಚಿಸುತ್ತದೆ. ಆ[...] ನಮ್ಮ ಆರೋಗ್ಯ ವ್ಯವಸ್ಥೆ ನಾಗಾಲೋಟದಿಂದ[...] ಇಂತಹ ವಿಮಾ ವ್ಯವಸ್ಥೆಯಲ್ಲಿ ಸಿದ್ದರಾಜು ಅವ[...] ಪಡೆದುಕೊಂಡಿದ್ದೇ ಅತ್ಯುತ್ತಮ ಚಿಕಿತ್ಸೆ. ಹೆಚ್ಚೆಂದ[...] ಸಂಕೀರ್ಣತೆಗಳೂ ಉದ್ಭವಿಸದ ಕೆಲವು ಶಸ್ತ್ರ[...] ಮಾತ್ರ ಬಡವರಿಗೆ ಕಡಿಮೆ ದರದಲ್ಲಿ ದೊರೆಯ[...] ಉಚಿತವಾಗಿಯಲ್ಲ! ಏಕೆಂದರೆ, ಪ್ರತೀ ಯೋಜ[...] ಇರುವ 'ಇವು ಕವರ್ ಆಗುವುದಿಲ್ಲ' ಎ[...] ಷರತ್ತುಗಳು, ರೋಗಿಗಳನ್ನು ಸುಲಿಯಲು [...] ಅವಕಾಶವನ್ನು ಒದಗಿಸುತ್ತವೆ. ಈ ರೀತಿಯ [...] ವ್ಯವಸ್ಥೆಯ ಸುಧಾರಣೆಗೆ ಏನಾದರೂ ಕ್ರಾಂತಿಕಾ[...] ನಡೆಯಬೇಕಿದೆ. ಏಕೆಂದರೆ, ವೈದ್ಯಕೀಯ ಲೋಕ[...] ಇಂತಹದೊಂದು ಚರ್ಚೆ ಸಹಾ ನಡೆಯುತ್ತಿಲ್ಲ. [...] ಚರ್ಚೆ ನಡೆಯುತ್ತಿದ್ದರೆ, ಅದು 'ಆರೋಗ್ಯ ಚಳವ[...] ಕರೆಯಬಹುದಾದ ಬಹಳ ಬಹಳ [...] ವಲಯದೊಳಗೆ ಮಾತ್ರ ನಡೆಯುತ್ತಿದೆ.



ಮೋದಿ ಕೂದಲನ್ನ ಶೋಭ ಯಾವಾಗ ನೋಡಿದ್ರು ಸ[...]

ನಮ್ಮ ಸುಸಂಸ್ಕೃತ ಬಿಜೆಪಿಯ ಬಾಯಿಬೇಧಿ ಈಶ್ವರಪ್ಪನವರು ಮತ್ತೆ ಸಂಸ್ಕೃತ ಶ್ಲೋಕವೊಂದನ್ನು ಉದುರಿಸಿದ್ದರಿಂದ ಬಿಜೆಪಿಯ ಪಡಖಾನೆ ಸುಗಂಧ ಪೂಸಿದಂತೆ ನಾರುತ್ತಿದೆಯಂತಲ್ಲಾ. ಈ ಈಶ್ವರಪ್ಪನ ಕಳ್ಳುಬಳ್ಳಿಗಳಾದ ಚೀಟಿ ರವಿ, ರೇಣುಕ, ಗೋಮಧು, ರಾಂದಾಸ್ ಮತ್ತು ಅನೇಕರು "ಈಶ್ವರಪ್ಪ ಹೇಳುವುದರಲ್ಲೂ ಸತ್ಯವಿದೆ. ಈಗ ನಾವಿಲ್ಲಿದ್ದೇವೆ, ಕರ್ನಾಟಕದ ಮೂಲೆಯೊಂದರ ಹಳ್ಳಿಯಲ್ಲಿ ಯಾವುದೋ ಹಿಂದೂ ಹುಡುಗಿಯನ್ನು ಮುಸ್ಲಿಂ ಹುಡುಗ ರೇಪ್ ಮಾಡಿದರೆ ನಮ್ಮನಮ್ಮ ಊರಲ್ಲಿರುವ ನಾವೇನು ಮಾಡಲು ಸಾಧ್ಯ? ಕೃತ್ಯ ನಡೆದ ನಂತರ ಘಟನೆಗೆ ಸಂಬಂಧಿಸಿಲ್ಲದ ಯಾವ್ಯಾವುದೊ ಚಿತ್ರಗಳನ್ನು ವಾಟ್ಸಾಪ್‌ನಲ್ಲಿ ಹಾಕಿ, ಬಂದ್, ರಸ್ತೆ ತಡೆ, ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಷ್ಟೆ. ನಮ್ಮೆಲ್ಲರ ಅಭಿಪ್ರಾಯಗಳನ್ನು ನಮ್ಮ ಈಶ್ವರಪ್ಪ ನಿರ್ಭೀತಿಯಿಂದ ಹೇಳಿದ್ದಾರಷ್ಟೆ. ಆದರೆ ಮಾತೆಯರು ಈ ಮಾತನ್ನು ಸಹಿಸಿಕೊಳ್ಳಬೇಕು" ಎಂಬ ಠರಾವು ಪಾಸು ಮಾಡಿಲ್ಲವಂತಲ್ಲಾ, ಥೂತ್ತೇರಿ!!

* * *

ರಾಜ್ಯದಾದ್ಯಂತ ರೈತ ಚೈತನ್ಯಯಾತ್ರೆ ಮಾಡುತ್ತ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರಬೇಕೆಂಬ ಹಠದಿಂದ ತಿರುಗುತ್ತಿರುವ ಯಡಿಯೂರಪ್ಪನನ್ನು ಮಾತನಾಡಿಸಬೇಕೆನಿಸಿತಲ್ಲಾ, ತಡಮಾಡದೆ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "......ಈ ಅಂಜದ ಎದೆಯಲಿ ನಂಜೇ ಇಲ್ಲ, ಬಗ್ಗುವ ಆಳಲ್ಲಾ, ತಲೆತಗ್ಗಿಸಿ ನಡೆಯೊಲ್ಲಾ ಆ............"

"ಹಲೋ ಯಾರು?"

"ನಾನು ಸಾರ್ ಯಾಹು. ನಮಸ್ಕಾರ ಸಾ."

"ಏನ್ರಿ ಯಾಹೂ, ಈಚೆಗೆ ಫೋನ್ ಮಾಡ್ತೆಯಿಲ್ಲ."

"ಮಾಡೋ ಅಂತ ಸನ್ನಿವೇಶನೇ ಬರ್ಲಿಲ್ಲ ಸಾರ್. ನಿಮ್ಮ ರೈತ ಚೈತನ್ಯಯಾತ್ರೆ ತುಂಬ ಚೆನ್ನಾಗಿ ನಡೀತಾಯಿದೆ ಸಾರ್."

"ಕರ್ನಾಟಕದ ಜನ ಮತ್ತೆ ಈ ಯಡಿಯೂರಪ್ಪನ್ನ ಮುಖ್ಯಮಂತ್ರಿ ಮಾಡೇ ಮಾಡ್ತರೆ ಯಾಹೂ. ಇದನ್ನು ಬರದಿಟ್ಕಳಿ."

"ನಿಜ ಸಾರ್, ನೀವು ಹೋದ ಜಾಗದಲ್ಲಿ ಹಾಲಿ ಮುಖ್ಯಮಂತ್ರಿಗಿಂತ ಹೆಚ್ಚು ಜನ ಸೇರೋದನ್ನ ನಾನೇ ನೋಡಿದ್ದಿನಿ, ಆದ್ರೆ ಒಂದು ಸಮಸ್ಯೆ ಸಾರ್. ನಿಮ್ಮ ಸಭೆಗೆ ಬರೀ ಲಿಂಗಾಯತ್ರೆ ಬರತರೆ ಸಾರ್."

"ನೀವು ತಪ್ಪು ತಿಳಕೊಂಡಿದ್ದಿರಿ ಯಾಹು. ಈ ಯಡಿಯೂರಪ್ಪ ಯಾವತ್ತೂ ಜಾತಿ ರಾಜಕಾರಣ ಮಾಡಿದ್ದೋನಲ್ಲ."

"ದೇವರಾಣೆ ನಿಜ ಸಾರ್. ನೀವು ಜಾತಿ ರಾಜಕಾರಣ ಮಾಡೋರೆ ಆಗಿದ್ರೆ, ಇಷ್ಟೊತ್ತಿಗೆ ಕಲ್ಬುರ್ಗಿ ಕೊಲೆಗೆ ಗುಡುಗಿರತಿದ್ರಿ. ಆದ್ರೆ ಇವತ್ತಿಗೂ ನೀವು ಮಾತಾಡಿಲ್ಲ, ಅದೇ ಇನ್ಸ್‌ಪೆಕ್ಟರ್ ಮಲ್ಲಿಕಾರ್ಜುನ ಬಂಡೆ ಸತ್ತಾಗ ನಿಮ್ಮ ಶಡಕನೇ ಸತ್ತಂಗೆ ಅತ್ತಿದ್ರಿ. ಇನ್ನ ಡಿ.ಕೆ. ರವಿ ಆತ್ಮಹತ್ಯೆ ಮಾಡಿಕೊಂಡಾಗ ನಿಮ್ಮ ಚಿಕ್ಕಪ್ಪನ ಮಗ ತೀರಿಕೊಂಡಂಗೆ ಚಳವಳಿ ಮಾಡಿದ್ರಿ. ಅದೇ ನಿಜವಾದ ಶರಣ ಕಲ್ಬುರ್ಗಿ ಹಣೆಗೆ ಹಂತಕರು ಗುಂಡಿಟ್ಟಾಗ ಆ ಸುದ್ದಿ ನಿಮಗಿನ್ನೂ ತಿಳಿದಿಲ್ಲ ಅನ್ನಂಗಿದ್ದೀರಿ. ಜಾತ್ಯತೀತ ಮನಸು ಅಂದ್ರೆ ನಿಮ್ಮದು ಸಾರ್."

"ಕಲ್ಬುರ್ಗಿ ಹತ್ಯೆ ನಮಿಗೂ ನೋವುಂಟು ಮಾಡಿದೆ ಯಾಹೂ."

"ಮಾಡಿದೆ ಸಾರ್. ಆದ್ರು ಅರೆಬರೆ ಶರಣನೊಬ್ಬ ಬಿಜೆಪಿಗೆ ತಲೆ ಒಪ್ಪಿಸಿದಾಗ ಹತ್ಯೆ ಖಂಡಿಸೋದು ಕಷ್ಟ. ಅದೇ ನೀವಿನ್ನೂ ಕೆಜೆಪಿಲಿದ್ರೆ ಬಿಜೆಪಿ ಜನ್ಮ ಜಾಲಾಡತಿದ್ರಿ."

"ಕೆಜೆಪಿಲಿ ಇದ್ರೆ ನನಗೆ ಕಷ್ಟ ಆಗೋದು ಕಂಡ್ರಿ. ಯಾವಾಗ ಬಿಜೆಪಿಗೆ ನಾನು ಬೇಕು ಅನ್ನುಸ್ತೊ ಅದೇ ಟೈಮಿಗೆ ನಾನೂ ಹೋದೆ."

"ಸಾರ್ ನೀವು ವೀರಶೈವರೊ, ಲಿಂಗಾಯತ[...]"

"ಇದೇನ್ರಿ ಹಿಂಕೇಳ್ತೀರೀ. ನಾವು ಲಿಂಗಾ[...]"

"ಲಿಂಗಾಯತರಾಗಿದ್ದುಕೊಂಡು ಲಿಂಗಾಯ[...] ಕೊಲೆಯಾದಾಗ್ಲಿಂದ ಸುಮ್ಮನಿದ್ದಿರಲ್ಲ ಸಾರ್ ಅ[...]"

"ಅಲ್ರಿ ಆಗ್ಲೆ ಜಾತ್ಯತೀತ ಅಂತ ಹೊಗ[...] ಹಿಂಕೇಳ್ತಿರಿ. ಅದ್ಕೆ ಕಂಡ್ರಿ ನಿಮ್ಮ ಬುದ್ಧಿಜೀವಿಗಳ[...] ಅನ್ನದು."

"ಅಲ್ಲ ಸಾರ್, ನಮ್ಮ ಸಾಮಾನ್ಯ ತಿಳಿವ[...] ನಿಜವಾದ ಶರಣ ಬಸವಾನುಯಾಯಿ ಆಗಿ[...] ಅರೆಬರೆ ಅಥವಾ ಪುರೋಹಿತಶಾಹಿಗೆ ತಲೆ ಬ[...] ಬಿಜೆಪಿಯಾಗಿ ಅವರ ಅಜೆಂಡಗಳನ್ನ ಜಾ[...] ಒಡಾಡ್ತನೆ. ನೀವು ಅದೇತರ ಅಂತ."

"ರೀ, ರಾಜಕಾರಣಾನೆ ಬೇರೆ, ಧರ್ಮ, [...] ಅಂತ ತಿಳಕೊಂಡೋನು ಕಂಡ್ರಿ ನಾನು."

"ತಿಳಕಂಡ್ರೇನು ಬಂತು ಸಾರ್. ನಿಮ್ಮ [...] ಕೇಶವಕೃಪದ ಕಂಟ್ರೋಲ್ ರೂಮಲ್ಲಿರುತ್ತೆ. ಅ[...] ಕೇಳ್ತಿರಿ. ಯಾಕೆ ಅಂದ್ರೇ ನೀವು ಸ್ವತಂತ್ರವಾಗಿ [...] ಮಾಡಕ್ಕೆ ನಿಮ್ಮ ತಲೇಲಿ ಬಸವಧರ್ಮನೇ ಇ[...] ಸಾರ್?"

"ಇದನ್ನ ನಾನು ಒಪ್ಪಲ್ಲ ಯಾಹು. ಈ ಯ[...] ಮೊದಲಿಂದ ಕರ್ನಾಟಕದ ಹಿಂದು[...] ಅಲ್ಪಸಂಖ್ಯಾತ್ರು, ದಲಿತ್ರ ಬಗ್ಗೆ ಕಾಳಜಿ [...] ರಾಜಕಾರಣ ಮಾಡಿದೋನು."


"ಅಂತ ರಾಜಕಾರಣ ಮಾಡಕ್ಕೆ ಸಿದ್ದರಾ[...] ಸಾರ್. ಅವರು ಮಾಡದ್ನೆ ನೀವ್ಯಾಕ್ ಮಾ[...] ಮುಂದಾದ್ರು, ಬಸವಣ್ಣನ ರಾಜಕಾರಣ ಮಾ[...] ನಿಮ್ಮ ಜೊತೆ ಬರ್ತಿವಿ. ಈಗ್ಲು ನಿಮ್ಮನ್ನು ಬ[...]

...ಾಹಿತಿಗಳ ಬಂಡಾಯ ಮತ್ತು ಚೆಡ್ಡಿಗಳ ಕುತಂತ್ರ

...ಲವು ಸಾಹಿತಿಗಳ ಪ್ರಕಾರ ಅವರ ಬರಹಗಳಿಗೂ, ...ಮುಕ್ಕೂ ಸಂಬಂಧವೇ ಇರುವುದಿಲ್ಲ, ಇನ್ನೂ ಕೆಲವು ...ಗಳಿಗೆ ತಾವು ಬರೆಯುವುದೆಲ್ಲ ಶ್ರೇಷ್ಠ ಸಾಹಿತ್ಯ ...ಅಚಲ ನಂಬಿಕೆ ಇದ್ದರೂ ವಿಮರ್ಶಕರ ಪ್ರಕಾರ ...ಬರಹ ಕೋಮುವಾದಿ ಪಕ್ಷದ ಕರಪತ್ರಗಳಿಗೆ ... ಇಂತಹ ಎರಡು ತರಹದ ಸಾಹಿತಿಗಳು ಇವತ್ತು ...ದ್ಯಂತ ಆಗುತ್ತಿರುವ ವಿದ್ಯಮಾನಗಳಿಗೂ ತಮಗೂ ...ಧವೇ ಇಲ್ಲ ಎನ್ನುವಂತೆ ಸುಮ್ಮನಿದ್ದಾರೆ.

...ದರೆ ಯಾರ್‍ಯಾರು ತಮ್ಮ ನುಡಿ, ಚಿಂತನೆ ಮತ್ತು ...ಿ ಸೂಕ್ಷ್ಮ ಸಂವೇದನೆಗಳನ್ನು ಹೊಂದಿದ್ದಾರೋ, ...ವಾಗಿದ್ದಾರೋ, ಪ್ರಗತಿಪರವಾಗಿದ್ದಾರೋ, ತಮ್ಮ ... ವಿದ್ಯಮಾನಗಳಿಗೆ ಸ್ಪಂದಿಸುತ್ತಾರೋ ಅಂಥವರು ...ಸುನಾಮಿಯಂತೆ ಕೇಂದ್ರ ಸರ್ಕಾರವನ್ನು ಅಪ್ಪಳಿಸಿರುವ ...ಾಮೆ ಚಳವಳಿಯಲ್ಲಿ ಭಾಗಿಗಳಾಗಿದ್ದಾರೆ. ದೇಶದ ...ಸ್ಕೃತಿ ಪರಂಪರೆಯ ಬಗ್ಗೆ, ಅಭಿವ್ಯಕ್ತಿ ಸ್ವಾತಂತ್ರ್ಯದ ...ಳಜಿ ಹೊಂದಿರುವ ಸಾಹಿತಿಗಳು ತಮ್ಮ ನಡುವಿನ ...ಾಂತ್ಯ, ವರ್ಗ, ವಲಯ, ಇತ್ಯಾದಿ ಮಿತಿಗಳನ್ನೂ ... ಒಕ್ಕೊರಲಿನಿಂದ ತಮ್ಮ ಪ್ರತಿರೋಧವನ್ನು ...ಿಸಿದ್ದಾರೆ.

...ಿಯ ಲೇಖಕ ಎಂ.ಎಂ.ಕಲಬುರ್ಗಿಯವರ ...ತಕರನ್ನು ಹಿಡಿಯುವಲ್ಲಿ ವಿಫಲವಾಗಿರುವ ಕೇಂದ್ರ ...ನ ವಿರುದ್ಧದ ಅಸಮಾಧಾನದಿಂದ ಶುರುವಾದ ...ವಳಿ ಈಗ ದಾದ್ರಿಯಲ್ಲಿ ಅಮಾಯಕ ಮುಸಲ್ಮಾನನ್ನು ...್ದು ಉತ್ತರ ಪ್ರದೇಶದಲ್ಲಿ ದೇವಸ್ಥಾನವನ್ನು ಪ್ರವೇಶಿಸಿದ



ಕಾರಣಕ್ಕೆ ದಲಿತನೊಬ್ಬನನ್ನು ದಹಿಸಿದ್ದು, ಮುಂಬೈಯಲ್ಲಿ ಸುಧೀಂದ್ರ ಕುಲಕರ್ಣಿಯವರ ಮುಖಕ್ಕೆ ಮಸಿ ಬಳಿದದ್ದು, ಎಲ್ಲೆಡೆ ಹೆಚ್ಚುತ್ತಿರುವ ಕೋಮುವಾದ, ಅಸಹಿಷ್ಣುತೆ, ಇತ್ಯಾದಿಗಳೆಲ್ಲವನ್ನೂ ತನ್ನ ಒಡಲಲ್ಲಿ ಹಾಕಿಕೊಂಡು ಮುಂದುವರೆದಿದೆ.

ಭಾರತದ ಇತಿಹಾಸದಲ್ಲಿ ಮಾತ್ರವಲ್ಲ, ಬೇರೆ ಇನ್ನಾವುದೇ ದೇಶದಲ್ಲೂ ಸಾಹಿತಿಗಳಿಂದ ಇಂಥದ್ದೊಂದು ಸಾಮೂಹಿಕ ತರಹದ ಪ್ರತಿರೋಧ ವ್ಯಕ್ತವಾಗಿದ್ದು ಇರಲಿಕ್ಕಿಲ್ಲ. ಸಾರಸ್ವತ ಲೋಕದ ಪ್ರತಿಭಟನೆಯೊಂದಿಗೆ ಈಗ ಕಲಾವಿದರು ಮತ್ತು ಪತ್ರಕರ್ತರೂ ಕೈಜೋಡಿಸಿದ್ದಾರಲ್ಲದೆ ನೂರಕ್ಕಿಂತಲೂ ಹೆಚ್ಚಿನ ದೇಶಗಳ ಸಾಹಿತಿಗಳು ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ.

ಭಾಷೆ, ಜಾತಿ, ಧರ್ಮ, ಸಂಸ್ಕೃತಿ, ರಾಜ್ಯ, ದೇಶ ಎಲ್ಲವನ್ನೂ ಮೀರಿ ವ್ಯಕ್ತವಾಗುತ್ತಿರುವ ಈ ಪ್ರತಿರೋಧದ ತೀವ್ರತೆ ಮತ್ತು ವ್ಯಾಪ್ತಿ ಸಹಜವಾಗಿಯೇ ಚೆಡ್ಡಿಗಳು ಥರಗುಟ್ಟುವಂತೆ ಮಾಡಿದೆ. ಹಾಗಾಗಿ ಅವರು ಈಗ ಈ ಚಳವಳಿಯಲ್ಲಿ ಭಾಗಿಯಾಗಿರುವವರನ್ನು, ಅವರ ಉದ್ದೇಶವನ್ನು ಮತ್ತು ಕಾರ್ಯ ಹಾಗೂ ಕೃತಿಗಳನ್ನು ತರಹೇವಾರಿ ರೀತಿಯಲ್ಲಿ ನಗಣ್ಯಗೊಳಿಸಲು ಯತ್ನಿಸುತ್ತಿದ್ದಾರೆ. ಅವರು ಅಳವಡಿಸುತ್ತಿರುವ ತರ್ಕಗಳು ಹೇಗಿವೆ ಎಂದು ನೋಡೋಣ.





ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಕೇಂದ್ರ ಸಚಿವ ಅರುಣ್ ಜೇಟ್ಲಿ ಪ್ರಕಾರ ವಿವಿಧ ಸರ್ಕಾರಿ ಸಂಸ್ಥೆಗಳು ಕೊಟ್ಟಿರುವ ಪ್ರಶಸ್ತಿಗಳನ್ನು ಹಿಂದಿರುಗಿಸುತ್ತಿರುವ ಮತ್ತು ಅಕಾಡೆಮಿ ಸ್ಥಾನಗಳಿಗೆ ರಾಜೀನಾಮೆ ನೀಡುತ್ತಿರುವ ಸಾಹಿತಿಗಳು ಬೇಕಂತಲೇ ಮೋದಿ ಸರ್ಕಾರದ ವಿರುದ್ಧ ಇಂತಹದ್ದೊಂದು 'ಉತ್ಪಾದಿತ ಚಳವಳಿ'ಯನ್ನು ಹುಟ್ಟುಹಾಕಿದ್ದಾರಂತೆ.

ಅರುಣ್ ಜೇಟ್ಲಿ ತುಂಬಾ ಸ್ಮಾರ್ಟ್ ವ್ಯಕ್ತಿ. ಅದಕ್ಕಾಗಿಯೇ ಪ್ರಗತಿಪರರಿಗೆ ಮತ್ತು ಬುದ್ಧಿಜೀವಿಗಳಿಗೆ ಇಷ್ಟವಾಗುವ ಚಿಂತಕ ನೋಮ್ ಚಾಮ್ಸ್ಕಿ ಅವರು ಹುಟ್ಟುಹಾಕಿದ್ದ 'ಉತ್ಪಾದಿತ ಒಪ್ಪಿಗೆ' ಎಂಬ ಸಿದ್ಧಾಂತವನ್ನೇ ಹೀಗೆ ತಲೆಕೆಳಗು ಮಾಡಲು ಯತ್ನಿಸಿದ್ದಾರೆ. ಚಾಮ್ಸ್ಕಿ ಅವರ 'ಉತ್ಪಾದಿತ ಒಪ್ಪಿಗೆ' ಬಗ್ಗೆ ಸರಳವಾಗಿ ಹೇಳುವುದಾದರೆ ಅದು ಬಂಡವಾಳಶಾಹಿಗಳು ತಮ್ಮ ಸ್ವಹಿತಾಸಕ್ತಿಗಾಗಿ ವ್ಯವಸ್ಥೆಯ ಪರವಾಗಿ ಮಾಧ್ಯಮಗಳನ್ನು ದುರುಪಯೋಗಮಾಡಿಕೊಂಡು ಜನರನ್ನು ಮೋಸಗೊಳಿಸುವ ಕಾರ್ಯತಂತ್ರ.

ಆದರೆ ಭಾಷೆ, ರಾಜ್ಯ, ವರ್ಗ ತರಹದ ಗಡಿಗಳನ್ನೂ ಮೀರಿ ತಮ್ಮ ಪ್ರತಿರೋಧವನ್ನು ವ್ಯಕ್ತಪಡಿಸಿರುವ ಭಾರತದ ಲೇಖಕರ ನಡುವೆ ಯಾವುದೇ ನೇರ ಸಂಪರ್ಕ ಸೇತುವೆ ಇಲ್ಲ. ಉದಾಹರಣೆಗೆ ನಮ್ಮ ವೀರಣ್ಣ ಮಡಿವಾಳರ ಎಂಬ ಯುವ ಕವಿಯು ನಯಂತಾರ ಸೆಹಗಲ್ ಅವರ ಕೃತಿಗಳನ್ನು ಓದಿರಲಿಕ್ಕಿಲ್ಲ; ಹಾಗೆಯೇ ಕನ್ನಡಿಗರಾದರೂ ಇಂಗ್ಲಿಷ್ ಲೇಖಕಿಯಾಗಿರುವ ಶಶಿ ದೇಶಪಾಂಡೆ ಅವರಿಗೆ ಕುಂ. ವೀರಭದ್ರಪ್ಪನವರ ಪ್ರಶಸ್ತಿ ವಿಜೇತ ಕಾದಂಬರಿಗಳ ಬಗ್ಗೆ ಗೊತ್ತಿರಲಿಕ್ಕಿಲ್ಲ; ಹಿಂದಿ ಲೇಖಕ ಉದಯ ಪ್ರಕಾಶ್ ಅವರ ಕೃತಿಗಳನ್ನು ನಮ್ಮ ಚಂಪಾ ಅವರೂ ಓದಿರಲಿಕ್ಕಿಲ್ಲ. ಅಂದರೆ ಇವರೆಲ್ಲರೂ ಸ್ವಯಂ ಪ್ರೇರಣೆಯಿಂದ ಪ್ರತಿಭಟಿಸಿದ್ದಾರಲ್ಲದೆ ಅವರು 'ಉತ್ಪಾದಿತ ಚಳವಳಿ' ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಂಡವರಲ್ಲ.

ಬಿಜೆಪಿಯ ಹಿರಿಯ ನಾಯಕ ವಾಮನಾಚಾರ್ಯ ಪ್ರಕಾರ "ಈ ಚಂಪಾ, ಕುಂವೀ ಅವರ ಬರಹಗಳನ್ನು ಅದೆಷ್ಟು ಜನ ಓದಿದ್ದಾರೆ? ಆದ್ದರಿಂದ ಅವರ ಈ ಬಂಡಾಯದಿಂದ ಏನೂ ಆಗಲ್ಲ."

ಹೌದಪ್ಪ, ಇವತ್ತಿಗೂ ನಮ್ಮ ರಾಜ್ಯದಲ್ಲಿ ಚಂಪಾ ಅಂದರೆ ಅದ್ಯಾವುದೋ ಸುಂದರ ಯುವತಿ ಇರಬೇಕು ಎಂದು ಭಾವಿಸುವವರು ಇದ್ದಾರೆ. ಹಾಗೆಯೇ ಎಲ್ಲರೂ ಕುಂವೀ ಅವರ ಕೃತಿಗಳನ್ನು ಓದಿಲ್ಲ ನಿಜ. ಆದರೆ ಇವತ್ತು ಸಾಹಿತಿಗಳು ಕಲಬುರ್ಗಿಯವರ ಹತ್ಯೆಯನ್ನು ಖಂಡಿಸುತ್ತಾ, ಹೆಚ್ಚುತ್ತಿರುವ ಕೋಮುವಾದ, ಅನ್ಯಧರ್ಮೀಯರ ಬಗ್ಗೆ ಹಬ್ಬುತ್ತಿರುವ ಅಸಹನೆ, ಲಂಗುಲಗಾಮಿಲ್ಲದೆ ಬೆಳೆಯುತ್ತಿರುವ ಮೌಢ್ಯ, ನಮ್ಮ ದೇಶದ ಸೌಹಾರ್ದ ಪರಂಪರೆಯನ್ನು ನಾಶಗೊಳಿಸುತ್ತಿರುವ ಪ್ರಕ್ರಿಯೆಗಳನ್ನು ವಿರೋಧಿಸಿ ಇವರೆಲ್ಲರೂ ಕಾರ್ಯಪ್ರವೃತ್ತರಾಗಿದ್ದರಿಂದ ಅವರ ಪುಸ್ತಕಗಳು ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾಗದಿರುಬಹುದು. ಆದರೆ ಸಾಮಾನ್ಯ ಜನರು "ಹೌದಲ್ಲವಾ? ನಮ್ಮ ದೇಶದಲ್ಲಿ ಹೀಗೆಲ್ಲ ಆಗಬಾರದಲ್ಲವಾ? ಇದರ ಹಿಂದಿರುವವರು ಯಾರು, ಯಾಕೆ ಹೀಗೆಲ್ಲ ಆಗುತ್ತಿದೆ" ಎಂದು ಚಿಂತಿಸುವಂತೆ ಖಂಡಿತಾ ಮಾಡಿದ್ದಾರೆ. ಅವರ ಅಸಲಿ ಉದ್ದೇಶ ಅದೇ ಆಗಿದ್ದರಿಂದ ಅವರು ತಮ್ಮ ಗುರಿ ಮುಟ್ಟುವಲ್ಲಿ ಯಶಸ್ವಿಯೂ ಆಗಿದ್ದಾರೆ. ಅದನ್ನು ವಾಮನಾಚಾರ್ಯ ತರಹದವರು ಒಪ್ಪಲು ಸಿದ್ಧರಿಲ್ಲ ಅಷ್ಟೇ.

ಚೆಡ್ಡಿಗಳ 'ರಾಷ್ಟ್ರ ಅಧ್ಯಾಪಕ' ಎಸ್.ಎಲ್.ಭೈರಪ್ಪ ಪ್ರಕಾರ ಈ ಸಾಹಿತಿಗಳು ಪ್ರಚಾರಪ್ರಿಯರು. ಅದಕ್ಕೇ ಅವರು ಹೀಗೆಲ್ಲ ಮಾಡುತ್ತಿದ್ದಾರೆ.

ಇವತ್ತು ನಮ್ಮ ದೇಶದಲ್ಲಿ ಎಂತಹ ಭಯಂಕರ ವಾತಾವರಣವನ್ನು ನಿರ್ಮಿಸಲಾಗಿದೆ ಎಂದರೆ ಇಲ್ಲಿ ಮಹಿಷಾಸುರನ ಪರ ದನಿ ಎತ್ತಿದರೆ ಯೋಗೇಶ್ ಮಾಸ್ಟರ್ ತರಹ ಮುಖಕ್ಕೆ ಮಸಿ ಬಳಿಸಿಕೊಳ್ಳಬೇಕಾಗುತ್ತದೆ. ಮೌಢ್ಯವನ್ನು ವಿರೋಧಿಸಿದರೆ ಧಾಬೋಲ್ಕರ್ ತರಹ ರಸ್ತೆಯಲ್ಲಿ ಸಾವಿಗೀಡಾಗಬೇಕಾಗುತ್ತದೆ. ಹಿಂದೂ ಧರ್ಮವನ್ನು ಟೀಕಿಸಿದರೆ ಕಲಬುರ್ಗಿ ತರಹ ಗುಂಡೇಟಿಗೆ ಬಲಿಯಾಗಬೇಕಾಗುತ್ತದೆ. ಪರಿಸ್ಥಿತಿ ಹೀಗಿರುವಾಗ ಯಾಕೆ ಯಾರಾದರೂ ಪುಕ್ಕಟೆ ಪ್ರಚಾರಕ್ಕೆಂದು "ಇದೋ ಇಲ್ಲಿದೆ ನನ್ನ ರಾಜೀನಾಮೆ. ನಿಮ್ಮನ್ನು ನಾನು ವಿರೋಧಿಸುತ್ತೇನೆ" ಎಂದು ಹೇಳಿ ಕೋಮುವಾದಿಗಳ ಕೆಂಗಣ್ಣಿಗೆ ತಮ್ಮನ್ನು ತಾವೇ ಒಡ್ಡಿಕೊಳ್ಳುತ್ತಾರೆ?

ಇನ್ನು ಹಲವು ಚೆಡ್ಡಿಗಳು "ಸಲ್ಮಾನ್ ರಶ್ದಿ ಅವರ ಪುಸ್ತಕವನ್ನು ರಾಜೀವ್ ಗಾಂಧಿ ಸರ್ಕಾರ ನಿಷೇಧಿಸಿದಾಗ ಇವರೆಲ್ಲರು ಏನು ಮಾಡುತ್ತಿದ್ದರು? ತಸ್ಲೀಮಾ ನಸ್ರೀನ್ ಭಾರತ ಬಿಟ್ಟು ಹೋಗುವಂತೆ ಮಾಡಿದಾಗ ಇವರೆಲ್ಲ ಯಾಕೆ ಸುಮ್ಮನಿದ್ದರು?" ಎಂಬ ವಿತಂಡವಾದವನ್ನು ಮಂಡಿಸುತ್ತಿದ್ದಾರೆ.

ವಾಸ್ತವ ಏನೆಂದರೆ ಸಲ್ಮಾನ್ ರಶ್ದಿ ಅವರ 'ಸಟಾನಿಕ್ ವರ್ಸಸ್' ಪುಸ್ತಕವನ್ನು ನಿಷೇಧಿಸಿದಾಗ ಅದನ್ನು ವಿರೋಧಿಸಿ ಭಾರತದ ವಿವಿಧ ಲೇಖಕರು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಒಂದು ಇಡೀ ಪುಟದ ಜಾಹೀರಾತನ್ನು ಪ್ರಕಟಿಸಿದ್ದರು. ಹಾಗೆಯೇ ಲಂಕೇಶರ ಪ್ರಕಾರ ತಸ್ಲೀಮಾ ನಸ್ರೀನ್ ಕೆಟ್ಟ ಲೇಖಕಿಯಾಗಿದ್ದರೂ ಅವರು ಎಂದೂ ಆಕೆಯ ಕೃತಿಗಳನ್ನು ನಿಷೇಧಿಸಿರಿ ಎಂದಿರಲಿಲ್ಲ.

ಅಷ್ಟು ಮಾತ್ರವಲ್ಲ ಇದೇ ಭೈರಪ್ಪನವರ 'ಆವರಣ' ಕೃತಿಯ ಬಗ್ಗೆ ಪ್ರಗತಿಪರರಲ್ಲಿ ತುಂಬಾ ಅಸಹನೆ ಮೂಡಿತ್ತು, ಆದರೆ ಯಾರೊಬ್ಬರೂ ಅದನ್ನು ನಿಷೇಧಿಸಿ ಎನ್ನಲಿಲ್ಲ, ಬದಲಾಗಿ ಅದನ್ನು ವಿಮರ್ಶಿಸಿ 'ಆವರಣ ಎಂಬ ವಿ-ಕೃತಿ' ಎಂಬ ಪುಸ್ತಕವನ್ನೇ ಪ್ರಕಟಿಸಿದೆವು. ಇತ್ತೀಚೆಗೆ ಚೆಡ್ಡಿ ಬಳಗದವನೇ ಒಬ್ಬ 'ವಾಲ್ಮೀಕಿ ಯಾರು' ಎಂಬ ಕುಚೋದ್ಯದ ಪುಸ್ತಕವನ್ನು ಪ್ರಕಟಿಸಿದಾಗ ಅದನ್ನು ವಾಲ್ಮೀಕಿ ಸಮುದಾಯದವರು ವಿರೋಧಿಸಿದ್ದರು. ಪರಿಣಾಮವಾಗಿ ಸರ್ಕಾರ ಅದರ ಮೇಲೆ ನಿಷೇಧ ಹೇರಿತು. ಆ ನಿಷೇಧವನ್ನು ವಿರೋಧಿಸಿ ಈ ಪತ್ರಿಕೆಯಲ್ಲೇ ಒಂದು ಬರಹ ಪ್ರಕಟಗೊಂಡಿತ್ತಲ್ಲದೆ, ನಿಷೇಧವನ್ನು ತೆರವುಗೊಳಿಸಿದಾಗ ಅದನ್ನೂ ಸ್ವಾಗತಿಸಿದ್ದೆವು.

ಇಂತಹ ಕ್ರಿಯಾಶೀಲ ಪ್ರತಿರೋಧದಲ್ಲಿ ನಂಬಿಕೆ ಹೊಂದಿರದ ಹಿಂದೂತ್ವವಾದಿಗಳಿಗೆ ತಸ್ಲೀಮಾ ಯಾಕೆ ಇಷ್ಟ ಆಗುತ್ತಾಳೆಂದರೆ ಆಕೆ ಮುಸಲ್ಮಾನರ ಮೂಲಭೂತವಾದವನ್ನು ವಿರೋಧಿಸುವುದರಿಂದ. ಹಾಗೊಮ್ಮೆ ಚೆಡ್ಡಿಗಳಿಗೆ ತಸ್ಲೀಮಾ ಸೇರಿದಂತೆ ಎಲ್ಲಾ ಬರಹಗಾರರ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ನಿಜವಾಗಲೂ ನಂಬಿಕೆ ಇದ್ದಿದ್ದರೆ ಅವರು ಯಾಕೆ ತಮಿಳು ಲೇಖಕ ಪೆರುಮಾಳ್ ಮುರುಗನ್ ಅವರಿಗೆ ಬೆದರಿಕೆ ಒಡ್ಡಿ ಅವರು "ಲೇಖಕ ಪೆರುಮಾಳ್ ತೀರಿಕೊಂಡ" ಎಂದು ಘೋಷಿಸುವಂತೆ ಮಾಡುತ್ತಿದ್ದರು?

ಈಗ ರಾಜೀನಾಮೆ ಸುನಾಮಿಯಲ್ಲಿ ಭಾಗಿಯಾಗಿರುವ ಬರಹಗಾರರಿಗೆ ಮತ್ತು ಇತರರಿಗೆ ರಾಜಕೀಯ ಉದ್ದೇಶ ಇರುವುದು ಸುಳ್ಳಲ್ಲ, ಆದರೆ ರಾಜಕೀಯ ಎಂದರೆ ಬರೀ ಚುನಾವಣಾ ರಾಜಕೀಯವಲ್ಲ, ಜಾತ್ಯತೀತತೆ, ಸೌಹಾರ್ದತೆ, ಸಮಾನತೆ, ಸಹಿಷ್ಣುತೆ ಎಂಬುದೆಲ್ಲವೂ ರಾಜಕೀಯ ಸಿದ್ಧಾಂತಗಳೇ. ಅಂತಹ ಸಿದ್ಧಾಂತಗಳಿಗೆ ಬದ್ಧವಾಗಿರುವ, ಈ ದೇಶದ ನೆಮ್ಮದಿಗೆ ಕಂಟಕಗಾತೊಟ್ಟಿರುವ, ಎಲ್ಲಾ ಜನರ ಒಳಿತಿನ ಬಗ್ಗೆ ಕಾಳಜಿ ಹೊಂದಿರುವ ಬರಹಗಾರರು ಮತ್ತು ಇತರರು ಇವತ್ತು ಕೋಮುವಾದಿ ಶಕ್ತಿಗಳ ವಿರುದ್ಧ ಸಿಡಿದೆದ್ದಿದ್ದಾರೆ. ಅವರೆಲ್ಲರೊಂದಿಗೆ ನಾವು ಇದ್ದೇ ಇರುತ್ತೇವೆ.

...ತ್ತೇರಿ

▸ ಯಾಹೂ

...ಂಡಿಲ್ಲ ಸಾರ್."

...ದು ನನಿಗೂ ಗೊತ್ತು. ಅದ್ಕೆ ರೈತ ಚೈತನ್ಯ ಯಾತ್ರೆ ...ಂತರ ಈ ಯಡಿಯೂರಪ್ಪನ ಶಕ್ತಿ ಏನು ಅಂತ ...ತ್ತೀನಿ."

...ಮ್ಮ ರಾಜ್ಯ ಭ್ರಷ್ಟ ಮುಖ್ಯಮಂತ್ರಿನ ಎರಡನೇ ...ಸ್ವೀಕರಿಸಿಲ್ಲವಂತಲ್ಲಾ ಸಾರ್?"

...ದ್ಯಂಗೆ ಸ್ವೀಕರಿಸಲ್ಲ ನಾನು ನೋಡ್ತಿನಿ."

...ಂತ ಛಾಲೇಂಜ್ ಕೇಳಕ್ಕೆ ನಮಗೆ ತುಂಬ ಇಷ್ಟ ...ಈಗ್ಲೆ ಬಿಜೆಪಿಗೆ 'ಮುಂದೆ ನನ್ನನ್ನ ಮುಖ್ಯಮಂತ್ರಿ ...ಓ ಇಲ್ವೋ' ಅಂತ ಪರಿತ್ಯಾಕ್ತಿ ಕುರ್ಚಿ ಸಮಸ್ಯೆ ...ಿಕೊಳ್ಳಿ."

...ದಕ್ಕೋಸ್ಕರವೇ ರೈತ ಚೈತನ್ಯ ಯಾತ್ರೆ, ...ಮಾಡೋದು."

...ನ್ನೊಂದು ಪರ್ಸನಲ್ ವಿಷಯ ಸಾರ್, ಶೋಭಕ್ಕ ... ಕೂದ್ಲು ಬಗ್ಗೆ ಮಾತಾಡಿದಾರೆ. ಮೋದಿ ಕೂದ್ಲ ...ಾಗ ನೋಡಕ್ಕೆ ಅವಕಾಶ ಮಾಡಿಕೊಟ್ಟಿದ್ರಿ ಸಾರ್?"

..., ಅವಕಾಶ ಮಾಡಿಕೊಡದೇನ್ರಿ? ನೋಡಿದ್ರೆ ...

...ಗ್ಸೆ ಸರಿ ಸಾರ್. ಈಗ ನಿಮ್ಮ ಬೂಕನಕೆರೆ, ... ಹೇಟೆ ಕಡೆ ಕೂದ್ಲು ಅಂತ ತುಚ್ಛವಾಗಿ ...ಿದಾಗ ಬೇರೆ ಅರ್ಥನೆ ಪಡಕೊಳ್ಳುತ್ತೆ, ಆ ...ಲ್ಲೇ ಕರ್ನಾಟಕದ ಜನ ಶೋಭಕ್ಕನ ಮಾತನ್ನು ...ಿದ್ದಾರೆ. "ಇದಕ್ಕೇನೇಳ್ತೀರಿ?"

... ರಾಷ್ಟ್ರದ ಪ್ರಧಾನಿ ಎದುರಿಗೆ ಮುಖ್ಯಮಂತ್ರಿ, ಏನು ಮಹಾ ಅನ್ನಕ್ಕೋಸ್ಕರ ಶೋಭ ಹಾಗಂದಿರಬಹುದು."

"ಅದ್ಯಂಗೆ ಸಾರ್? ಮುಖ್ಯಮಂತ್ರಿಯಾಗಿದ್ದವನ ಕೂದ್ಲು ಪ್ರಧಾನಿಯಾದ ಕೂಡ್ಲೆ ಬದ್ಲಾಯ್ತವ? ಬೆಳ್ಳಗಾಗಬಹುದಷ್ಟೆ."

"ಒಳ್ಳೆ ಕೂದ್ಲಿಡಕಂಡ್ರಲ್ರೀ ನೀವೂ. ಬೇರೆ ಸುದ್ದಿ ಇಲವ?"

"ಈ ಸುದ್ದಿ ಮೂಲನೆ ಶೋಭಕ್ಕಲವ ಸಾರ್. ಕೂದಲು ಅಂತ ಅವರು ಒಟ್ಟಾಸಿ ಬಳಸಿರಬಹುದು. ಆದ್ರೆ ಕೂದ್ಲೆಲ್ಲ ಒಂದೇ ಅಲ್ಲ, ತಲೆ ತುಂಬ ಇರವುಕೆ ಕೂದ್ಲು ಅಂತಿವಿ. ನಮ್ಮ ದೇಹದಲ್ಲಿ ಹರಡಿರವುನ್ನ ರೋಮ ಅಂತಿವಿ. ಕಂಕುಳಲ್ಲಿರವುಕ್ಕೆ ಕಂಕಳ ಕೂದ್ಲು ಅಂತಿವಿ. ಅದೇ ರೀತಿ ಕಣ್ಣು ಸುತ್ತ ಇರವುಕ್ಕೆ ರೆಪ್ಪೆ ಅಂತಿವಿ. ಒಕ್ಕಳದಿಂದ ಕೆಳಗೋದಂಗೆ ಸುಮಾರು ಮೂರು ಪದ ಇವೆ. ಅವನ್ನ ಉಚ್ಚರಿಸಿದ್ರೆ ಅಶ್ಲೀಲ ಪದವಾಗೋದ್ರಿಂದ ಟೋಟಲ್ಲಿ ಕೂದ್ಲು ಅಂತಿವಿ. ಇವನ್ನ ಬಳಸೊ ಸಂದರ್ಭನೂ ಸೂಕ್ಷ್ಮವಾಗಿರುತ್ತೆ, ಮತ್ತೆ ಪ್ರಚೋದನಾತ್ಮಕವಾಗಿರುತ್ತೆ, ಆದ್ದರಿಂದ ಮೋದಿ ಕೂದಲನ್ನ ನೋಡಿ, ಸಿದ್ದರಾಮಯ್ಯನ ಕೂದಲನ್ನು ನೋಡಿದೋರು ಓಲಿಕೆ ಮಾಡಿ ಮಾತನಾಡಿದ್ರೆ ಸರಿ, ಯಾವ ತಕರಾರೂ ಇಲ್ಲ, ಆದ್ರೆ ಒಬ್ಬನ ಕೂದಲಿಗೆ ಇನ್ನೊಬ್ಬನ ವ್ಯಕ್ತಿತ್ವವನ್ನು ಜಮಾ ಮಾಡಿದಾಗ, ಅದೂ ಹೆಣ್ಣುಮಗಳು ಮಾಡಿದಾಗ, ಆ ಹೆಣ್ಣು ಮಗಳ ವಾರಸುದಾರರನ್ನ ವಿಚಾರಿಸೋದು ನಮ್ಮ ಕರ್ತವ್ಯ."


"ಈ ಸಿದ್ದರಾಮಯ್ಯ ಗಾಂಧಿ ಹುಟ್ಟಿದ ನಾಡಲ್ಲಿ ಮೋದಿ ಹುಟ್ಟಬಾರದಿತ್ತು ಅಂತ ಅನ್ನದು ಸರಿಯೇನ್ರಿ."

"ತಪ್ಪು ಸಾರ್. ಹುಟ್ಟಬಾರದು ಅನ್ನಕ್ಕೆ ಇವುರ್‍ಯಾರು? ಅಂತ ಪ್ರಶ್ನೆಯ ಹುಟ್ಟಿಸಿದೋನಿಗೂ ಹಾಕಕ್ಕಾಗಲ್ಲ. ಹುಟ್ಟಿದಾಗ ಬಂದಿದ್ದು ಸತ್ತಾಗೋಯ್ತು ಅಂತ ನಮ್ಮಳ್ಳಿ ಕಡೆ ಗಾದೆಯಂಗೆ, ಮೋದಿನ ಕಡೆವರಿಗೂ ಸಯಿಸ್ಕೋಬೇಕು ಅಷ್ಟೆ. ಶಿಕಾರಿಪುರದ ಹುಚ್ಚರಾಯಸ್ವಾಮಿ ಜಾಗದಲ್ಲಿ ಯಡಿಯೂರಪ್ಪ ಹುಟ್ಟಬಾರದಿತ್ತು ಅಂದ್ರೆ ಸರಿನ ಸಾರ್."

"ನಾ ಶಿಕಾರಿಪುರದಲ್ಲಿ ಹುಟ್ಟಲಿಲ್ಲ ಕಂಡ್ರಿ, ಬೂಕನಕೆರೆಯಿಂದ ಅಲ್ಲಿಗೋದೆ ಅಷ್ಟೆ."

"ಥೂತ್ತೇರಿ!!!"

ಪೊಲೀಸು ಧೀರ ತಾಳ್ಮೆಯ ತೋರ



ಕೇವಲ ಮೂರು ವರ್ಷಗಳ ಅವಧಿಯೊಳಗೆ ಮೂವರು ಖಾಕಿ ವೀರರನ್ನು ಕಳಕೊಂಡ ಇಲಾಖೆ ಕಣ್ಣೀರಲ್ಲಿ ಮುಳುಗಿದೆ. ವಿಷ ಕುಡಿದವನಿಗಷ್ಟೇ ಹೊಟ್ಟೆ ಸಂಕಟ ಅರ್ಥವಾಗಲು ಸಾಧ್ಯ ಎಂಬಂತೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಓಂಪ್ರಕಾಶ್ ಹತ ಎಸ್.ಐ. ಜಗದೀಶ್ ಹತ್ಯೆಯನ್ನು ಕೊಲೆ ಎನ್ನುವುದೇ ಅಸಂಬದ್ಧ. ಗಡಿಕಾಯುವ ಸೈನಿಕ ಸತ್ತರೆ ಯಾರಾದರೂ ಅದನ್ನು ಕೊಲೆ ಎನ್ನುತ್ತಾರಾ? ದೇಶ ಕಾಯುವ ಯೋಧ ಯುದ್ಧದಲ್ಲಿ ಮೃತಪಟ್ಟರೆ ಹೇಗೆ ಆತನನ್ನು ನಾವೆಲ್ಲ ಹುತಾತ್ಮ ಎನ್ನುತ್ತೇವೋ ಅದೇ ರೀತಿ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಮೃತನಾದ ಪೊಲೀಸ್ ಅಧಿಕಾರಿಯನ್ನೂ ಹುತಾತ್ಮ ಎಂದೇ ಸಂಬೋಧಿಸಬೇಕು....!

ಡಿಜಿಪಿ ಓಂಪ್ರಕಾಶ್ ಮಾತನ್ನು ಒಪ್ಪಬೇಕಾದದ್ದೆ. ಖತರ್‌ನಾಕ್ ಕಳ್ಳರಿಬ್ಬರ ಬೆನ್ನತ್ತಿದ ದೊಡ್ಡಬಳ್ಳಾಪುರ ನಗರ ಪೊಲೀಸ್ ಠಾಣೆಯ ಎಸ್‌ಐ ಎಸ್. ಜಗದೀಶ್ ಕಳೆದ ಮೂರು ವರ್ಷಗಳಿಂದೀಚೆಗೆ ಹತನಾದ ರಾಜ್ಯದ ಮೂರನೇ ಸಬ್‌ಇನ್ಸ್‌ಪೆಕ್ಟರ್!

ಇಲ್ಲಿಗೆ ಮೂರು ವರ್ಷದ ಹಿಂದೆ ಅಂದರೆ 2013 ರ ಜನವರಿ 27 ರಂದು ತನಗೆ ರಜೆ ಕೊಡಲಿಲ್ಲ ಎಂಬ ಒಂದೇ ಕಾರಣಕ್ಕೆ ಅದೇ ಠಾಣೆಯ ಪೇದೆಯೊಬ್ಬನ ಗುಂಡಿಗೆ ಬಲಿಯಾದ ಇದೇ ದೊಡ್ಡಬಳ್ಳಾಪುರ ತಾಲೂಕು ರಾಜಾನುಕುಂಟೆ ಪೊಲೀಸ್ ಠಾಣೆಯ ನಿಷ್ಠುರಿ ಎಸ್.ಐ. ವಿಜಯ್‌ಕುಮಾರ್ ಈ ಹುತಾತ್ಮರ ಸಾಲಿನ ಮೊದಲ ಹೆಸರಾದರೆ ಎರಡನೇ ವ್ಯಕ್ತಿ ಮಲ್ಲಿಕಾರ್ಜುನ ಬಂಡೆ. ವಿಜಯ್‌ಕುಮಾರ್ ಕೊಲೆಯಾಗಿ ಹೆಚ್ಚೂಕಮ್ಮಿ ಒಂದು ವರ್ಷಕ್ಕೆ ಸರಿಯಾಗಿ ಕೊಲೆಯಾದದ್ದು ಕಲಬುರ್ಗಿಯ ಪಿಎಸ್‌ಐ ಬಂಡೆ. ಅದೂ ಖದೀಮ ರೌಡಿಯೊಬ್ಬನ ಗುಂಡಿಗೆ ಬಲಿಯಾಗಿ. ಒಬ್ಬ ತನ್ನ ಸಹೋದ್ಯೋಗಿಯ ಕೈಯಿಂದಲೇ ಹತನಾದ ಎಸ್‌ಐ. ಮತ್ತೊಬ್ಬ ಮುಂಬಯಿ ಮೂಲದ ಮುಸ್ಲಿಂ ರೌಡಿಯೊಬ್ಬನ ಕೈಗೆ ತನ್ನದೇ ಸೊಂಟದಲ್ಲಿದ್ದ ರಿವಾಲ್ವರ್ ಕೊಟ್ಟು ಗುಂಡು ತಿಂದ ಎಸ್‌ಐ.

ತಲೆ ಗಟ್ಟಿಯೆಂದು.....

ಈಗ ಅಂದರೆ 2015 ಅಕ್ಟೋಬರ್ 16ರ ಶುಕ್ರವಾರ ಅಪರಾಹ್ನ ಹನ್ನೊಂದೂವರೆಯ ಹೊತ್ತಿಗೆ ತಾನೇ ಬೆನ್ನಟ್ಟಿದ್ದ ಮನೆಗಳ್ಳನೊಬ್ಬನಿಂದ ಹತನಾದ ಸಬ್ ಇನ್ಸ್‌ಪೆಕ್ಟರ್ ಜಗದೀಶ್ ಹತ್ಯೆಗೂ ವರ್ಷದ ಹಿಂದಷ್ಟೇ ಕೊಲೆಯಾದ ಎಸ್‌ಐ ಬಂಡೆಯ ಹತ್ಯೆಗೂ ಹೆಚ್ಚು ವ್ಯತ್ಯಾಸವೇನಿಲ್ಲ. ಇಬ್ಬರೂ ಅಪರಾಧಿಗಳ ಬೆನ್ನಟ್ಟಿ ಹೋಗೇ ಹೆಣವಾದರು ನಿಜ. ಅವರ ಧೈರ್ಯವನ್ನು ಮೆಚ್ಚಲೇಬೇಕು. ಖಾಕಿ ನಿಷ್ಠೆಗೂ ಸೆಲ್ಯೂಟ್ ಹೊಡೆಯಬೇಕು. ಈ ಬಗ್ಗೆ ಯಾರಲ್ಲೂ ಎರಡು ಮಾತಿಲ್ಲ. ಆದರೆ ಹೀಗೆ ಅಪರಾಧಿಗಳ ಬೆನ್ನತ್ತಿ ಅವರನ್ನು ಜೀವಂತ ಹಿಡಿಯುವ ದುಸ್ಸಾಹಸಕ್ಕೆ ಕೈಯಿಡುವ ಮುನ್ನ ಪಾಲಿಸಬೇಕಾದ ಮುನ್ನೆಚ್ಚರಿಕೆ, ಸುರಕ್ಷತೆ, ತಾಳ್ಮೆ, ಸಂಯಮ, ತಯಾರಿ ಮತ್ತು ನಿಖರವ್ಯೂಹ ತಂತ್ರವಿದ್ದಿದ್ದರೆ ಪುಡಿ ಮನೆಗಳ್ಳರ ಕೈಯಲ್ಲಿ ಪ್ರಾಣ ಕಳಕೊಳ್ಳುವ ದುರ್ಗತಿ ಬರುತ್ತಿತ್ತೆ?


ಇದ್ದ ಇಬ್ಬರು ಮನೆಗಳ್ಳರನ್ನು ಮೂವರು ಪೇದೆಗಳಲ್ಲದೆ ಎಸ್.ಐ. ಜಗದೀಶ್ ಸೇರಿದಂತೆ ಒಟ್ಟು ನಾಲ್ವರು ಪೊಲೀಸ ರಿಂದ ಹಿಡಿಯುವುದು ಅಷ್ಟೊಂದು ಕಷ್ಟವೆ? ಅದೂ ರಿವಾಲ್ವರ್ ಕೈಯಲ್ಲಿದ್ದು? ಎಲ್ಲಾ ತಯಾರಿಯನ್ನೂ ಮಾಡಿಕೊಂಡು?

ಎಸ್‌ಐ ಜಗದೀಶ್ ಹತ್ಯೆ ಕುರಿತಂತೆ ಪೊಲೀಸರು ನೀಡಿದ ಹೇಳಿಕೆ, ವಿವಿಧ ಪತ್ರಿಕೆಗಳು ಮಾಡಿದ ವರದಿ ಮತ್ತು ನ್ಯೂಸ್ ಚಾನಲ್ಲುಗಳ ಪ್ರತ್ಯಕ್ಷ ವರದಿಗಳ್ಯಾವುದೂ ಒಂದಕ್ಕೊಂದು ತಾಳೆ ಹೊಂದುತ್ತಿಲ್ಲ. ಅಕ್ಟೋಬರ್ 16 ರ ಶುಕ್ರವಾರ ಹನ್ನೊಂದೂ ಮುಕ್ಕಾಲರ ಹೊತ್ತಿಗೆ ಎಸ್‌ಐ ಜಗದೀಶ್ ಕೊನೆಯುಸಿರೆಳೆದಾಗಿತ್ತು. ಅದೂ ನೆಲಮಂಗಲ ಟೌನ್‌ನ ತೀರ ಹೊರವಲಯವೇನೂ ಅಲ್ಲದ ವಿನಾಯಕ ನಗರದಲ್ಲಿ, ತೀರ ನಿರ್ಜನ ಪ್ರದೇಶ ಕೂಡ ಆಗಿರಲಿಲ್ಲ. ದೊಡ್ಡಬಳ್ಳಾಪುರ ಪೊಲೀಸರೇ ಹೇಳಿಕೊಂಡಂತೆ ಎಸ್‌ಐ ಜಗದೀಶ್ ಕಳೆದ ಒಂದು ತಿಂಗಳಿಂದಲೂ ಈ ಕಳ್ಳರ ಬೆನ್ನಿಗೆ ಬಿದ್ದಾಗಿತ್ತು.


ಅದಕ್ಕೆ ಕಾರಣವಾಗಿದ್ದು ಇಲ್ಲಿಗೆ ತಿಂಗಳ ಹಿಂದೆ ಅಂದರೆ ಸೆಪ್ಟೆಂಬರ್ 19 ರಂದು ದೊಡ್ಡಬಳ್ಳಾಪುರ ನಗರ ಠಾಣೆ ವ್ಯಾಪ್ತಿಯಲ್ಲಿ ನಡೆದ ಮನೆಗಳವು. ಮನೆಗಳುವಾದ ಬಗ್ಗೆ ದಾಖಲಾದ ದೂರನ್ನು ಆಧರಿಸಿ ತನಿಖೆಗೆ ಹೋದ ಎಸ್‌ಐ ಜಗದೀಶ್‌ಗೆ ಆ ಮನೆಯಲ್ಲೊಂದು ಮೊಬೈಲ್ ಸಿಕ್ಕಿದೆ. ಅದು ಕಳ್ಳರು ಬಿಟ್ಟು ಹೋಗಿದ್ದ ಮೊಬೈಲು. ಆದರೆ ಕಳ್ಳರಿಗೆ ಮಾತ್ರ ತಮ್ಮ ಮೊಬೈಲ್ ಕಳೆದಿದ್ದೆಲ್ಲಿ ಎಂಬ ಬಗ್ಗೆ ನಿಖರ ನೆನಪಿರಲಿಲ್ಲ. ಎಲ್ಲೋ ರಸ್ತೆ ಮಧ್ಯೆ ಕಳೆದಿರ ಬೇಕೆಂದು ಅದೇ ನಂಬರಿನ ಬೇರೆ ಸಿಮ್ ಖರೀದಿಸಿದ್ದಾರೆ. ಇದು ಮನೆಗಳ್ಳತನದ ತನಿಖೆಯಲ್ಲಿದ್ದ ಪೊಲೀಸರಿಗೆ ಗೊತ್ತಾಗಲು ಎಷ್ಟು ಹೊತ್ತು?

ಚೇಸಿಂಗ್ ಕತೆ


ಸಿಕ್ಕ ಮೊಬೈಲ್ ಮತ್ತು ಸಿಮ್‌ನ ಕಾಲ್ ಡೀಟೇಲ್ಸ್ ಕೆದಕಿದ ಪೊಲೀಸರಿಗೆ ಕಳ್ಳರು ನೆಲಮಂಗಲದಲ್ಲಿ ಸಕ್ರಿಯವಾಗಿರುವ ಮಾಹಿತಿ ಸಿಕ್ಕಿದೆ. ಅದು ಹಳೇ ಕಳ್ಳ



ಹಂತಕರಾದ ಹರೀಶ್



ಬಾಬು ಮತ್ತು ಮಧು



ಕೃಷ್ಣಪ್ಪ ಮತ್ತು ಆತನ ಮಗ ಮಧು ಎಂಬ ಕ... ಸಿಕ್ಕಿದೆ. ಸದರಿ ಸಿಮ್, ಅದಕ್ಕೆ ಬರುವ ಕರೆಗಳ ... ಅವುಗಳ ಮಾತು, ವಿಷಯ ಎಲ್ಲವನ್ನೂ ಕ... ಮಧು ಮತ್ತು ಆತನ ಅಪ್ಪನ ರೀತಿ ವರ್ತಿಸುವ... ಇಬ್ಬರೂ ಸೇರಿ ನೆಲಮಂಗಲದ ವಿನಾಯಕನಗರ ... ಹೋಂಡಾ ಶೋ ರೂಮಿನಲ್ಲಿ ಹೊಸದೊಂದ... ಖರೀದಿಸಿ ಅದಕ್ಕೊಂದು 64 ಸಾವಿರ ರೂಪಾಯಿ ... ಮಾಹಿತಿಯೂ ಸಿಕ್ಕಿದೆ. ಅದನ್ನೇ ಬೆನ್ನತ್ತಿದ್ದ ... ಜಗದೀಶ್ ನೆಲಮಂಗಲದ ಹೋಂಡಾ ಶೋ... ಬಂದು ಅಲ್ಲಿನ ಸಿಬ್ಬಂದಿಯ ಬಾಯಿ ಬಿಡಿಸಿದರೆ ... ಮತ್ತೊಂದು ಸಂಗತಿಯೇನೆಂದರೆ ಸಿಮ್‌ನ ಆಸಾಮಿ... ತಾವು ಖರೀದಿಸಿದ ಬೈಕಿನ ದಾಖಲೆಗಳನ್ನು ... ಮತ್ತೆ ಶೋರೂಮಿಗೆ ಶುಕ್ರವಾರ ಬೆಳಿಗ್ಗೆ ಬ... ಈ ಮಾಹಿತಿ ಹಿಡಿದೇ ಅಕ್ಟೋಬರ್ 16 ರ ... ಬೆಳಿಗ್ಗೆ 9ಕ್ಕೆ ಠಾಣೆಗೆ ಬಂದ ಜಗದೀಶ್ ... ಫೈಲುಗಳನ್ನು ಪರಿಶೀಲಿಸಿದ್ದೇ 9.45 ರ ... ದೊಡ್ಡಬಳ್ಳಾಪುರ ಗ್ರಾಮಾಂತರ ಠಾಣೆಗೆ ಬಂದಿದ... ಪೇದೆಗಳಾದ ವೆಂಕಟೇಶಮೂರ್ತಿ ಮತ್ತು ಗಂಗಾ... ಕಾರೊಂದಕ್ಕೆ ಹತ್ತಿಸಿಕೊಂಡಿದ್ದೇ ನೆಲಮಂಗಲಕ್ಕೆ ಬ... ನೆಲಮಂಗಲದಲ್ಲಿ ಇನ್ನಿಬ್ಬರು ಪೇದೆಗಳಾದ ಶಶಿಧ... ಚಂದ್ರು ಜೊತೆಯಾಗಿದ್ದಾರೆ. ಅಲ್ಲಿಗೆ ಎಲ್ಲರ... ಪೊಲೀಸರ ಸಂಖ್ಯೆ ಐದಾದಂತಾಯಿತು.

ಎಲ್ಲರೂ ನೆಲಮಂಗಲ-ಬೆಂಗಳೂರು ಮು... ಬಿನ್ನಮಂಗಲದ ಟರ್ಬೋ ಹೋಂಡಾ ಶೋ... ಬರುವ ಹೊತ್ತಿಗೆ ಸಮಯ ಹನ್ನೊಂದಾಗಿದೆ.

ಖದೀಮ ಕಳ್ಳರ ಕೌಟುಂಬಿಕ ದುರಾಚಾರ

ಅದು ಹೆಚ್ಚೂಕಮ್ಮಿ 72 ಗಂಟೆಗಳ ಕರಾರುವಾಕ್ ಕಾರ್ಯಾಚರಣೆಯ ಪ್ರತಿಫಲ. ಇದಕ್ಕೆ ಕಾರಣರಾಗಿದ್ದು ಕೇಂದ್ರ ವಲಯದ ಐಜಿಪಿ ಅರುಣ್ ಚಕ್ರವರ್ತಿ. ಈ ಹಿಂದೆ ಶಿವಮೊಗ್ಗದ ಎಸ್ಪಿಯಾಗಿದ್ದು ಯಡ್ಡಿ, ಈಶ್ವರಪ್ಪರಂಥ ಬಲಾಢ್ಯರನ್ನೇ ನಡುಗಿಸಿದ್ದ ಅರುಣ್ ಚಕ್ರವರ್ತಿ ಕೇಂದ್ರ ವಲಯದ ಐಜಿಪಿಯಾಗಿ ಇನ್ನೂ 6 ತಿಂಗಳು ತುಂಬುವ ಮೊದಲೇ ಇಡೀ ಪೊಲೀಸ್ ವ್ಯವಸ್ಥೆಗೆ ಮಾಡಿದ ಕಾಯಕಲ್ಪ ಫಲಕೊಟ್ಟಿದ್ದು ಜಗದೀಶ್ ಹಂತಕರ ಬಂಧನದ ಮೂಲಕವೇ.

ಮೂಲತಃ ಭದ್ರಾವತಿಯ ಕೃಷ್ಣಪ್ಪ ಮತ್ತು ತಿಮ್ಮಕ್ಕ ಜೊತೆಯಾಗಿದ್ದೇ ಕಳ್ಳತನಕ್ಕಾಗಿ ಮತ್ತು ಅದನ್ನೇ ಕಾಯಕವಾಗಿಸಿಕೊಂಡವರು. ಇಲ್ಲಿಗೆ ಆರು ವರ್ಷದ ಹಿಂದೆ ಕೃಷ್ಣಪ್ಪನ ಕುಟುಂಬ ಭದ್ರಾವತಿಯಿಂದ ಚಿತ್ರದುರ್ಗಕ್ಕೆ ವಲಸೆ ಹೋಗಿದ್ದಕ್ಕೂ ಪೊಲೀಸರೇ ಕಾರಣ. ಪದೇಪದೇ ಠಾಣೆಗೆ ಕರೆಸಿಕೊಂಡು ವಾರಗಟ್ಟಲೇ ಲಾಕಪ್ಪಿನಲ್ಲಿ ಕೂಡಿಡುತ್ತಿದ್ದ ಪೊಲೀಸರಿಂದ ಬಚಾವಾಗಲೆಂದು ರಾತ್ರೋರಾತ್ರಿ ಭದ್ರಾವತಿ ಬಿಟ್ಟ ಕೃಷ್ಣಪ್ಪ-ತಿಮ್ಮಕ್ಕ ದಂಪತಿಗಳಿಗೆ ಎರಡು ಗಂಡು ಮತ್ತು ಇಬ್ಬರು ಹೆಣ್ಣುಮಕ್ಕಳು.

ಭದ್ರಾವತಿಯ ಹೊಸಮನೆ ಬಡಾವಣೆ ಹನುಮಂತನಗರ ದಲ್ಲಿ ಮನೆ ಮಾಡಿಕೊಂಡಿದ್ದಷ್ಟೂ ಕಾಲ ಕೃಷ್ಣಪ್ಪನ ಪಾಲಿಗೆ ಸುಗ್ಗಿಯೇ. ಹಿರಿಯ ಮಗ ರಘು ನಿಷ್ಣಾತ ಮನೆಗಳ್ಳನಾಗಿ ಬೆಳೆದಿದ್ದ. ರಘು ಹಿರಿಯ ಮಗನಾಗಿ ತಂದೆಯ ಸಕಲ ಗುಣಗಳನ್ನು ರೂಢಿಸಿಕೊಂಡು ಚಾಲಾಕಿ ವಾಹನಗಳ್ಳನಾಗಿ ರೂಪುಗೊಂಡಿದ್ದ. ರಘು ಮೇಲೆಯೇ 20ಕ್ಕೂ ಅಧಿಕ ಕಳ್ಳತನದ ಕೇಸುಗಳು ದಾಖಲಾದವು. ತಾಯಿ ತಿಮ್ಮಕ್ಕನದ್ದೂ ಮನೆಗಳ್ಳತನವೆ. ಹೆಣ್ಣುಮಕ್ಕಳ ಪೈಕಿ ದೊಡ್ಡವಳಾದ ಮಂಜುಳಾಳನ್ನು ಕಳ್ಳತನದಲ್ಲೇ ಜೈಲು ಪಾಲಾಗಿದ್ದ ರವಿ ಎಂಬಾತನಿಗೆ ಕೊಟ್ಟು 2010 ರಲ್ಲಿ ಮದುವೆ ಮಾಡುತ್ತಾರೆ. ಕೇಬಲ್ ಕೇಬಲ್ ಕಳವು ದಂಧೆಯಲ್ಲೇ ಸಿಕ್ಕಾಪಟ್ಟೆ ದುಡ್ಡು ದೋಚಿದ ರವಿ 2011 ರಲ್ಲಿ ಕೊಲೆ ಕೇಸೊಂದರಲ್ಲಿ ಜೈಲುಪಾಲಾದ. ಅಷ್ಟೇ ತಾಯಿ ತಿಮ್ಮಕ್ಕ ತನ್ನ ಮಗಳನ್ನು ರವಿಯಿಂದ ಬಿಡಿಸಿದ್ದೇ ಶಂಷುದ್ದೀನ್ ಎಂಬ ಕೇರಳದ



ನಾಗಪುರ ಪೊಲೀಸರಿಗೆ ಸೆರೆಸಿಕ್ಕ ಹರೀಶ್‌ಬಾಬು, ಮಧು

ಕಾರು ಕಳ್ಳನೊಬ್ಬನಿಗೆ ಕೊಟ್ಟು ಎರಡನೇ ಮದುವೆಗೈದಳು.


ಹುಟ್ಟು ಕಳ್ಳರಿಗೆ ಮನುಷ್ಯ ಸಂಬಂಧ ಯಾವ ಲೆಕ್ಕ. ವಿಶೇಷವೆಂದರೆ ಹಿರಿಮಗಳು ಮಂಜುಳಾ ಕೂಡ ಆ ಹೊತ್ತಿಗೆ ಭಯಾನಕ ಮನೆಗಳ್ಳಿಯಾಗಿ ಬದಲಾಗಿದ್ದಳು. ಎರಡನೇ ಮಗಳು ರೇಖಾಳನ್ನು ಭದ್ರಾವತಿಯಲ್ಲಿ ಗಂಡ ಕೃಷ್ಣಪ್ಪ ಜೊತೆ ಕಳುವಿನ ಸಾಥಿಯಾಗಿದ್ದ ಮಂಜುನಾಥನಿಗೆ ಕೊಟ್ಟು ಮದುವೆ ಮಾಡಿದ ತಿಮ್ಮಕ್ಕನಿಗೆ 2005ರಲ್ಲೇ ಪಾಪದ ಫಲ ಅಟಕಾಯಿಸಿಕೊಂಡಿತು. ಭದ್ರಾವತಿಯಿಂದ ಬೆಂಗಳೂರಿಗೆ ಬಂದು ಮನೆಗಳ್ಳತನ ಮಾಡಿಕೊಂಡಿದ್ದ ಕೃಷ್ಣಪ್ಪನನ್ನು ಪೀಣ್ಯ ಸಮೀಪ ಏರಿಯಾದ ಜನರೇ ಹಿಡಿದು ಬಡಿದುಕೊಂದರು. ಮಗಳ ಗಂಡ ಮಂಜ ಹೇಗೋ ತಪ್ಪಿಸಿಕೊಂಡು ಬಚಾವಾದ. ಆ ಹೊತ್ತಿಗೆ ಚಿತ್ರದುರ್ಗ ಸೇರಿಕೊಂಡು ಹಿರಿಯ ಮಗ ರಘು ಜೊತೆ ವಾಸಿಸುತ್ತಿದ್ದ ತಾಯಿ ತಿಮ್ಮಕ್ಕನಿಗೆ ಪರಿಚಿತನಾದವನು ಖತರ್‌ನಾಕ್ ಕಳ್ಳ ಹರೀಶ್ ಬಾಬು.

ಮೂಲತಃ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆಯವನಾದ ಹರೀಶ್‌ಬಾಬು ತನ್ನ ಸಹಚರರನ್ನು ನೋಡಲೆಂದು ಚಿತ್ರದುರ್ಗ ಜೈಲಿಗೆ ಬರುತ್ತಿದ್ದರೆ ಅದೇ ಜೈಲಲ್ಲಿದ್ದ ಮಗ ಮಧುವನ್ನು ನೋಡಲೆಂದು ತಾಯಿ ತಿಮ್ಮಕ್ಕ ಅಲ್ಲಿಗೆ ಬರುತ್ತಿದ್ದಳು. ಇಬ್ಬರದ್ದೂ ಕಳ್ಳ ಕಸುಬು. ಈಕೆಗೆ ಗಂಡ ಸತ್ತಿದ್ದಾನೆ; ಆತ ತನ್ನ ಹೆಂಡತಿಯನ್ನೇ ಕೊಂದು ಹೂತು ಬಂದಿದ್ದಾನೆ. ತಿಮ್ಮಕ್ಕ ಮತ್ತು ಹರೀಶ್‌ಬಾಬು ಹೆಚ್ಚೂಕಮ್ಮಿ ಒಂದೇ ವಯಸ್ಸಿನವರು. ಒಂದಷ್ಟು ದಿನ ಚಿತ್ರದುರ್ಗದ ಮನೆಗೆ ಬಂದುಹೋಗುತ್ತಿದ್ದ ಹರೀಶ್‌ಬಾಬು ಕಾಲಕ್ರಮೇಣ ಹಿರಿಯ ಮಗ ಮಧುವಿನ ಜೊತೆಯಾಗಿದ್ದಾನೆ. ಬಿರುಸಾಗಿಯೇ ದಂಧೆ ಸಾಗಿದೆ. ಭದ್ರಾವತಿ, ಚಿತ್ರದುರ್ಗದಂಥ ಸಣ್ಣಪುಟ್ಟ ಊರುಗಳಿಗಿಂತಲೂ ದಟ್ಟಾರಣ್ಯದಂತಿದ್ದ ಬೆಂಗಳೂರೇ ಕಳ್ಳತನಕ್ಕೆ ಹೇಳಿ ಮಾಡಿಸಿದಂತಿದೆ ಎಂಬುದು ಅರಿವಾದದ್ದು ಇಲ್ಲಿಗೆ ಹತ್ತು ವರ್ಷದ ಹಿಂದೆ. ಹೇಗೂ ಗಂಡ ಕೃಷ್ಣಪ್ಪ ಆ ಹೊತ್ತಿಗೇ ಅಂದ್ರಹಳ್ಳಿಯಲ್ಲಿ ಮನೆ ಮಾಡಿಕೊಂಡಿದ್ದು ಕಳ್ಳತನದ ಅಡಿಪಾಯ ಹಾಕಿಕೊಟ್ಟಿದ್ದನಲ್ಲ!

ಬೆಂಗಳೂರಿನ ಹೆಸರುಘಟ್ಟ, ಸುಂಕದಕಟ್ಟೆ, ಚಿಕ್ಕಬಿದರಕಲ್ಲು, ಬ್ಯಾಡರಹಳ್ಳಿ, ಪೀಣ್ಯ, ಪರಪ್ಪನ ಅಗ್ರಹಾರ, ಹೊಸಕೋಟೆ, ಬಿಡದಿ ಇತ್ಯಾದಿ ಏರಿಯಾಗಳಲ್ಲಿ ಬಾಡಿಗೆಗೆ ಮನೆ ಹಿಡಿದು ವಾರಕ್ಕೆರಡೋ ಮೂರೋ... ಮಾಡಿಕೊಂಡಿದ್ದ ತಿಮ್ಮಕ್ಕನ ಕುಟುಂಬಕ್ಕೆ ಹರಿ... ಸಿಕ್ಕಿದ್ದೇ ಆಧಾರಸ್ತಂಭ ಒದಗಿಬಂದಿತ್ತು. ರಘು ... ಕದಿಯುತ್ತಿದ್ದ. ಮಧು ಪಾಲಿಗೆ ಹರೀ... ಮಲತಂದೆಯಂತೆ ಆಸರೆಯಾದ. ಇಬ್ಬರೂ ... ಕಳುವಿಗಿಳಿಯುತ್ತಿದ್ದರು. ವರ್ಷಕ್ಕೆರಡು ಬಾ... ಬದಲಿಸುತ್ತಿದ್ದರು. ಜೊತೆಗೆ ತಿಮ್ಮಕ್ಕನ ಅಳಿ... ಮಂಜು ಮತ್ತು ಶಂಷುದ್ದೀನ್ ಆಗಾಗ ಹೊಡೆದ ... ಪಾಲೊಪ್ಪಿಸುತ್ತಿದ್ದರು.

ಹೀಗಿರುವಾಗಲೇ ಹರೀಶ್‌ಬಾಬು ಮತ್ತು ... ಜೋಡಿ ಮೊನ್ನೆ ಅಂದರೆ 2015 ರ ಸೆಪ್ಟೆಂಬರ್... ದೊಡ್ಡಬಳ್ಳಾಪುರದ ಮನೆಯೊಂದಕ್ಕೆ ಕನ್ನವಿಟ್ಟಿ... ಕನ್ನ ಹಾಕುವಾಗಲೂ ಲೈಟಾಗಿ ಕುಡಿ... ಹರೀಶ್‌ಬಾಬು ಅವತ್ತು ಯಾಮಾರಿದ್ದಾನೆ. ತನ್ನ ... ಕನ್ನದ ಮನೆಯ ಟಾಯ್ಲೆಟ್ಟಿನಲ್ಲಿ ಮರೆತು... ಹರೀಶ್‌ಬಾಬು ಅದೆಲ್ಲೋ ದಾರಿಮಧ್ಯೆ ಬಿದ್ದಿ... ಹಾಕಿದ ಲೆಕ್ಕಾಚಾರವೇ ತಪ್ಪಾಗಿತ್ತು. ಮನೆಗಳವಿ... ಬಂದಿದ್ದು ದೊಡ್ಡಬಳ್ಳಾಪುರದ ಉತ್ಸಾಹಿ ಎಸ್‌ಐ... ಸಿಕ್ಕ ಮೊಬೈಲ್ ಮತ್ತು ಅದರ ಸಿಮ್‌ಕಾರ್ಡ್... ಡಿಟೇಲ್ಸ್ ಕೆದಕಿದಂತೆಲ್ಲ ಅದು ಜನರೇ ಬಡಿದ... ಕೃಷ್ಣಪ್ಪ ಆತನ ಪತ್ನಿ ತಿಮ್ಮಕ್ಕನ ಮಕ್ಕಳಾದ ರಘು ... ಇತ್ಯಾದಿಗಳೆಲ್ಲರ ಇತ್ಯೋಪರಿಯನ್ನು ಬಿಚ್ಚಿಟ್ಟಿದೆ... ದಾಖಲೆಗಳ ಪ್ರಕಾರ ಬಳಸಿದ್ದ ಸಿಮ್... ಹೆಸರಲ್ಲಿದ್ದುದರಿಂದ ಭದ್ರಾವತಿ ಚಿತ್ರದುರ್ಗ... ಕಳ್ಳ ಕೃಷ್ಣಪ್ಪ ಬೆಂಗಳೂರಿಗೆ ಬಂದಿರಬೇಕೆಂದೇ ... ಎಸ್‌ಐ ಜಗದೀಶ್ ಆತ ಅಷ್ಟೊಂದು ಕ್ರೂರಿಯ... ಮತ್ತು ಪೊಲೀಸರ ಮೇಲೆ ಈ ರೀತಿ ನಿರ್ದ... ದಾಳಿ ನಡೆಸಲಾರ ಎಂದೇ ಲೆಕ್ಕ ಹಾಕಿದ್ದರು.

ಆದರೆ ಕೃಷ್ಣಪ್ಪನ ಬದಲಿಗೆ ಆ ಜಾಗವ... ಕೇಡಿ ಹರೀಶ್‌ಬಾಬು. ಬಕ್ಕತಲೆ, ಹಿಂಸ್ರ ... ನಿರ್ದಯಿ ಕಣ್ಣು, ತಿಳಿಗಪ್ಪು ಬಣ್ಣ ಮತ್ತು ... ಚಹರೆಯ ಹರೀಶ್‌ಬಾಬು ತಾನು ನೆಲಮಂಗ... ಶೋರೂಮಿಗೆ ಬರುವಾಗಲೇ ಡ್ರ್ಯಾಗರ್ ಒಂದ... ಸಿಕ್ಕಿಸಿಕೊಂಡಿದ್ದ. ಎದುರಾದ ಯಾರನ್ನು ...






ಕಳ್ಳರಿಗೆ ಬಲಿಯಾದ ಎಸ್‌ಐ ಜಗದೀಶ್‌ರವರ ಪಾರ್ಥಿವ ಶರೀರ ಮತ್ತು ರೋಧಿಸುತ್ತಿರುವ ಕುಟುಂಬದವರು......

...ಂ ಸುತ್ತ ಕವರ್ ಆಗಿದ್ದಾರೆ. ವಿಚಿತ್ರವೆಂದರೆ ಕಳ್ಳರನ್ನು ...ಬೇಂದು ಸಜ್ಜಾಗಿ ಬಂದಿದ್ದ ಎಸ್‌ಐ ಜಗದೀಶ್ ...ಗೊತ್ತಿದ್ದೂ ಷೋರೂಂನ ಬಾಗಿಲಲ್ಲೇ ನಿಂತಿದ್ದಾರೆ. ...ದ ಹೊತ್ತಿಗೆ ಅಪ್ಪನಂತಿದ್ದ ಒಬ್ಬ ಮತ್ತು ಮಗನಂತಿದ್ದ ...ಎಂಬ ಇಪ್ಪತ್ತರ ಆಸುಪಾಸಿನ ಹುಡುಗನೊಬ್ಬ ...ಮಿಗೆ ಬಂದಿದ್ದಾರೆ. ಅದೂ ತಮ್ಮ ಕೆಎ-03, ... 6074 ನಂಬರಿನ ಸುಜುಕಿ ಆಕ್ಸಿಸ್ ಬೈಕಿನಲ್ಲಿ. ... ತಮಾಷೆಯೆಂದರೆ ಹಿಂದ್ಯಾವತ್ತೂ ಎಸ್‌ಐ ...ರನ್ನು ಮುಖಾಮುಖಿ ನೋಡೇ ಇರದಿದ್ದ ಅಪ್ಪ ...ತಿದ್ದ ಕಳ್ಳರಿಬ್ಬರೂ ಬಾಗಿಲಲ್ಲಿ ನಿಂತಿದ್ದ ಎಸ್‌ಐ ...ರನ್ನು ಗುರುತಿಸಿದ್ದಾರೆ. ಅವರನ್ನು ನೋಡ ...ದ್ದೇ ಓಡಲು ಶುರು ಮಾಡಿದ್ದಾರೆ. ಓಡಲಾರಂಭಿಸಿದ ... ಪೊಲೀಸರು ಬೆನ್ನಟ್ಟಿದ್ದಾರೆ. ಒಟ್ಟಾಗಿ ಸಜ್ಜಾಗಿ ... ಪೊಲೀಸರು ಕಳ್ಳರನ್ನು ಬೆನ್ನಟ್ಟುವ ಗಡಿಬಿಡಿಯಲ್ಲಿ ... ಕಾರಣಕ್ಕೆ ದಿಕ್ಕಾಪಾಲಾಗಿ ಚೆಲ್ಲಾಪಿಲ್ಲಿಯಾಗಿ ...ರಂಭಿಸಿದರೋ ಗೊತ್ತಿಲ್ಲ.

...ಸಿನಿಮೀಯ ಪ್ರಹಸನ

...ರೆ ಸಿನಿಮೀಯ ಎಂಬಂತೆ ... ಗತ್ತಿನಲ್ಲಿ ಎಸ್‌ಐ ಜಗದೀಶ್ ...ಓಡುತ್ತಿದ್ದ ಕಳ್ಳರನ್ನು ಬೆನ್ನಟ್ಟಿದ್ದಾರೆ. ... ಚಪ್ಪಲಿಯನ್ನು ಬಿಟ್ಟು ...ಡಗಿದ್ದಾರೆ. ಅದೇ ರೀತಿ ...ಕೊಂಡು ಬರುತ್ತಿದ್ದ ಎಸ್‌ಐ ...ಶ್ ಪಕ್ಕದಲ್ಲೇ ತೋಡಿದ್ದ



ತಿಮ್ಮಕ್ಕ

... ಆತ ಮನೆ ಬಿಡುವ ಮುನ್ನವೇ ...ಸಿರುತ್ತಿದ್ದ. ಹೊಸ ಬೈಕ್ ಖರೀದಿಸಲೆಂದು ...ಾ ಷೋರೂಮಿಗೆ ಮಧು ಜೊತೆ ಬೈಕಲ್ಲಿ ಬಂದ ...ಬಾಬುಗೆ ಮೃಗ ಸದೃಶ ಮುನ್ನೆಚ್ಚರಿಕೆಯೊಂದು ...ಕ್ಕೂ ಎಚ್ಚರವಾಗಿರುತ್ತೆ. ಆದ್ದರಿಂದ ಮಧುವನ್ನು ... ಷೋರೂಂ ಒಳಕ್ಕೆ ಕಳಿಸಿ ತಾನು ಹೊರಗೇ ... ಹಾಕಿ ನಿಂತುಬಿಟ್ಟ.

...ದೀಶ್ ಪಾಲಿಗೆ ಯಡವಟ್ಟಾಗಿದ್ದೇ ಅದು. ಮಧು ...ರೀಶ್‌ಬಾಬು ಕೂಡ ಒಳಕ್ಕೆ ಬಂದಿದ್ದರೆ ಜೊತೆಗಿದ್ದ ...ಕಟೇಶ್‌ಮೂರ್ತಿ ಜೊತೆ ಸೇರಿಕೊಂಡು ಸಲೀಸಾಗಿ ...ಬಿಡುತ್ತಿದ್ದರೋ ಏನೋ. ಯಾವಾಗ ಮಧು ಒಳಕ್ಕೆ ...ೇ ಮೊದಲು ಹೊರಗಿದ್ದವನನ್ನು ಹಿಡಿದು ...ಾ ಎಂದು ಜಗದೀಶ್ ಹೊರಕ್ಕೆ ಚಲಿಸಿದ್ದಾರೆ. ...ಪಾಸನೆ ಓಡಿದ ಮಧು ಸಿಗ್ನಲ್ ಕೊಟ್ಟನೋ ...ಹರೀಶ್‌ಬಾಬುಗೇ ಅಪಾಯದ ಅರ್ಥವಾಯಿತೋ ...ಷೋರೂಂ ಹಿಂಭಾಗದ ನಿರ್ಜನ ಬಯಲಿನತ್ತ ... ಬಾಬು ಓಡತೊಡಗಿದ್ದಾನೆ. ಹಿಂಬಾಲಿಸಿ ಹೋದ ...ಗೆ ತನ್ನ ತಪ್ಪಿನ ಅರಿವಾಗಲು ಸಮಯ ತಾನೇ ... ರಕ್ಕಸ ಹರೀಶ್‌ಬಾಬು ಸಣ್ಣ ದೊಂದು ಅಳುಕು ...ದಂತೆ ತನ್ನ ಡ್ರ್ಯಾಗರ್ ಹಿರಿದು ಬಕ್ಕಾಬಕ್ಕಾ ... ಅದೇ ಹೊತ್ತಿಗೆ ಮಧು ಬೈಕೆತ್ತಿಕೊಂಡು ... ಕಂಡ ಹರೀಶ್‌ಬಾಬು ಎಸ್ಕೈ ರಕ್ಷಣೆಗೆ ಬಂದ ...ಂಕಟೇಶ್‌ಮೂರ್ತಿಗೂ ಇರಿದುಬಿಟ್ಟ.

... ತಿಮ್ಮಕ್ಕನಿಗೆ ಗೊತ್ತಾಗುವ ಹೊತ್ತಿಗೆ ಮಧ್ಯಾಹ್ನ ...ಯಾಗಿತ್ತು. ಹರೀಶ್‌ಬಾಬು ಮತ್ತು ಮಧು ತಲೆ ...ಳಿಖಿ ದುಡ್ಡು ಕಾಸಿನ ವ್ಯವಸ್ಥೆ ಮಾಡಿದ ತಿಮ್ಮಕ್ಕ ... ರಘುವನ್ನು ಕರಕೊಂಡಿದ್ದೇ ಯಾತ್ರಾಸ್ಥಳ ...ಸಿಯ ಬಸ್ಸು ಹತ್ತಿದ್ದಾಳೆ. ಇತ್ತ ಮಧು ಮತ್ತು ...ಮಿಳುನಾಡಿನ ಹಾದಿ ಹಿಡಿದು ತಮ್ಮ ಮೊಬೈಲ್ ... ಮಾಡಿದವರು ತಮಿಳುನಾಡಿನಲ್ಲಿ ಬೇರೆಯದೇ ...ಶ್ ಮತ್ತು ಯಾವ್ಯಾವುದೋ ಹಳೆಯ ಸಿಮ್‌ಕಾರ್ಡ್ ... ಹಳೆಯ ಕಾಂಟ್ಯಾಕ್ಟ್‌ಗಳನ್ನು ...ಕೊಂಡಿದ್ದಾರೆ.

... ಹೊತ್ತಿಗೆ ಸರಿಯಾಗಿ ಕೇಂದ್ರ ವಲಯದ ಐಜಿಪಿ

ಕಾಲುವೆಯೊಂದಕ್ಕೆ ಎಡವಿದ್ದಾರೆ. ಕಾಕತಾಳೀಯವೆಂಬಂತೆ ಕಳ್ಳರ ರೀತಿಯಲ್ಲಿ ಕಳ್ಳರನ್ನು ಹಿಡಿಯಲೆಂದು ಬಂದಿದ್ದ ಜಗದೀಶ್ ಕೂಡ ಚಪ್ಪಲಿ ಧರಿಸಿದ್ದರಂತೆ. ಅದು ಕೆಸರಲ್ಲಿ ಸಿಕ್ಕಾಕಿಕೊಂಡಿತಂತೆ. ಜೀನ್ಸ್ ತೊಟ್ಟು ಸಜ್ಜಾಗಿ ಬಂದಿದ್ದ ಜಗದೀಶ್ ಯಾವ ಕಾರಣಕ್ಕೆ ಷೂ ಧರಿಸದೆ ಚಪ್ಪಲಿ ಧರಿಸಿದ್ದರೋ ನಿಗೂಢವಾಗಿದೆ. ಕಾಲುವೆಯಲ್ಲಿ ಕಾಲು ತೊಡರಿ ನೆಲಕ್ಕೆ ಬಿದ್ದ ಎಸ್‌ಐ ಜಗದೀಶ್‌ರನ್ನು ಅನತಿ ದೂರದಲ್ಲಿ ಪರಾರಿಯಾಗುತ್ತಿದ್ದ ಸೋಕಾಲ್ಡ್ ಅಪ್ಪ ಮಗ ಇಬ್ಬರೂ ವಾಪಸ್ಸು ಓಡಿಬಂದಿದ್ದೇ ಕೈಜಾರಿ ಬಿದ್ದಿದ್ದ ರಿವಾಲ್ವರ್ ಕಿತ್ತುಕೊಂಡು ತಮ್ಮ ಬಳಿಯಿದ್ದ ಚಾಕುವಿನಿಂದ ಪಕ್ಕೆ ಸೊಂಟ, ಹೊಟ್ಟೆಯೆನ್ನದೆ ತಿವಿದು ಪರಾರಿಯಾಗುತ್ತಾರೆ. ಬಿಡಿಸಲೆಂದು ಬಂದಿದ್ದ ಪೇದೆ ವೆಂಕಟೇಶ್ ಮೂರ್ತಿಗೂ ಚಾಕುವಿನಿಂದ ತಿವಿದು ಪರಾರಿ ಯಾಗುತ್ತಾರೆ.

ಇದು ಪತ್ರಿಕೆಗಳಿಗೆ ನೆಲಮಂಗಲ ಪೊಲೀಸರು ನೀಡಿದ ಘಟನಾವಳಿಯ ವಿವರಗಳು.

ಕಳ್ಳರ ಬುದ್ಧಿ ಗೊತ್ತಿದ್ದೂ ಎಸ್‌ಐ ಜಗದೀಶ್ ಸೊಂಟಕ್ಕೆ ರಿವಾಲ್ವರ್ ನೇತಾಡಿಕೊಂಡು ಯಾಕಾದರೂ ಬಾಗಿಲಲ್ಲಿ ನಿಂತಿದ್ದು? ಜಗದೀಶ್ ತಮ್ಮನ್ನೇ ಹಿಡಿಯಲು ಬಂದಿ ದ್ದಾರೆಂದು ಕಳ್ಳರಿಗೆ ಗೊತ್ತಾಗಿದ್ದು ಹೇಗೆ? ಮೊದಲೇ ಕವರ್ ಆಗಿದ್ದರೆ ಕಳ್ಳರು ಹೇಗೆ ತಾನೇ ಪರಾರಿಯಾಗಲು ಸಾಧ್ಯ? ಕಳ್ಳರು ಓಡಿದರೆಂದು ಪೊಲೀಸರೇಕೆ ಚೆಲ್ಲಾಪಿಲ್ಲಿಯಾಗಿ ಓಡುತ್ತಾರೆ? ಕೈಯಲ್ಲಿ

ಅರುಣ್ ಚಕ್ರವರ್ತಿ ಅಖಾಡಕ್ಕಿಳಿದಿದ್ದಾರೆ. ಅತ್ತ ತಾಯಿ ತಿಮ್ಮಕ್ಕ ಮತ್ತು ರಘುವನ್ನ ಪೊಲೀಸರ ಮತ್ತೊಂದು ತಂಡ ಪತ್ತೆ ಹಚ್ಚಿತ್ತು. ಮಧು ಮತ್ತು ಬಾಬು ಬಳಸುತ್ತಿದ್ದ ಎಲ್ಲಾ ಸಿಮ್‌ಗಳ ವಿವರಗಳನ್ನು ಬಾಯಿಬಿಡಿಸಿಯಾಗಿತ್ತು. ಆ ಆಧಾರದ ಮೇಲೆ ಒಂದು ನಂಬರ್ ಅನ್ನು ಮಧು ಮತ್ತು ಹರೀಶ್‌ಬಾಬು ಬಳಸುತ್ತಿದ್ದದ್ದನ್ನು ಪತ್ತೆ ಹಚ್ಚಲಾಯಿತು. ಈ ಬಾರಿ ಅದು ಹೈದರಾಬಾದಿನಲ್ಲಿ ಚಾಲ್ತಿಗೊಂಡು ಸ್ವಿಚ್‌ಆಫ್ ಆಗಿತ್ತು. ಚಾಲ್ತಿಗೊಂಡಾಗ ಉತ್ತರ ದಿಕ್ಕಿನತ್ತ ಟವರ್ ಲೊಕೇಷನ್ ತೋರಿಸುತ್ತಿತ್ತು. ಅದು ಹೈದ್ರಾಬಾದ್ ದೆಹಲಿ ಮಾರ್ಗದ ಎಪಿ ಎಕ್ಸ್‌ಪ್ರೆಸ್ ರೈಲೆಂಬುದು ಗೊತ್ತಾಗಲು ಹೆಚ್ಚು ಸಮಯ ಹಿಡಿಯಲಿಲ್ಲ.


ಮಹಾರಾಷ್ಟ್ರಕ್ಕೆ ರೈಲು ಪ್ರವೇಶಿಸಿದ್ದೇ ಅದರ ಮುಂದಿನ ರೈಲ್ವೇ ನಿಲ್ದಾಣಗಳು, ಆ ಊರಿನ ಪೊಲೀಸ್ ಠಾಣೆ, ರೈಲ್ವೇ ಪೊಲೀಸರು ಇತ್ಯಾದಿ ಎಲ್ಲರ ನಂಬರನ್ನೂ ಐಜಿಪಿ ಅರುಣ್ ಚಕ್ರವರ್ತಿಯವರ ತಂಡ ಪತ್ತೆಹಚ್ಚಿತ್ತು. ಮಹಾರಾಷ್ಟ್ರದ ನಾಗಪುರದ ಪೊಲೀಸ್ ವರಿಷ್ಠರಿಗಾಗಲೇ ಮಾಹಿತಿಯೂ ರವಾನೆಯಾಗಿತ್ತು. ವ್ಯಾಟ್ಸಪ್ ಮೂಲಕ ಪ್ರತಿಯೊಬ್ಬರಿಗೂ ಹರೀಶ್‌ಬಾಬು ಮತ್ತು ಮಧು ಫೋಟೋ ಕಳಿಸಿದ್ದು ಎಂತಹ ಫಲ ನೀಡಿತೆಂದರೆ ಜನರಲ್ ಭೋಗಿಯಲ್ಲಿ ತಲೆ ಬೋಳಿಸಿಕೊಂಡು ಕೂತಿದ್ದ ಹರೀಶ್‌ಬಾಬುನನ್ನು ರೈಲ್ವೇ ಪೊಲೀಸರು ಪತ್ತೆ ಹಚ್ಚಿಬಿಟ್ಟರು. ಯಾರಾದರೂ ಹೊಸದಾಗಿ ತಲೆ ಬೋಳಿಸಿಕೊಂಡಿದ್ದಾರೆಂದರೆ ಪೊಲೀಸರಿಗದು ಬೇರೆಯದೇ ಅರ್ಥ ಕೊಡುವಂತೆ ಸಲೀಸಾಗಿ ಹರೀಶ್‌ಬಾಬುವನ್ನು ಪತ್ತೆಹಚ್ಚಿದ ರೈಲ್ವೇ ಪೊಲೀಸರು ನಾಗಪುರದ ಕ್ರೈಂ ಬ್ರಾಂಚ್ ಪೊಲೀಸರಿಗೆ ಮಾಹಿತಿಕೊಟ್ಟಿದ್ದರು. ಇನ್ನೇನು ನಾಗಪುರ ಸ್ಟೇಷನ್ನಿಗೆ ರೈಲು ಪ್ರವೇಶಿಸಿತು ಎನ್ನುವ ಹೊತ್ತಿಗಾಗಲೇ ಆರು ಮಂದಿಯಿದ್ದ ಕ್ರೈಂ ಪೇದೆಗಳ ತಂಡವೊಂದು ಹರೀಶ್‌ಬಾಬು ಮತ್ತು ಮಧುವನ್ನು ಸುತ್ತುವರಿದಿತ್ತು. ಬಲೆಗೆ ಬಿದ್ದವರಿಬ್ಬರನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಿದ ನಾಗಪುರ ಪೊಲೀಸರಿಗೊಂದು ಅಚ್ಚರಿಯೆಂಬಂತೆ ಹರೀಶ್‌ಬಾಬುಗೆ ಮದ್ದೇ ಇಲ್ಲದ ಮಾರಕ ಕಾಯಿಲೆಯಿದ್ದ ಸಂಗತಿ ಬಯಲಾಗಿತ್ತು.

ರಿವಾಲ್ವರ್ ಇದ್ದೂ ಜಾರಿಬಿದ್ದ ಜಗದೀಶ್ ತನ್ನನ್ನು ಕಳ್ಳರು ಸಮೀಪಿಸುವ ತನಕ ಕಾದಿದ್ದೇಕೆ? ಜೊತೆಯಲ್ಲೇ ಮತ್ತೊಬ್ಬ ಪೇದೆ ವೆಂಕಟೇಶ್‌ಮೂರ್ತಿ ಇದ್ದಿದ್ದೇ ಆಗಿದ್ದರೆ ಎಸ್‌ಐ ಬಿದ್ದು ಕಳ್ಳರು ಸಮೀಪಿಸುವ ತನಕ ಕಾದು ಕೂರುತ್ತಿದ್ದನೆ? ಅದರಲ್ಲೂ ತನ್ನ ಮೇಲಧಿಕಾರಿಯನ್ನು ಚುಚ್ಚಿಚುಚ್ಚಿ ಸಾಯಿಸುತ್ತಿದ್ದರೆ ಓರ್ವ ಪೇದೆಯಾಗಿ ವೆಂಕಟೇಶ್ ಹೇಡಿಯಂತೆ ನೋಡುತ್ತಾ ನಿಂತನೆ?


ನಡೆದ ಘರ್ಷಣೆಗೂ ಪೊಲೀಸರು ಹೇಳುವ ರೀತಿಗೂ ಒಂದಕ್ಕೊಂದು ತಾಳೆಯಾಗುತ್ತಿಲ್ಲ. ಮೊದಮೊದಲು ಇರಿದಿದ್ದು ಮಧುವಿನ ತಂದೆ ಕೃಷ್ಣಪ್ಪ ಎಂದು ಪೊಲೀಸರು ಭಾವಿಸಿದ್ದರು. ಎರಡನೇ ದಿನಕ್ಕೆ ಅದು ಹರೀಶ್ ಬಾಬು ಎಂಬ ಮತ್ತೊಬ್ಬ ಕಳ್ಳ ಎಂದು ಗೊತ್ತಾಯಿತು. ಟರ್ಬೋ ಹೋಂಡಾ ಷೋರೂಮಿನ ಸೀಸಿ ಟೀವಿ ಫೂಟೇಜುಗಳೇ ಹೇಳುವಂತೆ ಬೈಕಿನಲ್ಲಿ ಇಬ್ಬರು ಬರುತ್ತಿರುವ ದೃಶ್ಯವಿದೆ. ಮತ್ತೊಂದೆಡೆ ಷೋರೂಮಿನ ರಿಸೆಪ್ಷನ್‌ನಲ್ಲಿ ಎಸ್‌ಐ ಜಗದೀಶ್ ಕಾದು ಕೂತು ಹೊಂಚು ಹಾಕುವ ದೃಶ್ಯವಿದೆ. ಮೂರನೇ ದೃಶ್ಯಾವಳಿಯಲ್ಲಿ ಷೋರೂಂನಿಂದ ಹೊರಕ್ಕೆ ಬಂದ ಜಗದೀಶ್ ಅವಸರದಿಂದ ನಡೆಯುತ್ತಲೇ ಬಂದು ಹೊರಗೆ ಹೊಂಚಿ ನಿಂತಿದ್ದ ಮಫ್ತಿ ಪೇದೆಯಂತಿದ್ದ ಆಸಾಮಿಯನ್ನು ತನ್ನ ವಿರುದ್ಧ ದಿಕ್ಕಿಗೆ ಬೆನ್ನಟ್ಟುವಂತೆ ಸೂಚಿಸುವ ದೃಶ್ಯವಿದೆ.

ಸಾವಿನ ಬಲೆಯೊಳಕ್ಕೆ


ಈ ಮೂರೂ ದೃಶ್ಯಗಳ ಆಧಾರದ ಮೇಲೆ ಹೇಳುವುದಾದರೆ ಮಧು ಷೋರೂಂನ ಒಳಕ್ಕೆ ಬಂದಾಗ ಜಗದೀಶ್ ಪಡಸಾಲೆಯಲ್ಲಿ ಕೂತು ಸ್ಪಷ್ಟವಾಗೇ ಗಮನಿಸಿದ್ದಾರೆ. ಬಹುಶಃ ಮಧು ಎಂಬಾತ ಯಾರೆಂಬುದು



ರಘು



ಸಂತೋಷ್



ತಿಮ್ಮಕ್ಕನ ಮೊದಲ ಅಳಿಯ ರವಿ

ಅವರಿಗೆ ಗೊತ್ತಿರಲಿಕ್ಕಿಲ್ಲ. ಬೈಕಿನಲ್ಲಿ ಮಧು ಎಂಬಾತನ ಜೊತೆ ಹರೀಶ್ ಬಾಬು ಎಂಬ ಆಸಾಮಿ ಬಂದಿದ್ದನಾದರೂ ಆತ ಒಳಕ್ಕೆ ಬಾರದೆ ಹೊರಗೆ ನಿಂತಿದ್ದ. ಹೊರಗೆ ನಿಂತವನು ಬಂದವನಿಗಿಂತಲೂ ದೊಡ್ಡ ಕಳ್ಳನಿರಬೇಕೆಂದು ಜಗದೀಶ್ ಲೆಕ್ಕ ಹಾಕಿದ್ದಾರೆ. ಮೊದಲು ಅವನನ್ನು ಹಿಡಿದರೆ ಒಳಗಿದ್ದವನನ್ನು ನಿಧಾನಕ್ಕೆ ಹಿಡಿಯಬಹುದೆಂಬ ಜಗದೀಶ್ ಎಣಿಕೆ ತಲೆಕೆಳಗಾಗಿದೆ. ಹೊರಗೆ ಬಂದು ಮತ್ತೊಬ್ಬ ಪೇದೆಗೆ ಎದುರು ದಿಕ್ಕಿನಿಂದ ಕವರ್ ಆಗು ನಾನು ಈ ದಿಕ್ಕಿನಿಂದ ಅಟ್ಟಿಸಿಕೊಂಡು ಬರುತ್ತೇನೆ ಎಂದು ಹೇಳಿ ಇನ್ನೊಬ್ಬನ ಬೆನ್ನು ಹತ್ತಿದ್ದೇ ಮಹಾಪರಾಧವಾಗಿದೆ.

ಮತ್ತೊಂದು ದಿಕ್ಕಿನಿಂದ ಓಡಿಬಂದು ಅಡ್ಡಗಟ್ಟಬೇಕಿದ್ದ ಪೇದೆ ಬರುವುದು ತಡವಾಗಿದೆ. ಇತ್ತ ಏಕಾಂಗಿಯಾಗಿ ಇನ್ನೊಬ್ಬನನ್ನು ಬೆನ್ನತ್ತಿದ್ದ ಜಗದೀಶ್ ಇನ್ನೇನು ಆತನನ್ನು ಹಿಡಿಯಬೇಕೆನ್ನುವಷ್ಟರಲ್ಲಿ ಷೋರೂಂನಿಂದ ಓಡಿಬಂದು ಬೈಕ್ ಎತ್ತಿಕೊಂಡು ಬಂದ ಮಧು ಎಂಬಾತ ಪರಾರಿಯಾಗುತ್ತಿದ್ದ ಇನ್ನೊಬ್ಬನನ್ನು ಸಮೀಪಿಸಿದ್ದಾನೆ. ಕಳ್ಳರು ಇಬ್ಬರು ಎಸ್‌ಐ ಒಬ್ಬ ಇನ್ನೇನು ಹಿಡಿಯಬೇಕೆನ್ನುವಷ್ಟರಲ್ಲಿ ಚಾಕು ತೆಗೆದದ್ದೇ ಆ 'ಇನ್ನೊಬ್ಬ' ಜಗದೀಶ್ ಮೇಲೆ ಎರಗಿದ್ದಾನೆ. ಇದ್ಯಾವುದನ್ನೂ ನಿರೀಕ್ಷಿಸದಿದ್ದ ಜಗದೀಶ್ ತನ್ನ ಖಾಕಿ ನಿಯತ್ತಿಗೆ ಬಿದ್ದು ಆ ಹಿರಿಯ ಕಳ್ಳನನ್ನು ಹಿಡಿಯಲೆತ್ನಿಸಿದರೆ ಹಳಗಿದ ಕಳ್ಳ ಇನ್ನೂ ಪ್ರಳಯಾಂತಕ. ಬಹುಶಃ ಕಾಲು ಎಡವಿತೋ, ರಿವಾಲ್ವರ್ ತಂದಿರಲಿಲ್ಲವೋ, ಓಡಿ ಸುಸ್ತಾಗಿದ್ದರೋ, ಬರಬೇಕಿದ್ದ ಮತ್ತೊಬ್ಬ ಪೇದೆ ತನ್ನ

ದಫೂತಿ ಹೊಟ್ಟೆ ಎತ್ತಿಕೊಂಡು ಓಡಲಾಗದೆ ಇನ್ನೆಲ್ಲೋ ಸುಸ್ತಾಗಿ ಕೂತು ನಿಟ್ಟುಸಿರಿಡುತ್ತಿದ್ದನೋ ಬಲ್ಲವರ್‍ಯಾರು?

ಅನ್ಯಾಯವಾಗಿ ಬಲಿಯಾಗಿದ್ದಾರೆ ದಿಟ್ಟ ಎಸ್‌ಐ ಜಗದೀಶ್. ಈಗ ಪೊಲೀಸರು ನೀಡುವ ಹೇಳಿಕೆಯೇ ನಿಜವಾಗಿದ್ದರೆ ತನ್ನ ಹೊರತಾಗಿ ಇನ್ನೂ ನಾಲ್ವರು ಪೇದೆಗಳ ಸಮೇತ ಜಗದೀಶ್ ಹೋಗಿದ್ದರೆ ಹೇಗೆ ತಾನೇ ಜಗದೀಶ್ ಈ ರೀತಿ ಸಾಯಬೇಕಿತ್ತು. ಪೊಲೀಸರು ಮೊದಲ ದಿನ ನೀಡಿದ ಹೇಳಿಕೆ ಪ್ರಕಾರ ಇರಿದವನು ಮಧು ತಂದೆ ಕೃಷ್ಣಪ್ಪ. ಆದರೆ ಎರಡನೇ ದಿನಕ್ಕೆ ಅದು ಕೃಷ್ಣಪ್ಪ ಅಲ್ಲ ಹರೀಶ್ ಬಾಬು ಎಂಬ ಸತ್ಯ ಅರಿವಾದದ್ದು ಯಾವ ಆಧಾರದ ಮೇಲೆ?

ಇದರರ್ಥ ತಾನು ಯಾರನ್ನು ಹಿಡಿಯಹೊರಟ ದ್ದೇನೆಂಬುದೇ ಜಗದೀಶ್‌ಗೆ ಗೊತ್ತಿರಲಿಲ್ಲ!

ಬಲಿಪಶು?


ಕೇವಲ ಮೊಬೈಲ್ ಸಂಭಾಷಣೆಯನ್ನು ಕೇಳಿ ಬ್ಲೈಂಡ್ ಆಗಿ ರಿವಾಲ್ವರನ್ನೂ ತೆಗೆದುಕೊಳ್ಳದೆ ಜೊತೆಗೊಬ್ಬ 'ಕೊಣಪ' ಪೇದೆಯನ್ನು ತನ್ನ ಖಾಸಗಿ ಬೈಕಿಗೆ ಹತ್ತಿಸಿಕೊಂಡು ಷೋರೂಂಗೆ ಬಂದಿದ್ದಾರೆ. ಮೊದಲೇ ಹೇಳಿದ್ದರೆ ಷೋರೂಂ ಸಿಬ್ಬಂದಿಯಾದರೂ ಹಿಡಿಯಲು ನೆರವಾಗುತ್ತಿದ್ದರೇನೊ. ಅವರಿಗೂ ಹೇಳಿಲ್ಲ. ಮಾಮೂಲಿ ಕಳ್ಳರಂತೆ ಪೊಲೀಸರೆಂದು ಗೊತ್ತಾದ ತಕ್ಷಣ ಓಡಲು ಯತ್ನಿಸುತ್ತಾರೆ ಹೊರತು ಪ್ರತಿದಾಳಿ ನಡೆಸಲಾರರು ಎಂಬ ಎಸ್‌ಐ ಜಗದೀಶ್‌ರ 'ಅತೀ ಆತ್ಮವಿಶ್ವಾಸ' ಈ ದಿನ ಕೈಕೊಟ್ಟಿದೆ. ರಿವಾಲ್ವರ್‌ವಿಹೀನ ಏಕಾಂಗಿ ಎಸ್‌ಐ ಮೇಲೆ ಪಳಗಿದ ಪಾತಕಿಗಳಿಬ್ಬರೂ ಸೇರಿಕೊಂಡು ಮಾರಕ ದಾಳಿಯೆಸಗಿದ್ದಾರೆ. ತನ್ನ ಖಾಕಿ ನಿಷ್ಠೆ, ಕರ್ತವ್ಯಪ್ರಜ್ಞೆ, ಆತ್ಮಸಾಕ್ಷಿಗೆ ಕಟ್ಟುಬಿದ್ದ ಜಗದೀಶ್ ಕ್ಷುಲ್ಲಕವಾಗಿ ಬಲಿಯಾಗಿದ್ದಾರೆ. ತನ್ನ ಮೇಲಧಿಕಾರಿಗಳಿಗೆ ತಿಳಿಸಿದ ಬಗ್ಗೆಯಾಗಲಿ, ಸ್ಥಳೀಯ ನೆಲಮಂಗಲ ಪೊಲೀಸರನ್ನು ವಿಶ್ವಾಸಕ್ಕೆ ಪಡೆದಾಗಲಿ ಕಾರ್ಯಾಚರಣೆಯೆಸಗಿದ್ದರೆ ಆ ಮಾತು ಬೇರೆ. ಎಲ್ಲಾ ಶ್ರೇಯಸ್ಸು ತನಗೇ ಸಲ್ಲಬೇಕೆಂಬ ದುರಾಶೆಯೋ ದುಡುಕುತನವೋ? ಜಗದೀಶ್ ಪಾಲಿಗೆ ಈ ದಿನ ಮಾತ್ರ ಅವರದ್ದಾಗಿರಲಿಲ್ಲ.

ಜಗದೀಶ್ ಓರ್ವ ಖಾಕಿ ನಿಷ್ಠ ಮತ್ತು ಜನಾನುರಾಗಿ ಪೊಲೀಸ್ ಅಧಿಕಾರಿ ಎಂಬುದಕ್ಕೆ ದೊಡ್ಡಬಳ್ಳಾಪುರದ ಜನ 'ಬಂದ್' ಮೂಲಕ ಗೌರವ ಸಲ್ಲಿಸಿದ್ದೇ ಸಾಕ್ಷಿ. ಕರ್ನಾಟಕದ ಉದ್ದಗಲಕ್ಕೂ ಜನ ಕಣ್ಣೀರಿಟ್ಟಿದ್ದಾರೆ. ಮಾಗಡಿ ತಾಲ್ಲೂಕು ಮಲ್ಲಾಪುರದಲ್ಲಿ ಹುಟ್ಟಿ ಓರ್ವ ಎಎಸ್‌ಐ ಮಗನಾಗಿ ತನ್ನ ಶಿಸ್ತು ಪರಿಶ್ರಮದಿಂದಲೇ ಸಬ್ ಇನ್ಸ್‌ಪೆಕ್ಟರ್ ಹುದ್ದೆ ಗಿಟ್ಟಿಸಿ ಕೊನೆಗೆ ತನ್ನ ಖಾಕಿ ರಕ್ತದ ಋಣಕ್ಕಾಗೇ ಪ್ರಾಣವನ್ನೂ ತೆತ್ತ ಎಸ್‌ಐ ಜಗದೀಶ್ ಓರ್ವ ಪೊಲೀಸ್ ಹುತಾತ್ಮ ಎಂದ ಡಿಐಜಿ ಓಂಪ್ರಕಾಶ್ ಸಾಹೇಬರ ಮಾತು ಅಕ್ಷರಶಃ ಸತ್ಯವೆ.

ಗುಲ್ಬರ್ಗಾದ ಎಸ್‌ಐ ಮಲ್ಲಿಕಾರ್ಜುನ ಬಂಡೆ ಹೇಗೆ ರೌಡಿಯೊಬ್ಬನ ಕೈಯಲ್ಲಿ ಗುಂಡೇಟು ತಿಂದು ಪ್ರಾಣತೆತ್ತರೋ ಅದೇ ರೀತಿ ಜಗದೀಶ್ ಕಳ್ಳರ ವಿರುದ್ಧ ಸೆಣಸಾಡಿ ಬಲಿಯಾಗಿದ್ದಾರೆ. ಅದೇ ನಿರ್ಲಕ್ಷ್ಯ, ಅದೇ ಅತೀ ವಿಶ್ವಾಸ, ಅದೇ ಒರಟು ಬುದ್ಧಿ ಇಂಥ ಘಟನೆಗಳೇ ತಾನೇ ಪೊಲೀಸ್ ಇಲಾಖೆಗೆ ಪಾಠವಾಗಬೇಕಿರುವುದು.....!

■ ರಾ. ಸೋಮನಾಥ್

ರಾಜೀನಾಮೆ ಸುನಾಮಿ



ದೇಶದಾದ್ಯಂತ ಸಾಹಿತಿಗಳು ತಮಗೆ ದೊರೆತ ಪ್ರಶಸ್ತಿ, ಗೌರವ ಸ್ಥಾನಗಳನ್ನು ತಿರಸ್ಕರಿಸುವ ಮೂಲಕ ಒಂದು ಆಂದೋಲನಕ್ಕೆ ಕಾರಣವಾಗಿದ್ದಾರೆ. ಭಾರತದಲ್ಲಿ ಈ ಬಗೆಯ ಸಾಹಿತಿಗಳ ಒಕ್ಕೊರಲಿನ ಪ್ರತಿರೋಧ ಹಿಂದೆಂದೂ ಈ ಬಗೆಯಲ್ಲಿ ಏಕರೂಪಿ ಧ್ವನಿಯಾಗಿರಲಿಲ್ಲ ಎನ್ನುವ ಮಾತಿದೆ. ಜಗತ್ತಿನ ಮಾಧ್ಯಮಗಳು ಭಾರತದ ಸಾಹಿತಿಗಳ ಈ ನಡೆಯನ್ನು ಬೆಂಬಲಿಸಿ, ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈಗಲೂ ಈ ಆಂದೋಲನಕ್ಕೆ ಜೊತೆಗೂಡುವ ಪ್ರಶಸ್ತಿ ವಾಪಸಾತಿಯ ವರದಿಗಳು ದಿನದಿನವೂ ಬರುತ್ತಿವೆ. ಆರಂಭಕ್ಕೆ ಇದೊಂದು ಸಾಂಕೇತಿಕ ಪ್ರತಿಭಟನೆಯಾಗಿ ಲಘುವಾದ ಸಂಗತಿಯಂತೆ ಬಿಂಬಿತವಾಗಿತ್ತು. ಆದರೆ ಇದೀಗ ಪ್ರಭುತ್ವವನ್ನು ಬೆಚ್ಚಿಬೀಳಿಸುವ ದೊಡ್ಡದೊಂದು ಪ್ರತಿರೋಧವಾಗಿ ರೂಪಾಂತರ ಹೊಂದುತ್ತಿದೆ, ಈ ಶಕ್ತಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.


ಮುಖ್ಯವಾಗಿ ದೇಶದಲ್ಲಿ ಅಸಹಿಷ್ಣುತೆ, ಮತೀಯ ಅಸಹನೆ, ಹಗೆತನ, ದ್ವೇಷ ಹೆಚ್ಚುತ್ತಿದ್ದು ಮತೀಯ ಸೈರಣೆಯನ್ನು ದೇಶ ಕಳೆದುಕೊಳ್ಳುತ್ತಿರುವಿಕೆಯನ್ನು ಬರಹಗಾರ ಸಮುದಾಯ ವಿರೋಧಿಸುತ್ತಿದ್ದಾರೆ. ಇದು ನಿಜಕ್ಕೂ ಜೀವಪರ ಸಂಗಾತಿಗಳ ಎಚ್ಚೆತ್ತ ಪ್ರಜ್ಞೆಯ ಭಾಗವಾಗಿದೆ. ಇದರಿಂದಾಗಿ ಜಡ್ಡುಗಟ್ಟಿದ ಸಾಹಿತಿಗಳೂ ಸಹ ಮೈಕೊಡವಿ ಎಚ್ಚರವಾಗಬೇಕಿರುವ ಕಾಲವಿದು. ಪ್ರಶಸ್ತಿ ವಾಪಸಾತಿ ಸಾಂಕೇತಿಕವಾಗಿದ್ದಾಗಲೂ ಎಲ್ಲರೂ ಪ್ರಶಸ್ತಿಯನ್ನು ವಾಪಸು ಮಾಡಿಯೇ ಈ ಹೋರಾಟದ ಭಾಗವಾಗಬೇಕಿಲ್ಲ, ಪ್ರಶಸ್ತಿ ವಾಪಸಾತಿಯ ಪ್ರತಿರೋಧವನ್ನು ಬೆಂಬಲಿಸಿಯೂ ಜತೆಗಿರಬಹುದಾಗಿದೆ. ಹಾಗಾಗಿ ಪ್ರಶಸ್ತಿ ವಾಪಸು ನೀಡದಿರುವ ಸಾಹಿತಿ ಚಿಂತಕರು ಅಸಹಿಷ್ಣು ಭಾರತದ ಜತೆಗಿದ್ದಾರೆಂದು ಭಾವಿಸಬೇಕಿಲ್ಲ, ಆದರೆ ಎಲ್ಲಾ ಸಾಹಿತಿ ಚಿಂತಕರು ತಮ್ಮ ಮೌನವನ್ನು ಮುರಿದು ಈ ಬಗ್ಗೆ ಗಟ್ಟಿ ಧ್ವನಿಯಲ್ಲಿ ಮಾತನಾಡಬೇಕಿದೆ. ಜೀವವಿರೋಧಿ ಸಂಗತಿಗಳ ವಿರುದ್ಧ ಬಂಡಾಯವೇಳಲು ಇದು ಸಕಾಲವೂ ಆಗಿದೆ,

ಒಂದು ರೀತಿಯಲ್ಲಿ ಈ ಬಗೆಯ ಸಾಹಿತಿಗಳ ಪ್ರತಿರೋಧಕ್ಕೆ ಕರ್ನಾಟಕವೆ ಮೂಲವಾಗಿದೆ. ವೈಚಾರಿಕ ಚಿಂತಕರಾದ ನರೇಂದ್ರ ಧಾಬೋಲ್ಕರ್, ಗೋವಿಂದ್ ಪನ್ಸಾರೆ ಹತ್ಯೆಯ ಸರಣಿಯಲ್ಲಿ ಕರ್ನಾಟಕದ ಹಿರಿಯ ಸಂಶೋಧಕರಾದ ಪ್ರೊ.ಎಂ.ಎಂ.ಕಲ್ಬುರ್ಗಿ ಅವರನ್ನು ದುಷ್ಕರ್ಮಿಗಳು ಗುಂಡಿಕ್ಕಿ ಕೊಂದಾಗ ಇಡೀ ದೇಶವೇ ಬೆಚ್ಚಿಬಿದ್ದಿತು. ಇನ್ನು ನಾವು ಮೌನವಾಗಿದ್ದರೆ ಆಗದೆಂದು ಬರಹಗಾರರೆಲ್ಲಾ ಸಿಡಿದೇಳುವ ಸಾಂಕೇತಿಕತೆಯ ಭಾಗವಾಗಿ ಪ್ರಶಸ್ತಿ ವಾಪಸಾತಿ ಆಂದೋಲನಕ್ಕೆ ಚಾಲನೆ ನೀಡಿದರು. ನಂತರದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯು ಎಂ.ಎಂ.ಕಲ್ಬುರ್ಗಿ ಅವರ ಹತ್ಯೆಯನ್ನು ಖಂಡಿಸುವಲ್ಲಿ ಮೌನವಾದ ಘಟನೆಯನ್ನು ವಿರೋಧಿಸಿ ಅನೇಕರು ಅಕಾಡೆಮಿಯ ಪ್ರಶಸ್ತಿ ಮತ್ತು ಸದಸ್ಯತ್ವವನ್ನು ಹಿಂತಿರುಗಿಸಿದ್ದಾರೆ. ಮುಂದುವರೆದು ಉತ್ತರಪ್ರದೇಶದ ದಾದ್ರಿಯಲ್ಲಿ ಸಂಭವಿಸಿದ ಅಮಾನುಷ ಘಟನೆಯನ್ನು ಆಧರಿಸಿ ಆಹಾರದ ಹಕ್ಕಿನ ಮೇಲಿನ ಹಲ್ಲೆಯನ್ನು ವಿರೋಧಿಸಿ ಪ್ರಶಸ್ತಿಗಳನ್ನು ವಾಪಾಸು ಮಾಡುತ್ತಿದ್ದಾರೆ. ಇದೀಗ ಈ ಎಲ್ಲಾ ಘಟನೆಗಳ ಎಳೆಯಾದ ಭಾರತದಲ್ಲಿ ಮತೀಯ ಅಸಹಿಷ್ಣುತೆ ಮತ್ತು ಭಾರತವನ್ನು ವೈಚಾರಿಕ ಅಸಹನೆಯ ಸಮಾಜವನ್ನಾಗಿ ಮಾಡುವ ಯತ್ನಗಳ ವಿರುದ್ಧದ ಚಳವಳಿಯಾಗಿ ರೂಪಾಂತರಗೊಂಡಿದೆ.

ಭಾರತದಲ್ಲಿ ಪ್ರಶಸ್ತಿ ವಾಪಸಾತಿ ಆಂದೋಲನವು ಜಾಗತಿಕ ಮಟ್ಟದಲ್ಲೂ ಸದ್ದು ಮಾಡಿದೆ. ಜಾಗತಿಕ ಪತ್ರಿಕೆಗಳು ಸುದ್ದಿಮಾಡಿವೆ. ಈತನಕ 50 ದೇಶಗಳು ಬೆಂಬಲ ಸೂಚಿಸಿ ಪ್ರತಿಭಟನೆ ಮಾಡಿವೆ. ಕೆನಡಾದಲ್ಲಿ ನಡೆದ 81ನೇ ಪೆನ್ ಇಂಟರ್ ನ್ಯಾಷನಲ್ ಸಮಾವೇಶದಲ್ಲಿ 150 ದೇಶಗಳ ಸಾಹಿತಿಗಳು ಮತ್ತು ಚಿಂತಕರು ಭಾರತದ ಲೇಖಕರಿಗೆ ರಕ್ಷಣೆ ಒದಗಿಸಬೇಕು, ವಾಕ್ ಸ್ವಾತಂತ್ರ್ಯವನ್ನು ರಕ್ಷಿಸಬೇಕು ಎಂದಿದ್ದಾರೆ. ಈ ಸಮಾವೇಶದಲ್ಲಿ ಭಾರತೀಯ ಲೇಖಕರ ಪರವಾಗಿ ತೆಗೆದುಕೊಂಡ ನಿರ್ಣಯ ಕುರಿತು ಭಾರತದ ರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿಗೆ ಪತ್ರ ಬರೆಯಲಾಗಿದೆ.

ಕರ್ನಾಟಕದಲ್ಲಿ ಮೊದಲಿಗರಾಗಿ ಹಿರಿಯರಾದ ಚಂದ್ರಶೇಖರ್ ಪಾಟೀಲ್ ಅವರು ಪಂಪ ಪ್ರಶಸ್ತಿಯನ್ನು ಹಿಂತಿರುಗಿಸಿಯೂ, ದೇಶ ಮಟ್ಟದಲ್ಲಿ ಹಿಂದಿ ಲೇಖಕ ಉದಯ್ ಪ್ರಕಾಶ್ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಹಿಂತಿರುಗಿಸುವ ಮೂಲಕ ಚಳವಳಿಗೆ ಚಾಲನೆ ನೀಡಿದ್ದರು. ಆ ನಂತರ 30 ಕ್ಕೂ ಹೆಚ್ಚಿನ ಲೇಖಕರು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ. ಈ ಚಳವಳಿಯಲ್ಲಿ ಆಯಾ ರಾಜ್ಯಗಳಲ್ಲಿಯೂ ರಾಜ್ಯಮಟ್ಟದ ಪ್ರಶಸ್ತಿಗಳನ್ನು ಹಿಂತಿರುಗಿಸುವ ಮೂಲಕ ಪ್ರತಿಭಟನೆಯನ್ನು ದಾಖಲಿಸುತ್ತಿದ್ದಾರೆ.

ದೇಶದಾದ್ಯಂತ ಪ್ರಶಸ್ತಿ ವಾಪಸಾತಿ ಆಂದೋಲನಕ್ಕೆ ಮಹಿಳಾ ಲೇಖಕಿ ಚಿಂತಕಿಯರು ಕೂಡ ಪ್ರಬಲ ಬೆಂಬಲ ಸೂಚಿಸಿದ್ದಾರೆ. ಪಂಜಾಬಿನ ಕಾದಂಬರಿಗಾರ್ತಿ ದಲಿಪ ಕೌರ್ ತಿವಾನ ಪದ್ಮಶ್ರೀ ಪ್ರಶಸ್ತಿಯನ್ನು ತಿರಸ್ಕರಿಸಿದ್ದಾರೆ, ಹಿರಿಯ ಲೇಖಕಿ ನಯನತಾರಾ ಸೆಹಗಲ್, ಬೆಂಗಾಳಿಯ ಯುವ ಲೇಖಕಿ ಮಂದಕ್ರಾಂತ್ ಸೇನ್, ಮಲಯಾಳಂ ಲೇಖಕಿ ಸಾರಾ ಜೋಸೆಫ್, ತೆಲುಗು ಲೇಖಕಿ ಕೆ.ಕಾತ್ಯಾಯಿನಿ, ಪುಣೆಯ ಪೂರ್ಣಿಮಾ ಪವಾರ್, ಕನ್ನಡ ಮೂಲದ ಶ್ರೀರಂಗರ ಮಗಳು ಇಂಗ್ಲಿಷ್ ಕಾದಂಬರಿಗಾರ್ತಿ ಶಶಿ ದೇಶಪಾಂಡೆ, ಕೃಷ್ಣ ಸೋಬ್ತಿ, ಕನ್ನಡದ ಲೇಖಕಿಯರಾದ



ಅಭಿಪ್ರಾಯ ರೂಪಿಸುವ ಯತ್ನಗಳು ನಡೆಯುತ್ತಿವೆ. ಮತೀಯವಾದಿ ಸಿನಿಕರು ಸಾಮಾಜಿಕ ಜಾಲತಾಣಗಳನ್ನು ಗೇಲಿ ಮಾಡುವುದೂ ನಡೆದಿದೆ. ಅಂತೆಯೇ ಗುಜರಾತ್ ಮೂಲದ ಭಾಷಾಶಾಸ್ತ್ರಜ್ಞ ಗಣೇಶ್ ದೇವಿ ಅವರನ್ನು ಭಾರತ ಸರಕಾರದ ಗುಪ್ತಚರ ದಳದವರು ವಿಚಾರಿಸಿದ್ದು ವರದಿಯಾಗಿದೆ. ಅಂತೆಯೇ ತುರ್ತು ಪರಿಸ್ಥಿತಿಯಲ್ಲಿ ಈ ಲೇಖಕರು ಯಾಕೆ ಪ್ರಶಸ್ತಿ ಹಿಂದಿರುಗಿಸಲಿಲ್ಲ ಎನ್ನುವ ಚರ್ಚೆಗಳೂ ನಡೆಯುತ್ತಿವೆ. ವ್ಯಂಗ್ಯವೆಂದರೆ 40 ರ



ಕೆ.ನೀಲಾ, ಬಿ.ಟಿ.ಜಾಹ್ನವಿ, ಕೆ.ಅಕ್ಷತಾ ಹುಂಚದಕಟ್ಟೆ, ಶ್ರೀದೇವಿ ಆಲೂರು, ಕಿರಿಯ ಬರಹಗಾರ್ತಿ ಮುದ್ದು ತೀರ್ಥಹಳ್ಳಿ ಹೀಗೆ ದೇಶದಾದ್ಯಂತ ಮಹಿಳಾ ಲೇಖಕಿಯರು ಈ ಆಂದೋಲನಕ್ಕೆ ಬಲ ತುಂಬುತ್ತಿದ್ದಾರೆ. ಹೋರಾಟಗಾರ್ತಿ ಮೇಧಾ ಪಾಟ್ಕರ್ ಅವರು ಲೇಖಕರ ಪ್ರಶಸ್ತಿ ಗೌರವ ತಿರಸ್ಕಾರವು ಹೆಚ್ಚುತ್ತಿರುವ ಅಸಹಿಷ್ಣುತೆಯ ವಿರುದ್ಧದ ಹೋರಾಟಕ್ಕೆ ದೊಡ್ಡ ಬೆಂಬಲ ಸಿಕ್ಕಂತಾಗಿದೆ ಎಂದಿದ್ದಾರೆ.

ಕರ್ನಾಟಕದಲ್ಲಿ ಚಂಪಾ ಆದಿಯಾಗಿ ಅರವಿಂದ ಮಾಲಗತ್ತಿ, ಪ್ರೊ.ರಹಮತ್ ತರೀಕೆರೆ, ಕುಂ.ವೀರಭದ್ರಪ್ಪ, ಶ್ರೀನಾಥ ಡಿ.ಎನ್, ಡಿ.ಉಮಾಪತಿ, ಉಗಮ ಶ್ರೀನಿವಾಸ, ಚಿಕ್ಕಪ್ಪನಹಳ್ಳಿ ಷಣ್ಮುಖ, ಡಾ.ಕಾಶೀನಾಥ ಹಂಬಲಗಿ, ಕೆ.ನೀಲಾ, ಪ್ರೊ.ಆರ್.ಕೆ.ಹುಡುಗಿ, ಚಿದಾನಂದ ಸಾಲಿ, ವೀರಣ್ಣ ಮಡಿವಾಳರ, ಸತೀಶ್ ಜವರೇಗೌಡ, ಸಂಗಮೇಶ ಮೆಣಸಿನಕಾಯಿ, ಹನುಮಂತ ಹಾಲಿಗೇರಿ, ಶ್ರೀದೇವಿ ವಿ.ಆಲೂರು, ಅಕ್ಷತಾ ಹುಂಚದಕಟ್ಟೆ, ಬಿ.ಟಿ.ಜಾಹ್ನವಿ, ಮುದ್ದು ತೀರ್ಥಹಳ್ಳಿ, ಡಾ. ಶಿವಾನಂದ ಎಚ್. ಬಂಟನೂರ ಮೊದಲಾದವರು ತಮಗೆ ಬಂದ ಪ್ರಶಸ್ತಿಗಳನ್ನು ವಾಪಸು ನೀಡುವ ಮೂಲಕ ಈ ಆಂದೋಲನದ ಭಾಗವಾಗಿದ್ದಾರೆ. ಅಂತೆಯೇ ಅನೇಕ ಹಿರಿಯ ಕಿರಿಯ ಸಾಹಿತಿ ಚಿಂತಕರು ಈ ವಾಪಸಾತಿಯನ್ನು ಬೆಂಬಲಿಸಿ ಹೋರಾಟದ ಜತೆಗಿದ್ದಾರೆ. ಇದೀಗ ಬಂದ ಸುದ್ದಿಯೆಂದರೆ ಕರ್ನಾಟಕ ಕೇಂದ್ರೀಯ ವಿವಿಯ ಕನ್ನಡ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ವಿಕ್ರಮ್ ವಿಸಾಜಿ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿಯ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಈ ಚಳವಳಿಯನ್ನು ದಮನಗೊಳಿಸುವ ಪ್ರಕ್ರಿಯೆಗಳೂ ಕ್ರಿಯಾಶೀಲವಾಗಿವೆ. ಒಂದೆಡೆ ಕಾಂಗ್ರೆಸ್‌ಪ್ರೇರಿತ ಹೋರಾಟವೆಂತಲೂ, ಉತ್ಪಾದಿತ ಚಳವಳಿ ಎಂತಲೂ

ಆಸುಪಾಸಿನ ಲೇಖಕರು ಈ ಸಂದರ್ಭದಲ್ಲಿ ಜನಿಸಿಯೇ ಇರಲಿಲ್ಲ, ವಾಪಾಸು ಮಾಡಿದ ಬಹುತೇಕ ಪ್ರಶಸ್ತಿಗಳು ತುರ್ತುಪರಿಸ್ಥಿತಿಯ ನಂತರ ಬಂದವಾಗಿವೆ. ಅಷ್ಟಕ್ಕೂ ಯಾವುದೇ ಕಾಲವೂ ಆಯಾ ಕಾಲದ ಬಿಕ್ಕಟ್ಟಿನ ಒಳಗಿನಿಂದಲೇ ಪ್ರತಿಭಟನೆಗಳು ಹುಟ್ಟಿರಲಿಕ್ಕೆ ಸಾಕು. ಹಾಗಾಗಿ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಕೆಲವು ಲೇಖಕರು ತಮ್ಮ ಪ್ರಶಸ್ತಿಗಳನ್ನು ತಿರಸ್ಕರಿಸಿದ್ದರೂ ಕೂಡ. ಈ ಪ್ರಮಾಣ ಕಡಿಮೆ ಇರಬಹುದು. ಅಷ್ಟಕ್ಕೂ ಆಗಿನ ಲೇಖಕರ ತಿಳಿವಿನ ಕ್ರಮಕ್ಕೂ ಇಂದಿನ ಲೇಖಕರ ತಿಳಿವಿನ ಕ್ರಮಕ್ಕೂ ಸಾಕಷ್ಟು ಭಿನ್ನತೆಗಳಿರಲಿಕ್ಕೆ ಸಾಕು.

ಒಂದೆಡೆ ಮತೀಯ ದ್ವೇಷದ ನವಭಯೋತ್ಪಾದನೆಯನ್ನು ಮೂಲಭೂತವಾದಿ ಶಕ್ತಿಗಳು ಸಕ್ರಿಯವಾಗಿ ದೇಶದಲ್ಲಿ ಹಬ್ಬಿಸುತ್ತಿವೆ. ಇಂತಹ ಘಟನೆಗಳನ್ನು ಸಮರ್ಥಿಸಿಕೊಳ್ಳುವ ಮಟ್ಟಕ್ಕೆ ಬೆಳೆದಿವೆ. ಅಸಂವಿಧಾನಿಕ ನಡೆಗಳು ಬಲಗೊಳ್ಳುತ್ತಿವೆ. ಇಂತಹ ಅಸಹನೆಯ ಉತ್ಪಾದನೆಯನ್ನು ನಿಯಂತ್ರಿಸುವ, ಬೇರು ಸಹಿತ ಕೀಳುವ ಮಾತನಾಡಬೇಕಿದ್ದ ಕೇಂದ್ರ ಸರಕಾರ ಮೌನ ತಾಳಿದೆ. ಬದಲಾಗಿ ಪ್ರಶಸ್ತಿ ವಾಪಸಾತಿ ಆಂದೋಲನವನ್ನು ಅರುಣ್ ಜೇಟ್ಲಿ ಅವರು 'ಉತ್ಪಾದಿತ ಪ್ರತಿಭಟನೆ' ಎಂದು ರಾಜಕೀಯ ಬಣ್ಣ ಬಳಿಯಲು ಪ್ರಯತ್ನಿಸಿದ್ದಾರೆ. ಮೋದಿ ಅವರು ಪ್ರಶಸ್ತಿ ವಾಪಸಾತಿಗೆ ಕಾರಣವಾದ ದಾದ್ರಿ ಘಟನೆಯನ್ನು ಆಕಸ್ಮಿಕ ಎಂದು ಜಾರಿಕೊಂಡಿದ್ದಾರೆ. ಬಿ.ಜೆ.ಪಿಯ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾ ಆಯಾ ಘಟನೆಗಳಿಗೆ ಆಯಾ ರಾಜ್ಯ ಸರಕಾರವೆ ಕಾರಣ, ಅವು ಕೇಂದ್ರ ಸರಕಾರಕ್ಕೆ ಸಂಬಂಧಿಸಿದ್ದಲ್ಲ ಎಂದು ಹೇಳಿದ್ದಾರೆ. ಈ ಹೇಳಿಕೆಗಳು ಪ್ರಭುತ್ವದ ನಡೆಗಳ ದಿಕ್ಕನ್ನು ಸ್ಪಷ್ಟವಾಗಿ ಕಾಣಿಸುತ್ತಿದೆ. ಅಂತೆಯೇ ಪ್ರಜ್ಞಾವಂತರು ಬಂಡೇಳಬೇಕಾದ ಕಾಲವಿದೆಂಬ ಮುನ್ಸೂಚನೆಯೂ ಇಲ್ಲಿದೆ.

■ ಅರುಣ್ ಜೋಳದಕೂಡ್ಲಿಗಿ

ಕರ್ನಾಟಕದಲ್ಲಿ ಪ್ರ

ಪಂಪ ಪ್ರಶಸ್ತಿಯನ್ನು ಹಿಂತಿರುಗಿಸುವುದಕ್ಕೆ ಮೂರು ಹಕ್ಕೊತ್ತಾಯಗಳು:

1. ಎಂ.ಎಂ.ಕಲ್ಬುರ್ಗಿಯ ಅವರ ಹತ್ಯೆಯ ತನಿ ಚುರುಕುಗೊಳಿಸಬೇಕು. ಹಂತಕರು ಮತ್ತು ಹಂತಕರ ಶಕ್ತಿಗಳು ಪತ್ತೆಯಾಗಬೇಕು.

2. ಮೂರು ವರ್ಷದ ಹಿಂದೆ ಕೊಲೆಯಾದ ಸತ್ಯಂಪೇಟೆ ಅವರ ಕೊಲೆಯ ಬಗ್ಗೆ ತನಿಖೆಯಾಗಬೇಕು.


3. ಕರ್ನಾಟಕ ಸರಕಾರ ಮೌಢ್ಯವಿರೋಧಿ ವಿ ಸಂಬಂಧಿಸಿದಂತೆ ವಿಶೇಷ ಅಧಿವೇಶನವನ್ನು ಕರೆದು ಈ ವಿಧೇಯಕವನ್ನು ಕಾನೂನಾಗಿ ಜಾರಿಗೊಳಿಸಬೇಕು.



- ಪ್ರೊ.ಚಂದ್ರಶೇಖರ ಪಾಟೀಲ, ಬೆಂಗಳೂರು.

* **

ಹಕ್ಕುಗಳು ಮುಳುಗುವಾಗ
ಧಾವಿಸುತ್ತವೆ ಕೈಗಳು ಎಡಬಿಡದೆ
ಉದುರುತ್ತವೆ ಪ್ರಶಸ್ತಿಗಳು ಗೌರವಗಳು
ತರಗೆಲೆಗಳಾಗಿ
ಅವು ಹೇಳುತ್ತವೆ ಕೇಳುತ್ತವೆ
'ಮನ್ ಕಿ ಬಾತ್'
ಸಭೆಯಿಲ್ಲ ಮಾತಿಲ್ಲ ಸುರಿಸುತ್ತವೆ ಮಳೆ
ಬೇಡುತ್ತವೆ ಸಹಿಷ್ಣುತೆ-ವ್ಯವಧಾನ
ದೇಶದ ಅಭ್ಯುದಯಕ್ಕೆ ತಲೆಕೊಟ್ಟವರು
ಹಿಡಿದದ್ದು ಬಂದೂಕಲ್ಲ, ಲೇಖನಿ.



ನಮಗೆ ನಂಬಿಕೆ ಇದೆ,
ಭಾರತದಲ್ಲಿ ನೀರು
ಜೊಂಡುಗಟ್ಟಲು
ಬಿಡುವುದಿಲ್ಲ
ಹರಿಯುತ್ತವೆ ಅವು
ಸದಾ ಕಲರವಿಸುತ್ತಾ

ಅರವಿಂದ ಮಾಲಗತ್ತಿ, ಪ್ರಾಧ್ಯಾ
ಮೈಸೂ

* **

ಮಹಾರಾಷ್ಟ್ರದಲ್ಲಿ ವಿಚಾರವಾದಿಗಳೆನಿಸಿದ್ದ ದಾಭೋ ಪಾನ್ಸರೆ ಹತ್ಯೆ ನಡೆದು ನಮ್ಮನ್ನು ದಿಗ್ಭ್ರಮೆಗೊಳಿಸಿ ನೋವು ಇನ್ನೂ ಮಾಸದಿರುವ ಮೊದಲೆ ಕರ್ನಾ ಖ್ಯಾತ ಸಂಶೋಧಕರೂ, ವಿಶ್ರಾಂತ ಕುಲಪತಿಗಳ ಪ್ರೊ ಎಂ ಎಂ ಕಲಬುರ್ಗಿಯವರ ಹತ್ಯೆಯನ್ನು ಗಡುಕರು ಹಗಲು ಹೊತ್ತಿನಲ್ಲಿ ನಡೆಸಿ ಪರಾರಿಯ ಈ ಕೊಲೆಗಳನ್ನು ಯಾರು ಯಾವ ಕಾರಣಕ್ಕೆ ದರೆನ್ನುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಈ ಘಟನೆಗಳನ್ನು ದೇಶದಾದ್ಯಂತ ಪ್ರಗತಿಪರ ಲೇ ಸಾಹಿತ್ಯಾಭಿಮಾನಿಗಳು ಅಪಾರ ಪ್ರಮಾಣದಲ್ಲಿ ಖಂಡಿ ಹಿಂಸೆಯ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಗೊಳಿಸುವ ನೀಚ ಕಾರ್ಯ ವ್ಯವಸ್ಥಿತವಾಗಿ ನಡೆ ಎನ್ನುವುದು ಮೇಲ್ನೋಟಕ್ಕೆ ತಿಳಿದಿರುವ ಸತ್ಯ.


ದೇಶದ ಅತ್ಯುನ್ನತ ಸಾಹಿತ್ಯಿಕ ಸಾಂಸ್ಕೃತಿಕ ಸಂ ಸಾಹಿತ್ಯ ಅಕಾಡೆಮಿ ಇಂಥ ಅಮಾನವೀಯ ಕೊಲೆ ಮೂಲಭೂತವಾದಿಗಳ ಅಸಂವಿಧಾನಿಕ ಭೀ ನಡೆನುಡಿಯನ್ನು ಸಾರ್ವಜನಿಕವಾಗಿ ಪ್ರತಿಭಟಿಸಬಹ ಭಾರತದ ಸಾರಸ್ವತಲೋಕ ನಿರೀಕ್ಷಿಸಿತ್ತು. ಆದರೆ ದಿವ್ಯ ಮೌನವಹಿಸಿದ್ದರಿಂದ ಲೇಖಕರೂ, ಅಕಾ ಫಲಾನುಭವಿಗಳೂ ಆದ ನಮ್ಮ ಮನಸ್ಸಿಗೆ ತೀವ್ರ ನೋ ದಿ ಪ್ರೊ ಕಲಬುರ್ಗಿ ಹೊರಗಿನವರಲ್ಲ, ಅಕಾಡೆಮಿಯ ಮಂಡಳಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದವರು ಒಂದು ಕೃತಿಗೆ ಸಾಹಿತ್ಯ ಅಕಾಡೆಮಿಯ ಪ್ರತಿಷ್ಠಿತ ಭಾಜನರಾಗಿದ್ದವರು. ಇಂಥ ಹಿರಿಯ ಲೇಖಕರ ಕಗ್ಗೊ ಅಕಾಡೆಮಿ ಕಠಿಣ ಮಾತುಗಳಲ್ಲಿ ಖಂಡಿಸಬೇಕಿತ್ತು ನೀವು ಮೌನ ವಹಿಸಿದಿರಿ. ಇನ್ನೂ ಹಲವು ಕಾರಣ ಅಕಾಡೆಮಿಯ ಮೌನವನ್ನು ನಾವು ಒಕ್ಕೊರ ಖಂಡಿಸುವೆವು.

ನಮ್ಮ ದೇಶದಲ್ಲಿನ ಸಾಮಾಜಿಕ ಪರಿಸ್ಥಿತಿ, ಪ್ರಜಾ ವ್ಯವಸ್ಥೆ ಸಂವಿಧಾನ ಇತರೇ ದೇಶಗಳಿಗಿಂತ ಭಿನ್ನ ಮತ್ತು ಮಾದರಿಯೆನ್ನಿಸಿದೆ, ಕಾರಣ ನಮ್ಮ ವೈವಿಧ್ಯಮಯ ಜೀವನ ಶೈಲಿ, ಆಹಾರಾಭ್ಯಾಸ, ಜ ವ್ಯವಸ್ಥೆ ವಿಭಿನ್ನ ಸಂಸ್ಕೃತಿಗಳು, ಧಾರ್ಮಿಕ ಸಹಿಷ್ಣು ಹಲವು ಪ್ರಾದೇಶಿಕ ಭಾಷೆಗಳು. ಆದ್ದರಿಂದ ನಮ್ಮ ಕವಿಗಳು ಸರ್ವಜನಾಂಗದ ಶಾಂತಿಯ ತೋ ವರ್ಣಿಸಿರುವರು. ಆದರೆ ನಮ್ಮ ದೇಶದ ಸಾಂ

ವಾಪಸಾತಿ ಮಾಡಿದಾಗ ಸಾಹಿತಿಗಳು ಬರೆದ ಲಭ್ಯ ಪತ್ರಗಳ ಆಯ್ದ ಭಾಗಗಳು...

…ಪ್ರಜಾಪ್ರಭುತ್ವ ಆಶಯಗಳಿಗೆ ಧಕ್ಕೆಯನ್ನುಂಟು …ವಂಥ ಅಹಿತಕರ ಘಟನೆಗಳು ಅವ್ಯಾಹತವಾಗಿ …ಯುತ್ತಿವೆ.


…ಉದಾಹರಣೆಗೆ ಉತ್ತರಪ್ರದೇಶದ ದಾದ್ರಿಯಲ್ಲಿ …ಸಿದ ಅಮಾನುಷ ಘಟನೆ. ದನದ ಮಾಂಸ …ದರೆಂಬ ಕ್ಷುಲ್ಲಕ ಕಾರಣಕ್ಕೆ ಮೂಲಭೂತವಾದಿಗಳು …ಂ ಕುಟುಂಬದ ಮೇಲೆ ಹಲ್ಲೆ ನಡೆಸಿ ಕೊಲೆ …ದರು. ಇಂಥ ಹಲ್ಲೆ ಕೊಲೆಗಳ ಮೂಲಕ ಈ …ದ ವೈವಿಧ್ಯತೆಗೆ ಭಂಗ ತರುವಂಥ, ಸಾಮಾಜಿಕ …ದಿಯನ್ನು ನಾಶಮಾಡುವಂಥ, ಸಹಿಷ್ಣುತೆಯನ್ನು …ಗೆಡುವಂಥ ಸನ್ನಿವೇಶವನ್ನು ಸನಾತನಿಗಳು ನಿರ್ಮಾಣ …ಮತ್ತಿದ್ದಾರೆ. ಇಂಥ ಅನಾಹುತಕಾರಿ ಸನಾತನ …ಕಿಗಳು ಕಾನೂನನ್ನು ಕೈಗೆತ್ತಿಕೊಳ್ಳುತ್ತಿದ್ದಾರೆ, ಸನಾತನ …ಗಳನ್ನು ವರ್ತಮಾನದ ಸಿಂಹಾಸನದ ಮೇಲೆ …ಪಿಸಲು ಪ್ರಯತ್ನಿಸುತ್ತಿದ್ದಾರೆ. ತಮ್ಮ ಬುಲೆಟ್ಟಿನ …ಲಕ ಪೆನ್ನನ್ನು ಬೆಚ್ಚಿಬೀಳಿಸುತ್ತಿದ್ದಾರೆ. ದೇಶದ …ನಶೈಲಿಯನ್ನು ತಮ್ಮ ಮೂಗಿನ ನೇರಕ್ಕೆ ತಿದ್ದುವ



…ತ್ನ ನಡೆಸಿದೆ. ತಮ್ಮ ಪುರಾಣಶೈಲಿ ನಡೆನುಡಿಯಿಂದ …ಪರ ಲೇಖಕರಲ್ಲಿ ಚಿಂತಕರಲ್ಲಿ ಭಯ ಸೃಷ್ಟಿಸುವಂಥ …ಯೋತ್ಪಾದಕ ವ್ಯವಸ್ಥೆಯ ಹುಟ್ಟಿಗೆ ಕಾರಣರಾಗುತ್ತಿದ್ದಾರೆ. … ಹೀನ ಕೃತ್ಯಗಳಿಂದಾಗಿ ದೇಶದೆಲ್ಲೆಡೆ ಉಸಿರುಗಟ್ಟುವಂಥ …ವರಣ ನಿರ್ಮಾಣ ಗೊಂಡಿದೆ.

-ಕುಂ. ವೀರಭದ್ರಪ್ಪ, ಕೊಟ್ಟೂರು.

ಕನ್ನಡದ ಹಿರಿಯ ಸಂಶೋಧಕರೂ ಸಾಹಿತ್ಯ ಅಕಾಡೆಮಿ … ವಿಜೇತರೂ ಆಗಿದ್ದ ಪ್ರೊ.ಎಂ.ಎಂ.ಕಲ್ಬುರ್ಗಿಯವರ …ಮಾನುಷ ಹತ್ಯೆಯನ್ನು ಸಾಹಿತ್ಯ ಅಕಾಡೆಮಿಯು ಈತನಕ …ಸದೆ ಮೌನವಾಗಿರುವುದು ವಿಷಾದದ ಸಂಗತಿ. ಶ್ರೀ …ಭೋಲ್ಕರ್, ಪನ್ಸಾರೆ, ಕಲ್ಬುರ್ಗಿ ಅವರ ಕೊಲೆಗಳು …ತವನ್ನು ವೈಚಾರಿಕ ಅಸಹನೆಯ ಸಮಾಜವನ್ನಾಗಿ …ಸುವ ಯತ್ನಗಳಾಗಿವೆ. ಈಚೆಗೆ ದಾದ್ರಿಯಲ್ಲಿ ನಡೆದ …ಯು ಸಹ ಈ ಅಸಹನೆಯ ಒಂದು ಭಾಗವಾಗಿದೆ. …ರ ಮತ್ತು ಆಹಾರಗಳ ಮೇಲಿನ ಈ ಹಲ್ಲೆಯನ್ನು …ರೋಧಿಸುವ ನೆಲೆಯಲ್ಲಿ, ಅಕಾಡೆಮಿಯು ನನಗೆ …ಕ್ಕಿರುವ (2010) ಪ್ರಶಸ್ತಿಯನ್ನು ಈ ಮೂಲಕ …ರುಗಿಸುತ್ತಿದ್ದೇನೆ.



-ಪ್ರೊ. ರಹಮತ್ ತರೀಕೆರೆ, ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ

…ಜನತಾಂತ್ರಿಕ ಆವರಣವನ್ನು ಪ್ರಜ್ಞಾಪೂರ್ವಕವಾಗಿ …ನಾಶವಾಗುತ್ತಿರುವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ …ಲಿಗಳಿಗೆ ಕಾಡತೂಸುಗಳ ತೂರಿಸುವ, ಉಣ್ಣುವ … ಉಡುವ ಬಟ್ಟೆ, ಆಡುವ ಮಾತನ್ನು ಡಿಕ್ಟೇಟ್ …ಡುವ ಬಹುಮುಖಿ ಜನಜೀವನವನ್ನು …ಮುಖಿಯಾಗಿಸಲು, ಕಡೆಗೆ ಪ್ರತಿಭಟನೆಯ ವಿಧಾನವನ್ನೂ … ಮಾಡಲು ಮುಂದಾಗಿರುವ ಶಕ್ತಿಗಳು ಹಿಂದೆಂದೂ …ನ್ನು ಗರಿಷ್ಠ, ಗಟ್ಟಿಗೊಳಿಸುತ್ತಿವೆ. ಹೀಗಾಗಿ ನನ್ನದೊಂದು … ಪ್ರತಿಭಟನೆ. ಇದನ್ನೂ ಕಿತ್ತುಕೊಳ್ಳದಿರಿ ಎಂದು …ಬಲ್ಲೆನೆ. ಇದೊಂದೇ ಮಾರ್ಗವಲ್ಲದೆ ಪ್ರತಿಭಟನೆಗೆ … ಹಲವು ದಾರಿಗಳಿದ್ದಾವು, ಆದರೆ ನಾನು ಈ …ಆರಿಸಿಕೊಂಡಿದ್ದೇನೆ.

-ಬಿ.ಉಮಾಪತಿ, ಪತ್ರಕರ್ತರು, ದೆಹಲಿ.

…ಮರಳಿಸುತ್ತಿರುವುದು ಭಾವನಾತ್ಮಕ ನಿರ್ಧಾರ ಅಲ್ಲ, ನೈತಿಕ ಜವಾಬ್ದಾರಿಯ ನಿರ್ವಹಣೆ ಎಂದೇ ಭಾವಿಸುತ್ತೇನೆ. ಒಂದರ್ಥದಲ್ಲಿ ಇದು ಆಲೋಚನಾ ಕ್ರಮಗಳ ಸ್ಪಷ್ಟ ಅರಿವು. ವಾಸ್ತವಿಕ ನೋವು ಹಾಗೂ ತಾತ್ವಿಕ ತಾಕಲಾಟಗಳ ನಡುವೆ ವಿವೇಚನೆಯಿಂದಲೇ ಈ ಕ್ರಮಕ್ಕೆ ಮುಂದಾಗಿದ್ದೇನೆ.


ಯಾರು ಏನೇ ಹೇಳಲಿ, ಪ್ರಶಸ್ತಿ ಸಂದ ಬಗೆ ಹಾಗೂ ಅದರ ಮೌಲ್ಯ ವಿಮರ್ಶಿಸಲಿ. ನನಗದು ಅನ್ವಯಿಸುವುದಿಲ್ಲ. ಆಲೋಚನಾ ಕ್ರಮಗಳಿಗೆ ವಿರುದ್ಧವಾದ ನಡೆಗಳಿಗೆ ಅಭಿವ್ಯಕ್ತಿ ನೆಲೆಯಲ್ಲಿ ಜಾಗ ಸಿಗದು. ವಿವೇಚನೆಯಿಂದಲೇ ಪ್ರಶಸ್ತಿ ವಾಪಾಸ್ಸು ಮಾಡುತ್ತಿದ್ದೇನೆ.

- ಚಿಕ್ಕಪ್ಪನಹಳ್ಳಿ ಷಣ್ಮುಖ, ಪತ್ರಕರ್ತರು, ಬಾಗಲಕೋಟೆ

ದೇಶವ್ಯಾಪಿ ಕರ್ನಾಟಕದ ಹಿರಿಯ ಸಂಶೋಧಕರಾದ ಎಂ.ಎಂ.ಕಲ್ಬುರ್ಗಿ ಅವರ ಹತ್ಯೆಯನ್ನು ಖಂಡಿಸಿ ಮತ್ತು ದೇಶದಲ್ಲಿ ಹೆಚ್ಚುತ್ತಿರುವ ಮತೀಯ ಅಸಹನೆಯನ್ನು ವಿರೋಧಿಸಿ ಕೇಂದ್ರ ಮತ್ತು ರಾಜ್ಯ ಸರಕಾರ ನೀಡಿದ ಪ್ರಶಸ್ತಿಗಳನ್ನು ಸಾಹಿತಿಗಳು ಚಿಂತಕರು ದೇಶಾದ್ಯಂತ ಹಿಂತಿರುಗಿಸುತ್ತಿದ್ದಾರೆ. ಸತ್ಯಾಗ್ರಹ, ಧರಣಿಯನ್ನು ಒಳಗೊಂಡಂತೆ ಚಳವಳಿಯ ಹಲವು ರೂಪಗಳಲ್ಲಿ ಪ್ರಭುತ್ವದ ನೀತಿಗಳನ್ನು ವಿರೋಧಿಸಿ ಪ್ರಭುತ್ವ ನೀಡಿದ ಗೌರವಗಳನ್ನೂ ಪ್ರಶಸ್ತಿಗಳನ್ನೂ ಬಹಿಷ್ಕರಿಸುವುದೂ ಕೂಡ ಚಳವಳಿಯ ಒಂದು ಕ್ರಮವಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಮತೀಯ ಮತ್ತು ಪ್ರಭುತ್ವದ ಪರವಾದ ಶಕ್ತಿಗಳು ಈ ಕ್ರಮವನ್ನು ಸಮೂಹ ಸನ್ನಿ ಎಂದು ನಕಾರಾತ್ಮಕವಾಗಿ ಸಿನಿಕತೆಯಿಂದ ಟೀಕಿಸುತ್ತಿವೆ. ಆದರೆ ನಿಜದಲ್ಲಿ ಈ ಪ್ರಕ್ರಿಯೆ ಸಮೂಹ ಸನ್ನಿಯಾಗಿರದೆ, ಪ್ರತಿರೋಧವಾಗಿಯೂ ಚಳವಳಿಯ ಭಾಗವಾಗಿಯೂ ನಡೆಯುತ್ತಿದೆ.

ಈಚೆಗೆ ದಲಿತ ಸಮುದಾಯದ ಮೇಲೆ ನಿರಂತರ ಹಲ್ಲೆಗಳು ಸರಣಿರೂಪದಲ್ಲಿ ಘಟಿಸುತ್ತಿವೆ. ರಾಜ್ಯ ಮತ್ತು ದೇಶದಲ್ಲಿ ನಿರಂತರವಾಗಿ ಸಾಮಾನ್ಯ ಸುದ್ದಿಯಂತೆ ವರದಿಯಾಗುತ್ತಿರುವ ರೈತರ ಆತ್ಮಹತ್ಯೆಗಳಿಗೆ ನೇರವಾಗಿ ಪ್ರಭುತ್ವದ ರೈತ ವಿರೋಧಿ ನೀತಿಗಳೆ ಕಾರಣವಾಗಿವೆ. ಈ ಬಗೆಯ ಎಲ್ಲಾ ನಡೆಗಳನ್ನು ವಿರೋಧಿಸುವುದು, ಈ ವಿರೋಧದ ಸಂಕೇತವಾಗಿ ಪ್ರಭುತ್ವದ ಪ್ರಶಸ್ತಿಯನ್ನು ಹಿಂತಿರುಗಿಸುವುದು ಚಳವಳಿಯ ಭಾಗವಾಗಿದೆ.

ಈ ಚಳವಳಿಯ ಜತೆಗಾರನಾಗುವುದು ಒಬ್ಬ ಲೇಖಕನಾಗಿ ನನ್ನ ಜವಾಬ್ದಾರಿ ಎಂದು ಭಾವಿಸಿ, ವೈಯಕ್ತಿಕವಾಗಿ ನಾನು ತೆಗೆದುಕೊಳ್ಳುತ್ತಿರುವ ಈ ನಿರ್ಧಾರ ಸಕಾಲಿಕವಾದದ್ದು ಎನ್ನುವ ಖಚಿತ ನಿಲುವಿನೊಂದಿಗೆ 2008 ರಲ್ಲಿ ಕಸಾಪ ನೀಡಿದ ಅರಳು ಪ್ರಶಸ್ತಿಯನ್ನು ಹಿಂತಿರುಗಿಸುವ ನಿರ್ಧಾರಕ್ಕೆ ಬಂದಿದ್ದೇನೆ.




- ಅರುಣ್ ಜೋಳದಕೂಡ್ಲಿಗಿ, ಹಂಪಿ

ನಾವು 8 ಜನ ಲೇಖಕರು ನಾಲ್ಕು ವರ್ಷಗಳ ಹಿಂದೆ ಅಂದರೆ ನವೆಂಬರ್ 22, 2011ರಂದು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಕ.ಸಾ.ಪ.ದ 'ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಅರಳು ಪ್ರಶಸ್ತಿ'ಯನ್ನು ಡಾ. ಎಂ.ಎಂ. ಕಲಬುರ್ಗಿ ಅವರ ಸಮ್ಮುಖದಲ್ಲಿ ಸ್ವೀಕರಿಸಿದ್ದೆವು. ಡಾ. ಕಲಬುರ್ಗಿ ಅವರಿಗೆ ಅದೇ ವೇದಿಕೆಯಲ್ಲಿ ನೃಪತುಂಗ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಆ ದಿನ ಕಲಬುರ್ಗಿ ಅವರ ಜೊತೆಗೆ ಕಳೆದ ನಿಮಿಷಗಳು ಈಗಲೂ ನಮ್ಮ ಮನದಲ್ಲಿ ಅಚ್ಚಳಿಯದೇ ಉಳಿದಿವೆ.

ಒಬ್ಬ ವಸ್ತುನಿಷ್ಠ ಸಂಶೋಧಕ, ಸತ್ಯದ ಪರಿಚಾರಕ, ಅಪ್ರತಿಮ ವಿದ್ವಾಂಸ ಡಾ. ಎಂ.ಎಂ.ಕಲಬುರ್ಗಿಯವರ ಹತ್ಯೆಯಿಂದ ದಿಗ್ಭ್ರಮೆಗೊಳಗಾದ ನಾಡಿನ ಜನರಷ್ಟೇ ಅಲ್ಲ, ಜಗತ್ತಿನ ಕೋಟ್ಯಂತರ ಜನರಲ್ಲಿ ನಾವೂ ಸೇರಿದ್ದೇವೆ. ಈಗಾಗಲೇ ಮಹಾರಾಷ್ಟ್ರದ ಹೋರಾಟಗಾರರಾದ ನರೇಂದ್ರ ದಾಭೋಲ್ಕರ್, ಗೋವಿಂದರಾವ್ ಪನ್ಸಾರೆ ಅವರ ಹತ್ಯೆ ಪ್ರಕರಣಗಳು ಇದುವರೆಗೆ ತಾರ್ಕಿಕ ಅಂತ್ಯ ಕಂಡಿಲ್ಲ. ಕಲಬುರ್ಗಿ ಅವರ ಪ್ರಕರಣವೂ ದೀರ್ಘಕಾಲ ರಹಸ್ಯವಾಗಿ ಉಳಿಯಬಾರದು ಎಂಬುದು ನಮ್ಮ ಆಗ್ರಹ. ಇದುವರೆಗೆ ದುಷ್ಕರ್ಮಿಗಳ ಬಂಧನವಾಗಿಲ್ಲವಾದ್ದರಿಂದ ನಾವು ಈ ಪ್ರಶಸ್ತಿಯನ್ನು ವಾಪಾಸು ಮಾಡುತ್ತಿದ್ದೇವೆ.

- ಚಿದಾನಂದ ಸಾಲಿ, ವೀರಣ್ಣ ಮಡಿವಾಳರ, ಸತೀಶ್ ಜವರೇಗೌಡ, ಸಂಗಮೇಶ ಮೆಣಸಿನಕಾಯಿ, ಹನುಮಂತ ಹಾಲಿಗೇರಿ, ಶ್ರೀದೇವಿ ವಿ.ಆಲೂರು.



ಈ ಹೊತ್ತು ನಡೆಯುತ್ತಿರುವ ಮನುಷ್ಯ ವಿರೋಧಿ ಕೃತ್ಯಗಳನ್ನೂ, ಮಾನವತಾವಾದದ ಸೋಲನ್ನು, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆಯನ್ನು ಖಂಡಿಸಿ ಪ್ರತಿರೋಧದ ಧ್ವನಿ ಎತ್ತಿ ತಮಗೆ ಬಂದ ಪ್ರಶಸ್ತಿ ಪುರಸ್ಕಾರಗಳನ್ನು ಹಿಂದಿರುಗಿಸುತ್ತಿರುವ ಪ್ರಜ್ಞಾವಂತ ಲೇಖಕರ ಬಳಗದ ಜೊತೆ ನನ್ನ ಧ್ವನಿಯನ್ನು ಸೇರಿಸುವುದು ಮತ್ತು ಅಂಥದೊಂದು ಚಳವಳಿಯ ಭಾಗವಾಗುವುದು ನನ್ನ ಜವಾಬ್ದಾರಿ ಎಂಬ ಸ್ಪಷ್ಟ ನಿರ್ಧಾರಕ್ಕೆ ಬಂದಿದ್ದು, ಕರ್ನಾಟಕ ಸಾಹಿತ್ಯ ಅಕಾಡೆಮಿಯು 2011ರ ಸಾಲಿನಲ್ಲಿ ನಾನು ನಿರೂಪಿಸಿದ 'ಕಾಡತೊರೆಯ ಜಾಡು' ಕೃತಿಗೆ ಜೀವನಚರಿತ್ರೆ ವಿಭಾಗದಲ್ಲಿ ಅತ್ಯುತ್ತಮ ಕೃತಿ ಎಂದು ಗುರುತಿಸಿ ನೀಡಿರುವ ಪುಸ್ತಕ ಬಹುಮಾನ ಪ್ರಶಸ್ತಿಯನ್ನು ಅಕಾಡೆಮಿಗೆ ಹಿಂದಿರುಗಿಸುತ್ತಿದ್ದೇನೆ.

ಏಕೆಂದರೆ ಈ ಪ್ರಶಸ್ತಿ ಬಂದಿದ್ದು ರೈತ ಹೋರಾಟಗಾರ ಕಡಿದಾಳು ಶಾಮಣ್ಣ ಅವರ ಆತ್ಮಕಥನ 'ಕಾಡ ತೊರೆಯ ಜಾಡು' ಕೃತಿಯನ್ನು ನಿರೂಪಣೆ ಮಾಡಿದ್ದಕ್ಕಾಗಿ. ಕಡಿದಾಳು ಶಾಮಣ್ಣ ಅವರು ಮಾನವತೆ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ವಿಚಾರವಾದವನ್ನು ತಮ್ಮ ಬದುಕಿನ ಮೂಲಧ್ಯೇಯವಾಗಿ ಇರಿಸಿಕೊಂಡು ಬಾಳುತ್ತಿರುವವರು. ಇತ್ತೀಚೆಗೆ ಅವರಿಗೆ ರಾಜ್ಯಸರ್ಕಾರವೇ ನಾಡಹಬ್ಬ ದಸರಾ ಉದ್ಘಾಟಿಸಲು ಆಹ್ವಾನಿಸಿದಾಗ 'ರೈತರು ದುರಂತ ಅನುಭವಿಸುತ್ತಿರುವ ಈ ಹೊತ್ತಲ್ಲಿ ನಾಡಹಬ್ಬ ದಸರಾ ಉದ್ಘಾಟಿಸಿ ಸಂಭ್ರಮಿಸಲಾರೆ' ಎಂದು ಧಿಕ್ಕರಿಸಿದವರು. ಅವರ ಆತ್ಮಕಥನಕ್ಕೆ, ಸಂದ ಪುಸ್ತಕ ಬಹುಮಾನವನ್ನು ಹಿಂದಿರುಗಿಸುವ ಮೂಲಕ ಭಾರತದಾದ್ಯಂತ ಲೇಖಕ ಬಳಗವು ನಡೆಸುತ್ತಿರುವ ಈ ಪ್ರತಿರೋಧದ ಚಳವಳಿಯ ಭಾಗವಾಗಿ ಗುರುತಿಸಿಕೊಳ್ಳುವುದು ಕಡಿದಾಳು ಶಾಮಣ್ಣನವರು ನಂಬಿ ನಡೆಯುತ್ತಿರುವ ಸಿದ್ಧಾಂತಕ್ಕೆ ಸಲ್ಲಿಸುತ್ತಿರುವ ಗೌರವ ಎಂದು ಭಾವಿಸಿದ್ದೇನೆ. ಜೊತೆಗೆ ಈ ಚಳವಳಿಯ ಜತೆಗಾರಳಾಗುವುದು ಒಬ್ಬ ಲೇಖಕಿಯಾಗಿ ನನ್ನ ಜವಾಬ್ದಾರಿ ಎಂದು ಭಾವಿಸಿ, ವೈಯಕ್ತಿಕವಾಗಿ ನಾನು ತೆಗೆದುಕೊಳ್ಳುತ್ತಿರುವ ಈ ನಿರ್ಧಾರ ಸಕಾಲಿಕವಾದದ್ದು ಎನ್ನುವ ಖಚಿತ ನಿಲುವಿನೊಂದಿಗೆ ಈ ಪ್ರಶಸ್ತಿಯನ್ನು ಹಿಂತಿರುಗಿಸುವ ನಿರ್ಧಾರಕ್ಕೆ ಬಂದಿದ್ದೇನೆ.

- ಅಕ್ಷತಾ.ಕೆ ಹುಂಚದಕಟ್ಟೆ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ

ದೇಶ ಮತ್ತು ರಾಜ್ಯದಲ್ಲಿ ಇತ್ತೀಚೆಗೆ ಪ್ರಗತಿಪರ ಲೇಖಕರು, ಚಿಂತಕರು ಹಾಗೂ ಕಲಾವಿದರ ಮೇಲೆ ಹಲ್ಲೆಗಳು ಹೆಚ್ಚಾಗಿವೆ. ಹಿರಿಯ ಸಂಶೋಧಕ ಎಂ. ಎಂ. ಕಲಬುರ್ಗಿಯವರು ಹಾಗು ಲಿಂಗಣ್ಣ ಸತ್ಯಂಪೇಟೆಯವರ ಹತ್ಯೆ ವೈಚಾರಿಕತೆಯ ಕಾರಣಕ್ಕೇ ಮಾಡಲಾಗಿದೆ ಎಂಬುದು ನನ್ನ ಅಚಲ ನಂಬಿಕೆಯಾಗಿದೆ.

ಕಲಾವಿದ ಎಂ. ಎಫ್. ಹುಸೇನರ ಮೇಲೆ ಇಂಥದೇ ಕಾರಣಕ್ಕೆ ದೌರ್ಜನ್ಯ ನಡೆಸಲಾಗಿತ್ತು. ವೈಚಾರಿಕ ಕಲಾಕೃತಿಗಳ ರಚನೆಯ ಕಾರಣಕ್ಕಾಗಿಯೇ ನಾನೂ ಸಣ್ಣಮಟ್ಟಿ ಪ್ರತಿರೋಧಗಳನ್ನು, ಬೆದರಿಕೆಗಳನ್ನು ಅನುಭವಿಸಿದ್ದೇನೆ. 'ಅವನ ಪರಿಸರ' ಕಲಾಕೃತಿಗೆ ಅಕಾಡೆಮಿಯ ಬಹುಮಾನ ಬಂದಾಗ ಸಂಪ್ರದಾಯವಾದಿಗಳು ಬಲವಾಗಿ ವಿರೋಧಿಸಿದ್ದರು. 'ಸಂಕುಲ' ಪತ್ರಿಕೆಯ ಮುಖಪುಟದಲ್ಲಿ ಎಡಪಂಥೀಯ ಧೋರಣೆಯ ನನ್ನ ಶಿಲ್ಪಕಲಾಕೃತಿಯೊಂದನ್ನು ಪ್ರಕಟಿಸಿದ್ದಕ್ಕೆ ಸಂಪಾದಕಿ ಡಾ. ವಿಜಯಮ್ಮಗೆ ಬಲಪಂಥೀಯರು ಕೊಲೆ ಬೆದರಿಕೆಯ ಕರೆಗಳನ್ನು ಮಾಡಿದ್ದರು. ಮುಂಬೈನ ಜಹಾಂಗೀರ್ ಆರ್ಟ್ ಗ್ಯಾಲರಿಯಲ್ಲಿ (2007) ನನ್ನ ಶಿಲ್ಪಕಲಾಕೃತಿಯೊಂದನ್ನು ಅರೆ ನಗ್ನವೆಂಬ ಕಾರಣ ನೀಡಿ ಸಂಘಟನೆಯೊಂದು ಪ್ರದರ್ಶನಕ್ಕೆ ಅವಕಾಶವನ್ನೇ ನೀಡಲಿಲ್ಲ.

ಕಲಬುರ್ಗಿಯವರ ಪ್ರಖರ ವೈಚಾರಿಕತೆಯನ್ನು ಅರಗಿಸಿಕೊಳ್ಳಲಾಗದ ರೋಗಿಷ್ಠರು ಈ ಕೃತ್ಯ ಎಸಗಿದ್ದಾರೆ. ಹಸ್ತಾಕ್ಷರ… ವಿಚಾರಗಳನ್ನು ನಾಶ ಮಾಡಿದ್ದೇವೆ ಎಂದು

ಹತ್ಯೆ ಮಾಡಿಸಿದವರು ಭಾವಿಸಿದ್ದಾರೆ. ಇಂತಹ ವಿಚಾರಹೀನ ಹಂತಕರನ್ನು ಬಂಧಿಸಿ ಅವರ ಅಬ್ಬರ, ಅಟ್ಟಹಾಸಗಳ ಹುಟ್ಟಡಗಿಸುವಲ್ಲಿ ಸರಕಾರ ವಿಳಂಬ ಮಾಡುತ್ತಿದೆ. ಈ ಧೋರಣೆಯನ್ನು ವಿರೋಧಿಸಿ ಸರಕಾರದ ಸ್ವಾಯತ್ತ ಸಂಸ್ಥೆಯಾಗಿರುವ ಕರ್ನಾಟಕ ಲಲಿತಕಲಾ ಅಕಾಡೆಮಿಯು 1993ನೇ ಸಾಲಿನಲ್ಲಿ ಅವನ ಪರಿಸರ ಕಲಾಕೃತಿಗಾಗಿ ನನಗೆ ನೀಡಿದ್ದ ಪ್ರಶಸ್ತಿಯನ್ನು ಹಿಂತಿರುಗಿಸಿದ್ದೇನೆ.

- ಡಾ. ಶಿವಾನಂದ ಎಚ್. ಬಂಟನೂರ, ಹಂಪಿ.

ಇತ್ತೀಚೆಗೆ ದಲಿತ ಸಮುದಾಯದ ಮೇಲೆ, ಮೇಲಿಂದ ಮೇಲೆ ಆಕ್ರಮಣಗಳು ನಡೆಯುತ್ತಲೇ ಇವೆ. ದೇವಸ್ಥಾನ ಪ್ರವೇಶಿಸಿದನೆಂದು ದಲಿತನೊಬ್ಬನ ಜೀವಂತ ದಹನ, ಅಂಬೇಡ್ಕರ್ ಗೀತೆಯನ್ನು ರಿಂಗ್‌ಟೋನ್ ಮಾಡಿಕೊಂಡಿದ್ದಕ್ಕೆ ಶಿರಡಿಯಲ್ಲಿ ದಲಿತ ಯುವಕನೊಬ್ಬನನ್ನು ಕ್ರೂರವಾಗಿ ಹಿಂಸಿಸಿ ಕೊಂದು ಹಾಕಿದ್ದು, ಹೊಳೆನರಸೀಪುರ ತಾಲೂಕಿನ ಸಿಗರನಹಳ್ಳಿಯಲ್ಲಿ ದಲಿತರ ಬಹಿಷ್ಕಾರ, ಮಧ್ಯಪ್ರದೇಶದಲ್ಲಿ ದಲಿತ ಹೆಣ್ಣೊಬ್ಬಳನ್ನು ಥಳಿಸಿ, ಸಾರ್ವಜನಿಕವಾಗಿ ಬೆತ್ತಲೆಗೊಳಿಸಿ ಆಕೆಯ ಬಾಯೊಳಗೆ ಬಲಿಷ್ಠನೊಬ್ಬ ಉಚ್ಚೆ ಒಯ್ದ ಘಟನೆ, ಉತ್ತರಪ್ರದೇಶದಲ್ಲಿ ದೂರು ನೀಡಲು ಠಾಣೆಗೆ ಹೋದ ದಲಿತ ಕುಟುಂಬವನ್ನು ಸಾರ್ವಜನಿಕವಾಗಿ ಬೆತ್ತಲೆಗೊಳಿಸಿದ ಪೊಲೀಸ್ ಇಲಾಖೆಯ ಅಟ್ಟಹಾಸ, ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಕಸಬ-ನಂದ್‌ಗಡ್ ಗ್ರಾಮದ ಸುಮಾರು 40 ದಲಿತ ಕುಟುಂಬಗಳಿಗೆ ಅಲ್ಲಿನ ಮೇಲ್ಜಾತಿ ಜನರು ಸಾಮಾಜಿಕ ಬಹಿಷ್ಕಾರ ಹಾಕಿ, ಗ್ರಾಮದ ದಲಿತರು ಸ್ಥಳೀಯ ಅಂಗಡಿಗಳಿಂದ ಯಾವುದೇ ವಸ್ತುಗಳನ್ನು ಖರೀದಿಸದಂತೆ, ಗಿರಣಿ ಮಿಲ್‌ಗಳಿಗೆ ಪ್ರವೇಶಿಸದಂತೆ, ಧಾರ್ಮಿಕ ಪ್ರದೇಶಗಳಿಗೆ ಪ್ರವೇಶ ಮಾಡದಂತೆ ಮತ್ತು ನೀರು ತೆಗೆಯದಂತೆ ಕಟ್ಟಾಜ್ಞೆ ಮಾಡಿರುವುದು...

ಇಷ್ಟೆಲ್ಲಾ ನಡೆಯುತ್ತಿದ್ದರೂ ಎಲ್ಲೂ ದಲಿತರು, ದಲಿತ ಸಂಘಟನೆಗಳು, ದಲಿತ ಚಳವಳಿಗಳು, ದಲಿತ ಪರಿಷತ್ತುಗಳು ಎಲ್ಲರೂ ಒಗ್ಗೂಡಿ ಬೀದಿಗಿಳಿದು ಒಂದು ವ್ಯಾಪಕವಾದ ಪ್ರತಿಭಟನೆಯನ್ನೂ ಮಾಡಿಲ್ಲ; ವಿರೋಧಿಸಿ ಗಟ್ಟಿಯಾಗಿ ದನಿಯೂ ಎತ್ತಿಲ್ಲ. ಈ ನಿಷ್ಕ್ರಿಯತೆಯೂ ಅತ್ಯಂತ ನೋವಿನ ಮತ್ತು ಆಘಾತಕರ ಸಂಗತಿ.

ಜತೆಗೆ ಹೆಣ್ಣುಮಕ್ಕಳ ಮೇಲೆ ನಿರಂತರವಾಗಿ ನಡೆಯುತ್ತಿರುವ ಅತ್ಯಾಚಾರಗಳು, ರೈತರ ಸರಣಿ ಆತ್ಮಹತ್ಯೆ.. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆ, ಆ ಸಲುವಾಗಿ ಬರಹಗಾರರ, ಚಿಂತಕರ, ಸಂಶೋಧಕರ ಹತ್ಯೆಗೈಯುತ್ತಿರುವುದು.. ನಮ್ಮ ಆಹಾರ ಪದ್ಧತಿಯ ಮೇಲೆ ನಿಯಂತ್ರಣ ಸಾಧಿಸುವ ನಿಟ್ಟಿನಲ್ಲಿ ನಡೆಯುತ್ತಿರುವ ದೌರ್ಜನ್ಯ.. ದೇಶವಿಡೀ ವ್ಯಾಪಿಸುತ್ತಿರುವ ಮತೀಯ ಅಸಹನೆಯನ್ನು ಮನಸ್ಸು ಒಪ್ಪುತ್ತಿಲ್ಲ. ಸಡಗರ, ಸಂಭ್ರಮ ಒಲ್ಲೆನ್ನುತ್ತಿದೆ. ಪ್ರಶಸ್ತಿ ಸಂದ ಖುಷಿ ಹಾಗೇ ಹಿಂಗಿಹೋಗಿದೆ. ಅಲ್ಲದೆ ಪ್ರಶಸ್ತಿಗೆ ಪ್ರಶಸ್ತವೂ ಅಲ್ಲ ಈ ಪ್ರಾಣಾಂತಕ ಕಾಲ.

ಈ ಹಿನ್ನೆಲೆಯಲ್ಲಿ, ಓರ್ವ ಲೇಖಕಿಯಾಗಿ, ದಲಿತಳಾಗಿ ಈ ಅನ್ಯಾಯವನ್ನು, ಕ್ರೌರ್ಯವನ್ನು ಮತ್ತು ದಲಿತ ಸಮುದಾಯದ ನಿಷ್ಕ್ರಿಯತೆಯನ್ನೂ ಖಂಡಿಸುತ್ತೇನೆ. ಆದ್ದರಿಂದ 2015 ರ ಸಾಲಿನ, ದಲಿತ ಸಾಹಿತ್ಯ ಪರಿಷತ್ತು ಇದೇ ತಿಂಗಳು 17 ಮತ್ತು 18 ರಂದು ಬಾಗಲಕೋಟೆಯಲ್ಲಿ ನಡೆಯುತ್ತಿರುವ 6ನೇ ಅಖಿಲ ಭಾರತ ದಲಿತ ಸಾಹಿತ್ಯ ಸಮ್ಮೇಳನದಲ್ಲಿ ಕೊಡಮಾಡುವ




ಪುಸ್ತಕ ಪ್ರಶಸ್ತಿಯನ್ನು ನಿರಾಕರಿಸುತ್ತೇನೆ.

- ಬಿ.ಟಿ. ಜಾಹ್ನವಿ, ಲೇಖಕಿ, ದಾವಣಗೆರೆ

ಸಂಶೋಧಕ ಎಂ.ಎಂ.ಕಲ್ಬುರ್ಗಿ ಅವರ ಹತ್ಯೆಯ ನಂತರ ಅಕಾಡೆಮಿಯ ಒಟ್ಟಾರೆ ನಿಲುವು ದೋಷಪೂರಿತವಾಗಿತ್ತು. ದೇಶದೆಲ್ಲೆಡೆಯಿಂದ ಬರುತ್ತಿದ್ದ ಲೇಖಕರ ಪ್ರತಿಕ್ರಿಯೆಯನ್ನು ಜವಾಬ್ದಾರಿಯಿಂದ ಗಮನಿಸಲಿಲ್ಲ, ದೇಶದ ಪ್ರಾತಿನಿಧಿಕ ಸಂಸ್ಥೆಯಾದ ಅಕಾಡೆಮಿ ಲೇಖಕರ ಮೇಲಿನ ಅಭಿವ್ಯಕ್ತಿ ಸ್ವಾತಂತ್ರ್ಯದ ಹಲ್ಲೆಯನ್ನು ಖಂಡಿಸಲೂ ಇಲ್ಲ. ಹೀಗಾಗಿ ಸಮಿತಿಯಲ್ಲಿ ಮುಂದುವರೆಯುವುದು ಕಷ್ಟವಾಗುತ್ತಿದೆ. ಆದ್ದರಿಂದ ಕನ್ನಡ ಸಲಹಾ ಸಮಿತಿಗೆ ರಾಜೀನಾಮೆ ನೀಡುತ್ತಿದ್ದೇನೆ.

- ಡಾ.ವಿಕ್ರಮ ವಿಸಾಜಿ, ಪ್ರಾಧ್ಯಾಪಕರು, ಕರ್ನಾಟಕ ಕೇಂದ್ರೀಯ ವಿವಿ [illegible].

ರೇಪಿಸ್ಟ್ ರಾಘುನ ಪೀಠೋಚ್ಚಾಟನೆ ಆದೀತಾ?


ರಾಘವೇಶ್ವರ ಸ್ವಾಮಿ

ರಾಮಚಂದ್ರಾಪುರ ಮಠದ ಹವ್ಯಕ ಶಿಷ್ಯಸಂಕುಲ ಸಂದಿಗ್ಧಕ್ಕೆ ಬಿದ್ದಿದೆ! ಶುದ್ಧ ಸನ್ಯಾಸಿ ಎಂದು ನಂಬಿದ್ದ ಕುಲಗುರುವಿನ ಕಾಮೋನ್ಮಾದ ಶ್ರದ್ಧಾಭಂಗದ ಉಪಕತೆಗಳು ಸಾಲುಸಾಲಾಗಿ ಹೊರಬರುತ್ತಿರುವ ಪರಿಗೆ ಹವ್ಯಕರು ರೋಸಿಹೋಗಿದ್ದಾರೆ. ಕಚ್ಚೆಹರುಕ ರಾಘು ಮಾಣಿ ಗುರುಪೀಠದಲ್ಲೇ ಗಲೀಜು ಮಾಡಿಕೊಂಡಿದ್ದಾನೆಂದು ಸಿಐಡಿ ನ್ಯಾಯಾಲಯಕ್ಕೆ ಸಾವಿರದ ಮುನ್ನೂರು ಚಿಲ್ಲರೆ ಪುಟದ ದೋಷಾರೋಪ ವರದಿ ಸಲ್ಲಿಕೆ ಆಗುತ್ತಿದ್ದಂತೆಯೇ ರಾಮಚಂದ್ರಾಪುರ ಮಠದ ಅನುಯಾಯಿಗಳ ಆತ್ಮಸಾಕ್ಷಿ ಚುಚ್ಚತೊಡಗಿದೆ.

ಇಂಥ ಹಲ್ಕಟ್ ಸ್ವಾಮಿ ನಮಗೆ ಬೇಡವೆಂದು ಅಂತರಾತ್ಮ ಖಡಾಖಂಡಿತ ಹೇಳುತ್ತಿದ್ದರೂ ಮಠದ ತಾಲಿಬಾನಿ ಪಡೆಯ ಸಾಮಾಜಿಕ ಬಹಿಷ್ಕಾರ ಗೂಂಡಾಗಿರಿಯ ಭಯದಿಂದ ಬಾಯಿ ಬಿಡದಂತಾಗಿ ಹವ್ಯಕ ಸಮೂಹ ಒದ್ದಾಡುತ್ತಿದೆ. ಈ ಅಸಹಾಯಕತೆಯ ಜತೆಗೇ ಜಾತಿಪೀಠದ ಸ್ವಾಮಿಯನ್ನು ವಿರೋಧಿಸಿದರೆ ಮುಂದೆ ಶೂದ್ರ ಸಮೂಹದ ಎದುರು ತಲೆ ತಗ್ಗಿಸಬೇಕಾಗಬಹುದೆಂಬ ಬ್ರಾಹ್ಮಣಿಕೆ 'ಪ್ರಜ್ಞೆ'ಯೂ ಜಾಗೃತವಾಗಿದೆ. ಇಂಥದೊಂದು ಪುರೋಹಿತಶಾಹಿ ತಂತ್ರಗಾರಿಕೆ ನಾಜೂಕಾಗಿ ಹೆಣೆದಿರುವ ಪ್ರಳಯಾಂತಕ ರಾಘು ಮತ್ತೊಂದೆಡೆ ಶೂದ್ರರೂ ತನ್ನ ಪರವಾಗಿದ್ದಾರೆಂದು ಬಿಂಬಿಸಲು ಹಣದ ಆಟ ಆಡುತ್ತಿದ್ದಾನೆ. ಬ್ರಾಹ್ಮಣಿಕೆ ಹಿಕಮತ್ತು ಅರ್ಥವಾಗದ ಒಂದಿಷ್ಟು ಪೆದ್ದು ಶೂದ್ರರು ಮತ್ತು ಕೊಳಕು ಸ್ವಾಮಿಯ ಅಡ್ಡ ಪಲ್ಲಕ್ಕಿ ಹೊತ್ತು ಹೊರಟಿರುವ ಮಠಾವಲಂಬಿ ಹೈಗರು ರಾಘು 'ಸುಬಗ ಸಂತ'ನೆಂದು ಅಲ್ಲಲ್ಲಿ ಸಣ್ಣಸಣ್ಣ ಶೋ ನಡೆಸುತ್ತಿದ್ದಾರೆ.

ಸಿಲ್ಕ್ ಕೌಪೀನ

ಗಾಯಕಿ ಪ್ರೇಮಲತಾ ತನ್ನ ಮೇಲೆ ಹಾಕಿರುವ ಅತ್ಯಾಚಾರದ ಕೇಸನ್ನು ಹಳ್ಳ ಹಿಡಿಸಲು ರಾಘು ಮತ್ತಾತನ ಗ್ಯಾಂಗಿನ ನ್ಯಾಯಾಧೀಶರು, ನ್ಯಾಯವಾದಿಗಳು, ಪಾಖಂಡಿ ಪತ್ರಕರ್ತರು, ಅಧಿಕಾರಿಗಣ ಅದೆಷ್ಟೇ ತಿಪ್ಪರಲಾಗ ಹಾಕಿದರೂ ಚಾರ್ಜ್‌ಶೀಟ್ ಸಲ್ಲಿಕೆಯಾಗುವುದು ಮಾತ್ರ ತಡೆಯಲಾಗಿಲ್ಲ, ಅಷ್ಟರಮಟ್ಟಿಗೆ ಸಿಐಡಿ ಪೊಲೀಸರು ಪ್ರಾಮಾಣಿಕವಾಗಿ ಕರ್ತವ್ಯ ನಿಭಾಯಿಸಿದ್ದಾರೆ. ಬರೋಬ್ಬರಿ ಎರಡು ವರ್ಷ ತನಗೆ ಹುಕ್ಕಿ ಬಂದಾಗೆಲ್ಲ ತಾನಿದ್ದಲ್ಲಿಗೇ ಪ್ರೇಮಲತಾರನ್ನು ಕರೆಸಿ ಮೃಗೀಯವಾಗಿ ತೀಟೆ ತೀರಿಸಿಕೊಳ್ಳುತ್ತ ಬಂದ ರಾಘು ತನ್ನ 'ಪ್ರಸಾದ' ಆಕೆಗೆ ಸಿಗಬಾರದೆಂಬ ಎಚ್ಚರಿಕೆ ವಹಿಸಿದ್ದ. ಉನ್ಮಾದದಲ್ಲಿ ಚೆಲ್ಲಾಡಿದ ಪ್ರಸಾದ ತನ್ನ ಕಾವಿ ಸಿಲ್ಕ್ ಕೌಪೀನದಿಂದಲೇ ಒರೆಸುತ್ತಿದ್ದ.

ಆದರೂ ಸಂತ್ರಸ್ತೆಯ ಒಳ ಉಡುಪಿನಲ್ಲಿಲ್ಲ ರಾಘು ಸ್ವಾಮಿಯ ಪ್ರಸಾದ ಇರುವುದನ್ನು ವಿಧಿವಿಜ್ಞಾನ ಪ್ರಯೋಗಾಲಯದ ಡಿಎನ್‌ಎ ಪರೀಕ್ಷೆ ಸಾಬೀತು ಪಡಿಸಿದೆ. ಇದು ರಾಘು ಅದೆಂಥ ಕಾಮುಕ ಸನ್ಯಾಸಿ ಎಂಬುದನ್ನು ನಿಸ್ಸಂಶಯವಾಗಿ ಸಿದ್ಧಮಾಡಿದೆ. ಇದೇ ರಾಘುನ ಅತ್ಯಾಚಾರಕ್ಕೆ ಪ್ರಮುಖ ಸಾಕ್ಷಿಯಾಗಿ ಆತನಿಗೆ ಉರುಳಾಗಿದೆ. ಆತ ಪ್ರೇಮಲತಾರನ್ನು ಮನಸೋಇಚ್ಛೆ ಬಳಸಿಕೊಂಡಿರುವುದಕ್ಕೆ ಪೂರಕವಾಗಿ ತಾಂತ್ರಿಕ ಸಾಕ್ಷ್ಯಾಧಾರಗಳೂ ಸಿಐಡಿಗೆ ಸಿಕ್ಕಿದೆ.

ವಿಕೃತಕಾಮಿಗಳ ಮಠ

ಸಿಐಡಿ ಸಲ್ಲಿಸಿದ ಚಾರ್ಜ್‌ಶೀಟ್ ಮೇಲೊಮ್ಮೆ ಕಣ್ಣಾಡಿಸಿದರೆ ರಾಮಚಂದ್ರಾಪುರ ಮಠದಲ್ಲಿ ದೊಡ್ಡ ಬೀದಿ ಬಸವರ ತಂಡವೇ ತಯಾರಾಗಿರುವುದು ಮನದಟ್ಟಾಗುತ್ತದೆ. ರಾಘುನ ತಾಲಿಬಾನಿ ಗ್ಯಾಂಗ್ ರಾಮಚಂದ್ರಾಪುರ ಮಠ 1300 ವರ್ಷದ ಇತಿಹಾಸದ ಅವಿಚ್ಛಿನ್ನ ಪರಂಪರೆಯದು ಎಂದು ಮಾತುಮಾತಿಗೆ ತಾರೀಫು ಮಾಡಿಕೊಳ್ಳುವುದು ಸಾಮಾನ್ಯವಾಗಿ ಹೋಗಿದೆ. ಆದರೆ ರಾಘು ಪಟ್ಟಾಭಿಷೇಕವಾದ ನಂತರ ಸದ್ರಿ ರಾಮಚಂದ್ರಾಪುರ ಮಠ ಲೌಕಿಕ ಮೋಜುಮಸ್ತಿಯ ಕ್ಲಬ್‌ನಂತಾಗಿರುವುದು ಎದ್ದು ಕಾಣುವ ವಾಸ್ತವದಂತಾಗಿದೆ. ಲಲಿತ ಕಲೆ, ರಾಮಕಥಾ, ಕಾಮದುಘಾ, ರಂಗುರಂಗಿನ ಚಾತುರ್ಮಾಸ್ಯ ಕಾರ್ಯಕ್ರಮ ತೆರೆಯ ಮೇಲೆ ನಡೆದರೆ ಏಕಾಂತ ದರ್ಶನದಲ್ಲಿ ರತಿಲೀಲಾ ವಿನೋದದ್ದೇ ಹಾವಳಿ.

ಚೋರ ಗುರುವಿಗೆ ಚಾಂಡಲ ಶಿಷ್ಯರ ದೊಡ್ಡ ದಂಡೇ ಇದೆ. ಸಾಗರದ ಚದುರಳ್ಳಿಯ ಭಾರತಿ ವಿದ್ಯಾನಿಕೇತನ ಶಾಲೆಯಲ್ಲಿ ನಡೆದ ಬಲಾತ್ಕಾರ ಕಾಮಕಾಂಡಕ್ಕೆ ಲೆಕ್ಕವೇ ಇಲ್ಲ. ರಾಘುನ ಪೂರ್ವಾಶ್ರಮದ ತಂಗಿ ಗಂಡನೂ, ಅತ್ಯಾಪ್ತ ಸಮಾನ ವ್ಯಸನಿ ಮಿತ್ರೋತ್ತಮನೂ ಆಗಿರುವ ಜಗದೀಶ ಶರ್ಮ ಈ ಶಾಲೆಯ ಅಸಹಾಯಕ ಹುಡುಗೀರ ಗೋಳಾಡಿಸಿ ಉಡಾಯಿಸಿದ ಮಜಾದ ಲೆಕ್ಕ ಬಹುಶಃ ಆತನಿಗೇ ಇರಲಿಕ್ಕಿಲ್ಲ. ಈ ಶಾಲೆ ಮತ್ತು ಹುಡುಗೀರ ಹಾಸ್ಟೆಲ್ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾತ ರಾಘು ಖಾಸಾ ಚಿಕ್ಕಪ್ಪ ಗಣಪತಿ ಭಟ್ಟ! ಮೂರು ವರ್ಷದ ಹಿಂದೆ ಸತ್ತು ಹೋಗಿರುವ ಈ ಕಾಮದುರಂಧರ ಬದುಕಿದಷ್ಟೂ ದಿನ ಭಾರತಿ ವಿದ್ಯಾನಿಕೇತನ ಹುಡುಗೀರ ದೇಹದ ಮುಟ್ಟಬಾರದ ಕಡೆಗೆಲ್ಲ ಹಠದಿಂದಲೇ ಮುಟ್ಟುತ್ತಿದ್ದ. ಅಧಿಕಾರಯುತವಾಗೇ ಬಡ-ಅಸಹಾಯಕ ಹೆಣ್ಮಕ್ಕಳ ದೇಹದ ಮೇಲೆ ಹಕ್ಕು ಚಲಾಯಿಸುತ್ತಿದ್ದ.


ರಾಮಚಂದ್ರಾಪುರ ಮಠ

ಈ ಪಾಪಿ ಬಗ್ಗೆ ದೂರು ಕೊಡಬೇಕಾಗಿದ್ದು ಮತ್ತೊಬ್ಬ ಬೀದಿ ಬಸವ ಜಗದೀಶ ಶರ್ಮನಿಗೆ; ಆ ನಂತರ ಭೋಗ ಗುರು ಪೀಠಾಧಿಪತಿ ರಾಘುಗೆ ಮೊರೆ ಹೋಗಬೇಕಿತ್ತು, ಗಣಪತಿ ಭಟ್ಟನಿಗಿಂತಲೂ ಕೆಟ್ಟದಾಗಿ ಈ ಇಬ್ಬರು ವಿದ್ಯಾರ್ಥಿನಿಯರನ್ನು ಬಳಸಿಕೊಳ್ಳುತ್ತಿದ್ದರು. ಇದು ಅಲ್ಲಿ ಕಲಿತ ಹುಡುಗೀರೇ ಹೇಳುವ ಕಣ್ಣೀರ ಕಥೆ. ಸಿಐಡಿ ದೋಷಾರೋಪ ಪಟ್ಟಿಯಲ್ಲಿ ಇದು ಪ್ರಮುಖವಾಗಿ ದಾಖಲಾಗಿದೆ!

ಭೋಗ ವರ್ಧನವಾಳ ಪರಂಪರೆ

ರಾಘು ವಿಕೃತ ಕಾಮಿ ಎಂಬುದನ್ನು ಆತನ ನಡೆ-ನುಡಿ, ಪ್ರವಚನದ ಹೊತ್ತಲ್ಲಿ ಹೊಯ್ದಾಡುವ ಪರಿಗಳೇ ಸಾರಿ ಸಾರಿ ಹೇಳುತ್ತವೆ! ಪ್ರೇಮಲತಾ ಅನಾರೋಗ್ಯದಿಂದ ಬಳಲುತ್ತಿದ್ದಾಗ, ಮುಟ್ಟಿನ ವಿಪರೀತ ರಕ್ತಸ್ರಾವದಿಂದ ಹೈರಾಣಾದಾಗಲೂ ಈ ಕಾವಿ ಕ್ರಿಮಿ ಆಕೆಯನ್ನು ಬಳಸಿಕೊಂಡಿದ್ದಾನೆ. ಮುಟ್ಟಾದ ಹೆಂಗಸನ್ನು ಮಠದಲ್ಲೇ ಕೂಡ್ರಿಸಿಕೊಂಡು ರಾಮನ ಹಾಡು ಹಾಡಿಸಿ ಮುದಗೊಂಡಿದ್ದಾನೆ. ಆಕೆ ತನಗೆ ಮೈ ಹುಷಾರಿಲ್ಲವೆಂದು ಹೇಳಿದರೂ ಕೇಳದೆ ರಾಮನ ಶಾಪ, ಗುರು ಪೀಠದ ಅವಕೃಪೆಯ ಭಯ ತೋರಿಸಿ ಬೆದರಿಸಿದ್ದಾನೆ.

ಸನಾತನಿಗಳಿಗೆ ರಜೋಸಲೆಯಾದ ಹೆಂಗುಸು ಅಸ್ಪೃಶ್ಯರು! ಇಂತ 'ಬಹಿಷ್ಕೆ'ಯನ್ನು ಮಠದೊಳಗೆ ಬಿಟ್ಟುಕೊಂಡು ಕಾಮ ವಿಕಾರದಿಂದ ಕೇಕೆ ಹಾಕಿದ ರಾಘುನನ್ನು ಕರ್ಮಠ ಹವ್ಯಕರು ಇನ್ನೂ ಸಹಿಸಿಕೊಂಡಿರುವುದೇ ವಿಚಿತ್ರ. ರಾಘು ಸಾಕಿದ ಎಲ್ಲ ಜಾನುವಾರುಗಳ ಮೂತ್ರ ಸಿಂಪಡಿಸಿದರೂ ರಾಮಚಂದ್ರಾಪುರ ಮಠದ ಮಲಿನತೆ ಹೋಗದು ಎಂದು ಪ್ರತಿಸ್ಪರ್ಧಿ ಮಠದ ಅನುಯಾಯಿಗಳು ಕಿಚಾಯಿಸುವುದೀಗ ಸರ್ವೇಸಾಮಾನ್ಯ ಜೋಕ್‌ನಂತಾಗಿ ಹೋಗಿದೆ! ರಾಘು ಜಪ-ತಪ-ಹೋಮ-ಹವನ ಸಾಯಲಿ ನಿತ್ಯದ ತ್ರಿಕಾಲ ಪೂಜೆಯನ್ನೂ ಸರಿಯಾಗಿ ಮಾಡದ ಮೋಜುಗಾರ. ಹೆಂಗುಸರ ಹಿಂದೆ ಬೀಳುವುದೇ ಆತನ ನಿತ್ಯಕರ್ಮ. ಇಂಥ ಸನ್ಯಾಸ ಧರ್ಮಕ್ಕೆ ತದ್ವಿರುದ್ಧವಾದ ಗುಣ-ನಡತೆ ರಾಘುನಲ್ಲಿರುವುದನ್ನು ಡಾ. ಟಿ.ಟಿ. ಹೆಗಡೆಯಂಥ ಹಿರಿಯರು ತುಂಬ ಹಿಂದೆಯೇ ಗುರುತಿಸಿ ಮಠಕ್ಕೆ ಹೋಗುವುದನ್ನೇ ಬಿಟ್ಟಿದ್ದರು.

ಸ್ವಾಮೀಜಿಯಾಗಿ ನನ್ನ ಮೇಲೆ ನಿರಂತರ ಅತ್ಯಾಚಾರ ಮಾಡೋದು ಸರಿಯಾ ಎಂದು ಕೇಳಿದ ಪ್ರೇಮಲತಾರಿಗೆ ಈ ಭಂಡ ಕೊಟ್ಟ ಉತ್ತರವೇನು ಗೊತ್ತೆ? "ನಮ್ಮದು ಭೋಗ ವರ್ಧನವಾಳ ಪರಂಪರೆ ಮತ್ತು ರಾಜಗುರು ಪೀಠ.... ಹಾಗಾಗಿ ಈ ಭೋಗ ನಾವು ಅನುಭವಿಸುವುದು ತಪ್ಪಲ್ಲ.... ಆದಿ ಶಂಕರಾಚಾರ್ಯರಿಗೂ ಸ್ತ್ರೀ ಸಂಪರ್ಕದಿಂದ ಬರುವ ಗುಹ್ಯರೋಗಗಳು ಇದ್ದಿದ್ದವು.... ನಮ್ಮ ದೊಡ್ಡ ಗುರುಗಳೂ ಒಬ್ಬ ಭಕ್ತೆಯಲ್ಲಿ ಅನುರಕ್ತರಾಗಿ ಆಕೆಯ ಮನೆಯಲ್ಲೇ ಠಿಕಾಣಿ ಹೂಡಿದ್ದರು... ಇಷ್ಟು ದೊಡ್ಡ ಪರಂಪರೆಯ ಪೀಠದಲ್ಲಿ ಕುಳಿತ ನಾನೇ(ವೇ?) ಭೋಗದಲ್ಲಿರುವಾಗ ನೀನ್ಯಾಕೆ ಚಿಂತೆ ಮಾಡುವೆ.... ಬೇರೆ ಹೆಂಗಸರು ಬಾಗಿಲ ಚಿಲಕ ಹಾಕಿ ನಮ್ಮ ಬಳಿ ಬರುತ್ತಾರೆ....... ಅಂಥವರು ಹತ್ತು ಬಾರಿ ಗೋಗರೆದರೆ ನಾವು ಒಂದು ಬಾರಿ ಕರುಣಿಸುತ್ತೇವೆ...... ನಿನ್ನ ವಿಷಯ ಹಾಗಲ್ಲ..... ಇದು ನಿನ್ನ ಸೌಭಾಗ್ಯ...... ನಾವೇ ನಿನಗಾಗಿ ಕಾತರಿಸುತ್ತೇವೆ...." ಮುಂತಾಗಿ ಪಡ್ಡೆ ಪೋಲಿಯಂತೆ ಹಲುಬಿದ್ದಾನೆ ಈ ರಾಘು




ಪ್ರೇಮಲತಾ

ಸ್ವಾಮಿ!! ಇವೆಲ್ಲ ರಾಘುನ ಚಟ ಪ್ರೇರಿತ ಭೋ... ಯಾವ ಭೋಗ ವರ್ಧನವೂ ಇಲ್ಲ; ರಾಜವರ್ಧನ... ಇಲ್ಲ; ಯಾವ ಬೊಜ್ಜವೂ ಇಲ್ಲವೆಂದು ಆತನಿಗಾ... ಸ್ವಾಮಿಗಳು ಹೇಳುವುದು ಮಜಾ ಆಗಿದೆ.

ಗುಂಜದ ಚಂಚರೀಕ ಮಧುಲೋ...

ರಾಘುನ 'ಧರ್ಮ ಕಾಮ'ದ ಅತಿರೇಕ ಅದ... ಅನಾಹುತಕಾರಿ ಹಂತಕ್ಕೆ ಹೋಗಿತ್ತೆಂದರೆ, ಪ್ರೇಮಲತಾ... ಆಕೆಯ ಪತಿ ದಿವಾಕರ್‌ರಿಂದ ಡೈವೋರ್ಸ್ ಪಡೆಯ... ಪ್ರಚೋದನೆ ಶುರು ಹಚ್ಚಿಕೊಂಡಿದ್ದ. ಈತ ರಾಮನ ಶಾ... ದುರ್ಬೋಧೆಗೆ ಎಡಿಕ್ಟ್ ಆಗಿದ್ದ ಪ್ರೇಮಲತಾರ ದಾಂಪತ್ಯ... ಸಣ್ಣ ಬಿರುಕು ರಾಘುನ ರಗಳೆಯಿಂದ ಉಂಟಾಗಿ... ಗಂಡ-ಹೆಂಡಿರ ನಡುವೆ ಅಪನಂಬಿಕೆ-ಅನುಮಾನ-ಅಸ... ಆರಂಭವಾಗಿತ್ತು, ಜಗಳ-ಕದನ ನಡೆಯಲಾರಂಭಿಸಿ... ಪ್ರೇಮಲತಾರಿಗೆ ತಾವು ರಾಘುನ ಸಂಚಿನ ಸುಳಿಗೆ ಸಿಲು... ವೇದನೆ ಆಗತೊಡಗಿತ್ತು.

ಪೋರ್ಕಿ ಹೈಕ್ಳಂತೆ ಪ್ರೇಮಲತಾರ ಬೆನ್ನಿಗೆ ಬಿ... ರಾಘು ಹೊತ್ತಲ್ಲದ ಹೊತ್ತಲ್ಲಿ, ನಡುರಾತ್ರಿ, ಬೆಳಗಿನ ಜಾ... ಎರಡೂವರೆ, ನಾಲ್ಕು ಗಂಟೆಗೆಲ್ಲ ಫೋನು ಮಾಡೋ... ಎಸ್‌ಎಂಎಸ್ ಕಳಿಸೋದು, ವ್ಯಾಟ್ಸಪ್ ಸಂದೇ... ರವಾನಿಸೋದು, ಟೆಲಿಗ್ರಾಮ್ ಚಾಟ್ ವ... ಮುದಗೊಳ್ಳುತ್ತಿದ್ದ. "ನಾನು ನಿಮ್ಮನ್ನು ತುಂಬ ಪ್ರೀತಿಸ್ತೀ... ಎಂದು ಹೇಳು ಎಂದು ಕಾಡುತ್ತಿದ್ದ; ಅಥವಾ ಹಾ... ಇ-ಮೇಲ್ ಕಳಿಸು ಎಂದು ಗೋಗರೆಯುತ್ತಿದ್ದ.

'ವೈದಿಕ ಸಿದ್ಧಾಂತ' ಪ್ರಯೋಗಿಸಿ ಅತ್ಯಾಚಾರ ಮಾಡ... ರಾಘು ಭೋಗದ ಹೊತ್ತಲ್ಲಿ ಸಂತ್ರಸ್ತೆಯ ಕಿವಿಯಲ್ಲಿ ಶೃಂ... ಶ್ಲೋಕ ಉಸುರುತ್ತಿದ್ದ. ತನ್ನ ಖಾಸಗಿ ಕೋಣೆಗೆ ಕ... ಲ್ಯಾಪ್‌ಟ್ಯಾಪ್ ಸ್ಕ್ರೀನ್‌ನಲ್ಲಿ ಮದೋನ್ಮತ್ತ ಶ್ಲೋಕ ಡಿ... ಮಾಡಿ ಅದರ ಅರ್ಥ ವಿವರಿಸಿ ಪ್ರಚೋದಿಸಲು ಪ್ರ... ಮಾಡುತ್ತಿದ್ದ. ಒಮ್ಮೆ ಗಿರಿನಗರದ ಮಠದ ... ಶಯ್ಯಾಗೃಹದಲ್ಲಿ "ಗುಂಜದ ಚಂಚರೀಕ ಮಧುಲೋ... ಎಂಬ ಶ್ಲೋಕ ಕಂಪ್ಯೂಟರ್ ಸ್ಕ್ರೀನ್ ಮೇಲೆ ... ರಾಘು ಒಮ್ಮೆ ಅದನ್ನು ಓದಿದ್ದಾನೆ. ನಂತರ ಇದ್ದಕ್ಕಿ... ಉದ್ರೇಕಿತನಾಗಿ ಸಂತ್ರಸ್ತೆಯನ್ನು ನೆಲಕ್ಕೆ ಬೀಳಿಸಿ ಆ ಮೊ... ಶ್ಲೋಕ ಆಕೆಯ ಕಿವಿಯಲ್ಲಿ ಪದೇಪದೇ ಹೇಳುತ್ತ ಸ... ಮಾಡಿದ್ದಾನೆ. ಇಂಥ ಕೊಳಕು ಕಾಮ ಕಲೆ ಆ... ಕರಗತವಾಗಿ ಹೋಗಿದೆ.

2004ರ ವೇಳೆ ನಡೆದ ರಾಘುನ ಹುಡು... ಪಳಗಿಸುವ ತಂತ್ರಗಾರಿಕೆಯ ಕಥಾನಕ ಸಿಐಡಿ ಪೊಲಿ... ಸಾಕ್ಷ್ಯಾಧಾರ ಸಮೇತ ಸಿಕ್ಕಿದೆ. ಸುಳ್ಯದ ಕಡೆಯ ಹ... ಹುಡುಗಿಯೊಬ್ಬಳು ಆಗ ಪಿಯುಸಿ ಕಲಿಯುತ್ತಿದ್ದಳು. ಆ... ತಾಯ್ತಂದೆ-ಪರಿವಾರ ರಾಘುನ ಮಠದ ಪರಮಭಕ್ತರಾಗಿ... ಹಾಗಾಗಿ ಆಗಾಗ ಪೆರಾಜೆ ಮಠಕ್ಕೆ ರಾಘು ಬಂದಾ... ಹೋಗಿಬರುತ್ತಿದ್ದರು. ರಾಘು ಇರುವ ಬ್ರಾಂಚಾಫೀ... ಹೋಗುತ್ತಿದ್ದರು. ಹದಿನೈದು ವರ್ಷದ ಆ ಪುಟ್ಟ ಬಾ... ಮೇಲೆ ರಾಘುನ ಕಾಕದೃಷ್ಟಿ ಅದ್ಯಾವಾಗ ಬಿದ್ದಿ... ಆಕೆಯನ್ನು ಪಳಗಿಸಲು ಆತ ಖೆಡ್ಡಾ ತೋಡೇಬಿಟ್ಟ...

ಆ ಬಾಲೆಯನ್ನು ಏಕಾಂತ ದರ್ಶನಕ್ಕೆ ಬರು... ಮಾಡಿದ ರಾಘು ಆಕೆಗೆ ಧ್ಯಾನ-ತ್ರಾಟಕಾ ಯ... ಕಲಿಸುವೆನಾಗಿ ಹೇಳಿದ್ದಾನೆ. ಇದರಿಂದ ಪರೀಕ್ಷೆ ಬರೆ... ಪ್ರಬಲ ಜ್ಞಾನ ವೃದ್ಧಿಯಾಗುತ್ತದೆಂದು ಹುಡುಗಿ ಪಾಲ...




ಶ್ಯಾಮಶಾಸ್ತ್ರಿ



...ನಾನೆ. ಧ್ಯಾನದ ತರಬೇತಿ ಕೋಣೆಗೆ ...ಯೊಬ್ಬಳನ್ನೇ ರಾಘು ಕರೆದೊಯ್ಯುತ್ತಿದ್ದ. ಆಕೆಯ ...ಮಠಕ್ಕೆ ಹೋಗುತ್ತಿದ್ದ ತಾಯಿ ಹೊರಗೇ ...ಾಗಿತ್ತು. ಹೀಗೆ ರಾಘುನ ಟ್ರೈನಿಂಗ್‌ಗೆ ...ಯುತ್ತಿದ್ದ ಹುಡುಗಿಯ ವರ್ತನೆಯಲ್ಲಿ 'ಬದಲಾವಣೆ' ... ಸ್ವಾಮಿಯ ಗಂಡಾಗುಂಡಿ ಪರಿವಾರದ ...ಣಿಯೊಬ್ಬನ ಜತೆಗಾಕೆಗೆ ...ಸುರವಾಯ್ತು. ಹುಡುಗಿಯ ...ಗಿ ರಾಘುನ ಕೇಳಿದರೆ ನಾನು ...ರಣದಲ್ಲಿ ಕೈಹಾಕಲಾರೆ ...



...ಮದುವೆ ರಾಘುನ 'ತರಬೇತಿ' ...ತ್ತು. ಧ್ಯಾನ-ಯೋಗದ ಬಗ್ಗೆ ...ೈರಿ ಬರೆಯಲು ರಾಘು ಆ ...ಹೇಳಿದ್ದ. ಆಕೆ ದೊಡ್ಡ ಡೈರಿ ... ಅದರ ಕೊನೆಯ ಪುಟದಲ್ಲಿ ...ನ್ಯಾನ ಮಾಡುವಾಗ ರಾಮನೇ ...ಬಂದು ನಿಂತಂತಾಯ್ತು... ನಾನು ...ನ್ನ ಗಟ್ಟಿಯಾಗಿ ...ಂಡು....... ನನ್ನನ್ನು ರಾಮನಿಗೆ ಸಮರ್ಪಿಸಿಕೊಂಡೆ..." ...ರೆದಿದ್ದಳು.

...ಮ ಬೇರ್‍ಯಾರೂ ಅಲ್ಲ; ಹೆಣ್ಣು ಬಾಕ ರಾಘುನೇ ... ಬಾಲಕಿಗೆ ಪ್ರತ್ಯಕ್ಷನಾಗಿ ನುಂಗಿಹಾಕಿದ ಪಾಪಿ ...ಚೆ ನಂತರ ಹೆತ್ತವರು ಆಕೆಯನ್ನು ರಾಘುನ ...ಬಿಡಿಸಲೆಂದು ಮೈಸೂರಿಗೆ ಕಳಿಸುತ್ತಾರೆ. ಅಲ್ಲಾಕೆ ...ವಿಭಾಗದಲ್ಲಿ ಪೋಸ್ಟ್ ಗ್ರ್ಯಾಜುಯೇಷನ್ ...ಳೆ. ಆದರೆ ರಾಘು ವಿಷವ್ಯೂಹದಿಂದ ಆಕೆಗೆ ...ಲಾಗಲೇ ಇಲ್ಲ. ರಾಘುನ ಪರಿವಾರದ ...ಗ (ರಾಘು ಪಿಎ)ನೂ, ಬಾಲ್ಯದ ಕ್ಲಾಸ್‌ಮೇಟೂ ...ಸಾಕುಳಿ ಮಾಣಿ ಜತೆ ಆಕೆಯ ಮದುವೆ ...ೀಗುತ್ತದೆ.

ಈ ಗಂಡ-ಹೆಂಡಿರಿಗೆ ಪ್ಲಾಸ್ಟಿಕ್ ಉದ್ಯಮ ...ಟ್ಟಿದ್ದಾನೆ. ಆಕೆ ರಾಘುನ ಸೇವೆಗೆ ಸದಾ ...ಗಿದ್ದಾಳೆ. ರಾಘುನ ಲಕ್ಷಗಟ್ಟಲೆ ಜೀವವಿಮಾ ...ಕಂತು ಈಕೆಯ ಆಫೀಸಿನ ಇ-ಮೇಲ್ ...ಲೇ ಸಂದಾಯವಾಗುತ್ತಿದೆ. ಅಂದರೆ ಗುರು-...ಬಂಧ ಅದೆಷ್ಟು ಅನ್ಯೋನ್ಯವೆಂಬುದು ನೀವೇ ...! ಇವತ್ತಿಗೂ ಈ 'ಗೃಹಿಣಿ' ಗುರು 'ಸೇವೆ' ... ಮಾಡುತ್ತಲೇ ಇದ್ದಾಳೆ.

ಐತಿಹಾಸಿಕ ಷಡ್ಯಂತ್ರ!

...ಕಾವಿ ಪ್ರಪಂಚದಲ್ಲಿ ರಾಘುನದು ಐತಿಹಾಸಿಕ ... ದಾಖಲೆ!! ಅಸಹಾಯಕ ಹೆಣ್ಣನ್ನು ದೈವ ...ಹೆದರಿಸಿ ರೇಪ್ ಮಾಡಿದ ಆರೋಪದಲ್ಲಿ ಐಪಿಸಿ ...08ರ ಪ್ರಕಾರ ರಾಘುನ ಮೇಲೆ ಈಗ ...ಟ್ ಹಾಕಲಾಗಿದೆ. ಇಡೀ ಕೇಸನ್ನು ಹಳ್ಳ ಹಿಡಿಸಿ ...ರ್ಜ್ ಹಾಕಿಸಲು ಆತ ಮಾಡಿದ ಷಡ್ಯಂತ್ರಗಳೆಲ್ಲ ...ಗಿದೆ. ಒಂದಿಡೀ ವರ್ಷ ನ್ಯಾಯಾಂಗ, ...ಂಗ, ಸರ್ಕಾರಿ ಯಂತ್ರವೆಲ್ಲ ರಾಘುನ ಪರವಾಗೇ ...ಮಾಡಿ ಕೇಸು ಹಾಕಿದ ಪ್ರೇಮಲತಾ-ದಿವಾಕರ್ ...ಕ ಸ್ಥೈರ್ಯ ಕೆಡಿಸುವ ನೀಚತನ ನಡೆಸಿದ್ದವು. ...ಸಿದ್ದು ಮೇಲೆ ಪ್ರಗತಿಪರರು ಒಂದೆಡೆಯಿಂದ ...ಕೋಳ ತೊಡಿಸಲು ಒತ್ತಡ ತಂದರೆ, ...ಯಿಂದ ಸಚಿವರುಗಳು ಸರ್ಕಾರ ಮಂತ್ರಿ-...ಕಟ್ಟಿಗ ಅಧಿಕಾರಿಗಳ ಮೂಲಕವೇ ದಾಳ ...ರುತ್ತಿದ್ದರು. ಅತ್ತ ದಿಲ್ಲಿಯಲ್ಲಿ ಅಸಲೀ ಚಡ್ಡಿಗಳು ...ಸಿಪ್ಪಿ ಜೈಲಲ್ಲಿ ನೋಡಲೇಬೇಕೆಂಬ ಹಠದಿಂದ ...ಳಾ ಆಯೋಗದ ಮೂಲಕ ಚಾರ್ಜ್‌ಶೀಟ್ ... ತಂತ್ರ ನಡೆಸಿದ್ದರು. ಇವೆಲ್ಲದರ ಫಲವಾಗಿ ...ಲೆ ಆರೋಪ ಪಟ್ಟಿ ಸಲ್ಲಿಕೆ 'ಸ್ತ್ರೀ ವಾಸನೆ'ಯ ಕಾವಿಸಮೇತ ನಿಲ್ಲಬೇಕಾಗಿ ಬಂದಿದೆ.

ಒಂದಂತೂ ಖರೆ. ರಾಘು ತಾನೇ ನೇಯ್ದ ಬಲೆಯಲ್ಲಿ ಬಿದ್ದು ಒದ್ದಾಡುತ್ತಿದ್ದಾನೆ. ತನ್ನ ಪಾತಕ-ಘಟಿಂಗತನ ಹೊರಬಂದಾಗೆಲ್ಲ ಕೌಪೀನ ಕಳಚಿ ಬೀಳುವಂತೆ 'ಷಡ್ಯಂತ್ರ' ಎಂದು ಬೊಬ್ಬೆ ಹೊಡೆಯುವ ರಾಘು ಅಸಲಿಗೆ ಆತನೇ ಷಡ್ಯಂತ್ರಗಾರ. ತನಗಾಗದವರನ್ನು ಹಣಿಯಲು ಹೇಯ-ಬರ್ಬರ-ಅಮಾನುಷ ಸ್ಕೆಚ್ ಹಾಕುವ ಈತ ಕಳೆದ ಕೆಕ್ಕಾರ ಚಾತುರ್ಮಾಸ್ಯದಿಂದ ಮೊನ್ನೆ ಮುಗಿದ ಗಿರಿನಗರ ಚಾತುರ್ಮಾಸ್ಯದ ತನಕ ಮಾಡಿದ್ದೆಲ್ಲವೂ ಷಡ್ಯಂತ್ರವೇ. ನಾಗಪುರದ ಚಡ್ಡಿ ವಲಯದಲ್ಲಿ ಪ್ರಭಾವಿಗಳಾದ ದತ್ತಾತ್ರೇಯ ಹೊಸಬಾಳೆ, ಚ.ಮೂ.ಕೃಷ್ಣಶಾಸ್ತ್ರಿ ಮತ್ತು ಉದ್ಯಮಿ ಎಂ.ಎನ್. ಭಟ್ ಮದ್ಗುಣಿ, ಸಿ.ಎಚ್. ಸತ್ಯನಾರಾಯಣ, ರೇಪ್‌ಕೇಸ್ ಸ್ಫೋಟಿಸಿದಾಗ ರಾಘುನ ಬಳಿಗೆ ಹೋಗಿ "ಇದು ಕ್ಲಿಯರ್ ಕಟ್‌ಕೇಸ್... ನೀವು ಅತ್ಯಾಚಾರ ಮಾಡಿದ್ದಕ್ಕೆ ಸಾಕ್ಷಿ ಆಧಾರವಿದೆ... ಇದು ಭಕ್ತರ ನಂಬಿಕೆ ಪ್ರಶ್ನೆ..... ಪೀಠತ್ಯಾಗ ಒಂದೇ ನಿಮಗೆ ದಾರಿ....." ಎಂದು ಹೇಳಿದ್ದರು.

ಆಗ ತಡಬಡಾಯಿಸಿದ ರಾಘು ಗತಿಯಿಲ್ಲದೆ ಚಾತುರ್ಮಾಸ್ಯದ ನಂತರ ಹಿಮಾಲಯಕ್ಕೆ ಏಕಾಂತಕ್ಕೆ ತಪಸ್ಸಿಗೆ ಹೋಗುತ್ತೇನೆ. ಅಲ್ಲಿತನಕ ಅವಕಾಶ ಕೊಡಿ ಎಂದು ಅಂಗಲಾಚಿದ್ದ. ಆದರೆ ಎರಡು ತಿಂಗಳ ಚಾತುರ್ಮಾಸ್ಯದಲ್ಲಿ ಆತ ಆಡಿದ್ದು ಅಪ್ಪಟ ಷಡ್ಯಂತ್ರದ ಆಟ. ಚಾತುರ್ಮಾಸ್ಯ ಶುರುವಾದ ಕೆಲವೇ ದಿನದಲ್ಲಿ ಪ್ರೇಮಲತಾ-ದಿವಾಕರ್ ಮೇಲೆ 3 ಕೋಟಿ ಬೇಡಿಕೆಯ ಬ್ಲ್ಯಾಕ್‌ಮೇಲ್ ಕೇಸು ರಾಘು ಹಾಕಿಸುತ್ತಾನೆ. ಹೊನ್ನಾವರದ ಪೊಲೀಸ್‌ರನ್ನು ಖರೀದಿಸಿದ್ದ ರಾಘು ಪಟಾಲಮ್ ಅಂದಿನ ಪಿಐ ಮಂಜುನಾಥ್‌ಗೌಡ ಎಂಬ ಲಂಚ ಬಡುಕನನ್ನು ಖುದ್ದು ಬೆಂಗಳೂರಿಗೆ ಕಳಿಸಿ ಪ್ರೇಮಲತಾ ದಂಪತಿಗಳ ದಸ್ತಗಿರಿ ಮಾಡಿಸಿದ್ದ; ಬೆಳಗ್ಗೆ ಬಂಧನವಾದರೆ ಸಂಜೆ ಜಾಮೀನು ಮೇಲೆ ಬಿಡುವಂಥ ಪುಟಗೋಸಿ ಕೇಸಲ್ಲಿ ಪ್ರೇಮಲತಾ ದಂಪತಿ ಬರೋಬ್ಬರಿ ಮೂರು ವಾರ ಜೈಲಲ್ಲಿ ಕುಳಿತುಕೊಳ್ಳುವಂತೆ ನ್ಯಾಯಾಲಯದ ಮೂಲಕವೇ ರಾಘು ಮಾಡಿಸಿದ್ದ. ಈ ನ್ಯಾಯ ವಿಧಾನ ಸಾರ್ವತ್ರಿಕ ಅಚ್ಚರಿ-ಅನುಮಾನ ಮತ್ತು ರಾಘುನ ಷಡ್ಯಂತ್ರದ ಪಾತಕದ ಚರ್ಚೆಗೆ ಕಾರಣವಾಗಿತ್ತು.

ತಾತ್ಕಾಲಿಕ ನಿರೀಕ್ಷಣಾ ಜಾಮೀನು ಮುಂದುವರಿಸಲು ಹೈಕೋರ್ಟ್ ನಿರಾಕರಿಸಿದಾಗ ಕೆಕ್ಕಾರದಲ್ಲಿದ್ದ ರಾಘು ತನ್ನನ್ನು ಬಂಧಿಸುತ್ತಾರೆಂಬ ಹುಯಿಲೆಬ್ಬಿಸಿ ಅಮಾಯಕ ಜನರನ್ನು ಪ್ರಚೋದಿಸಿ ಮಠದ ಬಳಿ ಜಮೆಯಾಗುವಂತೆ ಷಡ್ಯಂತ್ರ ಮಾಡಿದ್ದ. ಮುಗ್ಧ ದಲಿತ (ಮುಕ್ರಿ), ಬುಡಕಟ್ಟು (ಹಾಲಕ್ಕಿ ಒಕ್ಕಲಿಗರು) ಮುಂತಾದ ಶೂದ್ರರ ಕೈಲಿ ಮಾರಕಾಯುಧ ಕೊಟ್ಟು ಮಠದ ಸುತ್ತಲೂ ನಿಲ್ಲಿಸಿ ಸೀನ್ ಕ್ರಿಯೇಟ್ ಮಾಡಿದ್ದ. ಅತ್ತ ಜಿಲ್ಲಾ ಎಸ್ಪಿ ದಿಲೀಪ್ ಎಂಬ ವಿಪ್ರೋತ್ತಮನ ಬುಟ್ಟಿಗೆ ಹಾಕಿಕೊಂಡಿದ್ದ ರಾಘು ಪಟಾಲಮ್ ಬಂಧನ ಭೀತಿಯಿಂದ ಮುಕ್ತವಾಗಿತ್ತು. ಆದರೂ ಬಂಧನದ ಭೀತಿಯ ನಾಟಕವಾಡಿ ಸಾರ್ವಜನಿಕ ಸಿಂಪಥಿಯ ಷಡ್ಯಂತ್ರ ಹೆಣೆಯಲಾಗಿತ್ತು.

ಅತ್ತ ಬೆಂಗಳೂರಿನ ಸೆಷನ್ಸ್ ನ್ಯಾಯಾಲಯದಲ್ಲಿ ಅಂದೇ ಕೇವಲ ನಾಲ್ಕೈದು ತಾಸಲ್ಲಿ ರಾಘುಗೆ ಕಾಯಂ ನಿರೀಕ್ಷಣಾ ಜಾಮೀನು ಸಿಕ್ಕಿತ್ತು. ದೇಶದ ಕಾನೂನು ಮಂತ್ರಿ ಮಗ (ಸದಾನಂದ ಗೌಡರ ಮಗ)ನೇ ರೇಪ್ ಕೇಸಲ್ಲಿ ನಿರೀಕ್ಷಣಾ ಜಾಮೀನಿಗೆ ವಾರಗಟ್ಟಲೆ ತಲೆ ಮರೆಸಿ ಕೊಳ್ಳುವಂತಾಗಿ ದ್ದರೂ ರೇಪಿಸ್ಟ್ ರಾಘುಗೆ ಮಾತ್ರ ಮಿಂಚಿನ ವೇಗದಲ್ಲಿ ನಿರೀಕ್ಷಣಾ ಜಾಮೀನು ಮಂಜೂರಾಗಿತ್ತು. ಅಷ್ಟು ಷಡ್ಯಂತ್ರ ಪ್ರವೀಣ ರಾಘು ಸ್ವಾಮೀಜಿ!

ಹೆಜ್ಜೆಹೆಜ್ಜೆಗೂ ಷಡ್ಯಂತ್ರ ಮಾಡುತ್ತಲೇ ಬಂದ ರಾಘು ಹೈಕೋರ್ಟಿನಲ್ಲೂ ಎಫ್‌ಐಆರ್ ರದ್ದತಿಗೆ ತಿಪ್ಪರಲಾಗ ಹಾಕಿದ್ದ. ಈತನ ಕೇಸಿಂದ ಸರತಿ ಸಾಲಲ್ಲಿ ನ್ಯಾಯಾಧೀಶರು ನಿವೃತ್ತಿ ಘೋಷಿಸಿದ್ದರು. ಅಷ್ಟು ಪ್ರಭಾವಿ ರೇಪಿಸ್ಟ್ ರಾಘು ಎಂದು ಜನ ಮಾತಾಡಿಕೊಳ್ಳುವಂತಾಗಿತ್ತು. ವಿಧಿವಿಜ್ಞಾನ ಕೇಂದ್ರದಲ್ಲಿ



ಸಂತ್ರಸ್ತೆಯ ಬಟ್ಟೆಯಲ್ಲಿದ್ದದ್ದು ಸ್ವಾಮಿ ಪ್ರಸಾದವೇ ಎಂದು ಹೇಳಿದರೂ ರಾಘುನ ಪರವಿದ್ದ ಹಳದಿ ಪತ್ರಕರ್ತ ಸುಳ್ಳೇಸುಳ್ಳೆಂದು ಕಿರುಚಾಡಿದ್ದರು. ಸಾಮಾಜಿಕ ಜಾಲತಾಣದಲ್ಲಿ ಪ್ರೇಮಲತಾ ಮತ್ತಾಕೆಯ ಬೆಳೆದುನಿಂತ ಪಾಪದ ಇಬ್ಬರು ಹುಡುಗಿಯರ ಚಾರಿತ್ರ್ಯಹನನ ಮಾಡಿ ಸಂಭ್ರಮಿಸಿದ್ದರು. ಇದಲ್ಲವಾ ಷಡ್ಯಂತ್ರ?

ಹೊನ್ನಾವರ ಪೊಲೀಸರಿಗೆ ಪ್ರೇಮಲತಾ-ದಿವಾಕರ್ ದಂಪತಿ ಮೇಲೆ ಬ್ಲ್ಯಾಕ್‌ಮೇಲ್ ಕಂಪ್ಲೇಂಟು ಕೊಟ್ಟಾತನೇ ಡಮ್ಮಿ ಭೂಪ! ಈತ ಕೆಕ್ಕಾರು ಮಠದಲ್ಲಿ ಚಾತುರ್ಮಾಸ್ಯ ನಡೆದಾಗ ಅಡುಗೆ ಸಾಮಾನು ಪೂರೈಸುವ ಕಂಟ್ರಾಕ್ಟು ಹಿಡಿದಿದ್ದ ದಿವಾಳಿಕೋರ. ಹೊನ್ನಾವರದ ಹಳದಿಪುರದಲ್ಲಿ 'ಗೋ ಗ್ರೀವನ್' ಎಂಬ ಹೋಮ್‌ಸ್ಟೇ ನಡೆಸುವ ಈತನ ತಂದೆ ರೈತ ಸಹಕಾರಿ ಸಂಘವನ್ನೇ ದೋಚಿಕೊಂಡು ನಾಪತ್ತೆಯಾಗಿದ್ದ ಹರಾಮಿ. ಈತನಿಗೆ ರಾಘುನ ಹತ್ತಿರವೂ ಹೋಗುವ ಯೋಗ್ಯತೆ ಇಲ್ಲವೆಂದು ಆತನ ಬಾಡಿಗಾರ್ಡ್‌ಗಳು ಒಳಗೇ ಬಿಡುತ್ತಿರಲಿಲ್ಲ. ಇಂಥ ಬಿ.ಆರ್. ಚಂದ್ರಶೇಖರ್ ಸ್ವಾಮಿಗೆ ಬ್ಲ್ಯಾಕ್‌ಮೇಲ್ ಮಾಡಲಾಗಿದೆ ಎಂದು ಕಂಪ್ಲೇಂಟು ಕೊಡುವುದೇ ಕುಚೋದ್ಯ. ಹಸಿ ಹಸೀ ಸುಳ್ಳು.

ಈತನ ಹೋಮ್‌ಸ್ಟೇನಲ್ಲಿ ರಾಘು ರಹಸ್ಯವಾಗಿ ಬಂದಿಳಿದು ರಂಗೀಲಾ ನಡೆಸಿಹೋಗುತ್ತಾನೆಂಬ ಪುಕಾರು ತುಂಬ ಹಿಂದಿನಿಂದಲೂ ಹೊನ್ನಾವರ ಸೀಮೆಯಲ್ಲಿದೆ. ಈ ಚಂದ್ರಶೇಖರ್‌ಗೆ ಬ್ಲ್ಯಾಕ್‌ಮೇಲ್ ಕಂಪ್ಲೇಂಟು ಕೊಡುವ ಅಧಿಕಾರವೇ ಇಲ್ಲ, ಇದೊಂದು ಖೋಟಾ ಕಂಪ್ಲೇಂಟು.

ರಾಘು ಸ್ವಾಮಿಯ ಜಿಪಿಎ (ಜನರಲ್ ಪವರ್ ಆಫ್ ಅಟಾರ್ನಿ) ಇರುವುದು ರಾಮಚಂದ್ರಾಪುರ ಮಠದ ಆಡಳಿತಾಧಿಕಾರಿ ತಿಮ್ಮಪ್ಪ ಮಡಿಯಾಳ್ (ನಿವೃತ್ತ ಪೊಲೀಸ್ ಅಧಿಕಾರಿ), ಗಿರಿನಗರ ಮಠದ ಸಿಇಓ ನಿವೃತ್ತ ಡಿಸಿಪಿ ಕೆ.ಜಿ. ಭಟ್ ಮತ್ತು ಮೋಹನ್ ಭಾಸ್ಕರ್ ಹೆಗಡೆ ಎಂಬ ತ್ರಿಮೂರ್ತಿಗಳಿಗೆ ಮಾತ್ರ. ಈ 'ದೊಡ್ಡ'ವರು ಬ್ಲ್ಯಾಕ್‌ಮೇಲ್ ಕಂಪ್ಲೇಂಟು ಕೊಡಲು ಹಿಂದೇಟು ಹಾಕಿದ್ದೇಕೆ? ರಾಘುನ ಹೆಗಲು ಹೊಸೆಯುವ ಘನಿಷ್ಠ ಶಿಷ್ಯೋತ್ತಮರಿಗೆ ಕಂಪ್ಲೇಂಟು ಕೊಡಲು ಏನು ದಾಢಿಯಾಗಿತ್ತು?

ಇಲ್ಲೂ ಒಂದು ಷಡ್ಯಂತ್ರವಿದೆ. ಅಕಸ್ಮಾತ್ ಬ್ಲ್ಯಾಕ್‌ಮೇಲ್ ಕೇಸಲ್ಲಿ ಸೋತರೆ ಮಠದ ವತಿಯಿಂದ ದೂರು ಕೊಟ್ಟಿರಲಿಲ್ಲ; ಅದು ಭಕ್ತರ ಮರ್ಜಿಯಂತೆ ನಡೆದಿದೆ. ನಮಗೇನೂ ಸಂಬಂಧವಿಲ್ಲವೆಂದು ಚಂದ್ರಶೇಖರನ ಬಲಿ ಹಾಕುವ ಹಿಕಮತ್ತು. ಇಂಥ ಖತರ್‌ನಾಕ್ ಸ್ಕೆಚ್‌ನಲ್ಲಿ ರಾಘು ನಿಸ್ಸೀಮ! ಇದೆಲ್ಲಾ ಏನೇ ಇರಲಿ. ಬ್ಲ್ಯಾಕ್‌ಮೇಲ್ ಕೇಸೇ ದಿವಾಕರ್-ಪ್ರೇಮಲತಾರನ್ನು ಹಣಿದು ತನ್ನ ವಿರುದ್ಧ ರೇಪ್‌ಕೇಸು ಅವರು ಹಾಕದಂತೆ ತಡೆಯಲು ಮಾಡಿದ ಷಡ್ಯಂತ್ರವಷ್ಟೇ!



ಮಠದೊಳಗಣ ಮಡಿಯೇ ಮುಳ್ಳು

ರಾಘುನ ಹಸಿಹಸೀ ಹಾದರ, ಹಲ್ಕಟ್‌ಗಿರಿ, ಹರಾಮಿ ಹಿಕಮತ್ತು ಮತ್ತು ಬಹಿಷ್ಕಾರ, ಗುರು ಶಾಪ, ಗೂಂಡಾಗಿರಿಯಿಂದ ಆತನ ಸುತ್ತಲಿರುವ ಮಡಿಗಳೇ ಬೇಸತ್ತು ಹೋಗಿದ್ದಾರೆ. ರಾಘು ಎಷ್ಟು ಬೇಗ ಪೀಠದಿಂದ ತೊಲಗುತ್ತಾನೋ ಅಷ್ಟು ಬೇಗ ಹವ್ಯಕ ಹೆಂಗಸರ ಮಾನ-ಪ್ರಾಣ ಸುರಕ್ಷಿತ ಎಂದು ಈ ಮಡಿಗಳು ಭಾವಿಸಿವೆ! ರಾಘುನ ರಾಸಲೀಲಾ ವಿನೋದ ಲಾಗಾಯ್ತಿನಿಂದಲೂ ನೋಡುತ್ತ ಬಂದ ಮಡಿಯೊಂದು ರೋಸಿ ಹೋಗಿತ್ತು. ಅದು ಅಂದಂದಿನ ರಾಘುನ ಸ್ವಾಹಾದ ಕತೆ ಅಂದಂದೇ ಬರೆದಿಟ್ಟಿದೆ ಎಂಬುದೀಗ ಮಠದ ಪಡಸಾಲೆಯಲ್ಲಿ ದೊಡ್ಡ ಗುಲ್ಲಿಗೆ ಕಾರಣವಾಗಿದೆ.

ಈ ಮಡಿ ರಾಘು ತಿಂದು ಮುಗಿಸಿರುವ ಒಂದೂವರೆ ಡಜನ್‌ಗಿಂತಲೂ ಹೆಚ್ಚಿನ ಹೆಣ್ಣುಗಳ ವಿವರ, ಫೋಟೋ ಸಂಗ್ರಹಿಸಿಟ್ಟುಕೊಂಡಿವೆ ಎನ್ನಲಾಗಿದೆ. ರಾಘು ತಿಂದು ಹಾಕಿರುವ ಸ್ತ್ರೀಯರೆಲ್ಲ ಆತನ ಸ್ವ-ಜಾತಿ ಹವ್ಯಕರವೇ. ಈ ಮಡಿಗಳೇ ರಾಘು ಆಗಾಗ ತನಗಾಗದವರ ವಿರುದ್ಧ ಪ್ರವಚನದ ಫತ್ವಾನ ಹೊರಡಿಸುವುದು, ಕಿಡ್‌ನ್ಯಾಪ್ ಮಾಡಿಸೋದು, ಹಲ್ಲೆಗೆ ಕಳಿಸೋ ವಿವರ ಹೊರಜಗತ್ತಿಗೆ ಕಳಿಸಿ ಬಡಜೀವಗಳ ಉಳಿಸುತ್ತಿದ್ದಾರೆ. ಮಡಿಗಳೇ ಮಗ್ಗುಲು ಮುಳ್ಳಾಗಿರುವುದು ರಾಘುಗೆ ದೊಡ್ಡ ಗಂಡಾಂತರವಾಗಿದೆ.

ನಾರಿಯರ ದಾರಿ ತಪ್ಪಿಸುತ್ತಿದ್ದಾನೆ!

'ಪ್ರಬಲಾ' ಅತ್ಯಾಚಾರ ದೂರು ದಾಖಲಾದಾಗ ಕಂಗಾಲಾಗಿ ಹೋಗಿರುವ ರಾಘು ಮಾಣಿ ಮೊದಲ ರೇಪ್ ಕೇಸ್‌ನ ಚಾರ್ಜ್‌ಶೀಟ್ ನ್ಯಾಯಾಲಯಕ್ಕೆ ಸಲ್ಲಿಕೆ ಆಗುತ್ತಿದ್ದಂತೆಯೇ ಕಾವಿಯೊಳಗೇ ಥರಗುಟ್ಟುತ್ತಿದ್ದಾನೆ! ತಾನು ಬಚಾವಾಗಲು ಆತನೀಗ ಮುಗ್ಧ ಹವ್ಯಕ ನಾರಿಯರ ದಾರಿ ತಪ್ಪಿಸುತ್ತಿದ್ದಾನೆ. ತಾನು ಹೆಣ್ಣು ಬಾಕನೆಂದು ದೂರು ದಾಖಲಿಸಿರುವ ಇಬ್ಬರೂ ಹೆಂಗಸರು ಹುಸಿ ಸಂತ್ರಸ್ತೆಯರೆಂದು ಹವ್ಯಕ ಸೀಮೆಯಲ್ಲಿ ಅಪಪ್ರಚಾರ ಮಾಡಿಸುತ್ತಿದ್ದಾನೆ. ಆ ಮೂಲಕ ಹವ್ಯಕ ಹೆಂಗಸರನ್ನು ಬೀದಿಗಿಳಿಸಿ ತನ್ನ ಪರ ಭೂಬಡುವ ಹುನ್ನಾರ ರಾಘುನದು.

"ನಾರಿ ಸುರಕ್ಷಾ ಸೇನೆ" ಎಂಬ ಗ್ಯಾಂಗ್ ಹುಟ್ಟುಹಾಕಿರುವ ರಾಘುನ ತಾಲಿಬಾನಿ ತಂಡ ಹವ್ಯಕರು ಹೆಚ್ಚಿರುವ ಕಡೆಯಲ್ಲಿ ರಾಘು ಬೆಂಬಲಾರ್ಥ ಸಭೆ ಮಾಡಿಸುತ್ತಿದೆ. ಈ ನಾರಿ ಸುರಕ್ಷಾ ಸೇನೆಯ ಮುಂಚೂಣಿಯಲ್ಲಿ ಕೂಗುಮಾರಿ ಕುಖ್ಯಾತಿಯ ಪ್ರಮೀಳಾ ನೇಸರ್ಗಿ ಎಂಬ ವೃದ್ಧ ನಾರೀಮಣಿ ಹಾಗು ತಾನು ಕುರುಬ ಸಮುದಾಯದವಳೆಂದು ಸುಳ್ಳು ಹೇಳಿ ಮಹಿಳಾ ಆಯೋಗದ ಸದಸ್ಯತ್ವ ಪಡೆದು ಸಿಕ್ಕಿಹಾಕಿಕೊಂಡು ವಜಾ ಆಗಿರುವ ಸುಮನಾ ಹೆಗಡೆ ಎಂಬ ವಕೀಲೆ ಇದ್ದಾರೆ. ಈ ಇಬ್ಬರೂ ಸೂಲಿಬೆಲೆ ಚಕ್ರವರ್ತಿಯಂತೆ ಮಠದ ಕಾಣಿಕೆ ಪಡೆದು ರೇಪಿಸ್ಟ್ ಪರ ವಾದಕ್ಕಿಳಿದಿದ್ದಾರೆಂದು ಹವ್ಯಕ ಹೆಂಗಸರೇ ಹೇಳುತ್ತಿದ್ದಾರೆ.

ಪ್ರಮೀಳಾ ಎಲ್ಲೂ ಸಲ್ಲದೆ ಪುನರ್ವಸತಿಗಾಗಿ ನಾಲಿಗೆ ಝಳಪಿಸುವ ನಾರಿಯಾದರೆ ಸುಮನಾ ಹೆಗಡೆ ಇತಿಹಾಸ-ಭೂಗೋಳವೇ ನಿಗೂಢ. ಹೊನ್ನಾವರದಿಂದ ಹೇಗೇಗೋ ಬೆಂಗಳೂರು ಸೇರಿದ ಈಕೆ ಕಾಂಗ್ರೆಸ್ ನಾಯಕಿ ಎಂದು ಪೋಸು ಕೊಡುತ್ತಿದ್ದಾಳೆ.

ಸುಮಾರು ಒಂದೂವರೆ ದಶಕದ ಹಿಂದೆ ಕುಮಟಾದ ಕಾಂಗ್ರೆಸ್ ಕ್ಯಾಂಡಿಡೇಟೆಂದು ಸುದ್ದಿ ಹಬ್ಬಿಸಿದ್ದಳು. ದೇವಿದಾಸ್ ಗಾಂವ್ಕರ್ ಎಂಬ ಕಾರವಾರದ ಭಾನ್ಗಡಿ ಭೂಪನ ಜತೆ ಉತ್ತರ ಕನ್ನಡದಲ್ಲಿ ಕಾಣಿಸಿಕೊಂಡು ಮುದ್ರಣ-ಪ್ರಸರಣದ ಹೆಸರಲ್ಲಿ ಒಂದಿಷ್ಟು ಹಣ ಎತ್ತಿ ನಾಪತ್ತೆಯಾಗಿದ್ದಳು. ಮಹಿಳಾ ವಕೀಲೆಯರ ಯಾವುದೋ ಸಂಘ ಕಟ್ಟುತ್ತೇನೆಂದು ಅರ್ಧ ಕೋಟಿಯಷ್ಟು ಸಂಗ್ರಹಿಸಿ ಸ್ವಾಹಾ ಮಾಡಿದ್ದಾಳೆಂದು ಹೇಳುವವರೂ ಇದ್ದಾರೆ.

ಇಂಥ ಹಿನ್ನೆಲೆಯ ಈ ಘಟವಾಣಿಗಳು ಹವ್ಯಕರ ಏರಿಯಾದಲ್ಲಿ ಪ್ರಬಲಾ ಮತ್ತು ಪ್ರೇಮಲತಾರನ್ನು ಪರೋಕ್ಷವಾಗಿ ಗುರುಕೃಪೆಗೆ ಪಾತ್ರರಾಗಲು ಹವಣಿಸುತ್ತಿದ್ದಾರೆ. ಯಾವುದೇ ಹೆಣ್ಣು ತನ್ನ ಮೇಲೆ ಅತ್ಯಾಚಾರ ಆಗಿದೆಯೆಂದು ಸುಳ್ಳು ಹೇಳಲು ಸಾಧ್ಯವೇ ಇಲ್ಲ ಎಂಬ ಸರಳ ಸತ್ಯ ಈ ನಾರಿಯರಿಗೆ ಅರ್ಥವಾಗದಿರುವುದು ದುರಂತ. ರಾಘುನ ಸ್ತ್ರೀ ವ್ಯಾಮೋಹ ಬುರ್ನಾಸ್ ಬುದ್ಧಿಯ ಅರಿವಿರುವ ಗಂಡಸರೇ ಆತನ ಬಗ್ಗೆ ಅಸಹ್ಯ ಪಡುತ್ತಿರುವ ಈ ಕಾಲಘಟ್ಟದಲ್ಲಿ ಈ ನಾರಿದ್ವಯರು ಆತನನ್ನು ಸಮರ್ಥಿಸುತ್ತಿರುವುದು ನಾಚಿಕೆಗೇಡು. ನಾರಿಸುರಕ್ಷಾ ಸಮ್ಮೇಳನಕ್ಕೆ ಅನಿವಾರ್ಯವಾಗಿ ಬಂದಿದ್ದ ಹವ್ಯಕ ಹೆಂಗಸರೀಗ ಗೊಂದಲಕ್ಕೆ ಬಿದ್ದಿದ್ದಾರೆ.

ಷಡ್ಯಂತ್ರ ಚತುರ ರಾಘು ಮಾಣಿ ಬೆಂಗಳೂರಲ್ಲೂ ಪ್ರಬಲಾ-ಪ್ರೇಮಲತಾ ಪ್ರಕರಣ ವಿರುದ್ಧ ಒಂದು ಪ್ರತಿಭಟನೆ ಮಾಡಿಸಿದ್ದಾನೆ. ಆ ಪ್ರತಿಭಟನೆಗೆ ಯಕ್ಷಗಾನ ವೇಷಧಾರಿಗಳನ್ನು ಮುಂದಿಟ್ಟು ಸಾರ್ವಜನಿಕರ ದಿಕ್ಕು ತಪ್ಪಿಸುವ ತಂತ್ರಗಾರಿಕೆ ಮಾಡಿದ್ದಾನೆ. ಆತನ ಕ್ರಿಮಿನಲ್ ಬುದ್ಧಿ ಹೇಗ್ಹೇಗೆ ಓಡುತ್ತದೋ ಆ ಶ್ರೀರಾಮನೇ ಬಲ್ಲ! ನಾಯಕಿ ಪ್ರೇಮಲತಾ ಅತ್ಯಾಚಾರದ ಪ್ರಕರಣ ಬಯಲಿಗೆ ಬಿದ್ದಾಗ ಗಾಯಕಿಯರಿಂದಲೇ ತನ್ನನ್ನು ತಾರೀಫು ಮಾಡಿಸಿಕೊಂಡಿದ್ದ; ಈಗ ಪ್ರಬಲಾ ಯಕ್ಷಗಾನ ಕಲಾವಿದೆ ಎಂಬ ಕಾರಣ ಯಕ್ಷಗಾನ ವೇಷಧಾರಿಗಳನ್ನು ಬೀದಿಗಿಳಿಸಿ ಆ ಕಲೆಗೇ ಅಪಚಾರ ಮಾಡಿದ್ದಾನೆ. ಆದರೆ ಇದ್ಯಾವುದೂ ಹವ್ಯಕ ವಲಯದಲ್ಲಿ ರಾಘುನಿಗಾದ ಡ್ಯಾಮೇಜು ಕಂಟ್ರೋಲ್ ಮಾಡಿಲ್ಲ, ಬದಲಿಗೆ ಆತನ ಅಸಲೀ ಅವತಾರದ ಅನಾವರಣವೇ ಹೆಚ್ಚಾಗುತ್ತಿದೆ.

ಎಂತೆಂಥ ಷಡ್ಯಂತ್ರ ಮಾಡಿದರೂ ರಾಘುಗೆ ನಿದ್ದೆ ಮಾತ್ರ ಬೀಳುತ್ತಿಲ್ಲ, ಒಂದಲ್ಲ ಎರಡೆರಡು ರೇಪ್ ಕೇಸಲ್ಲಿ ಸಿಕ್ಕಿಬಿದ್ದಿರುವ ಆತ ಇನ್ನು ಯಾರು ಕೇಸ್ ಹಾಕ್ತಾರೋ ಎಂಬ ಆತಂಕದಿಂದ ಒದ್ದಾಡುತ್ತಿದ್ದಾನೆ. ಆತನ ಶುಗರ್ ಹೆಚ್ಚಾಗುತ್ತಿದೆ. ಶ್ಯಾಮಶಾಸ್ತ್ರಿಯ ಪ್ರೇತ ನಿದ್ದೆಯಲ್ಲೂ ಎದ್ದು ಕೂರಿಸುತ್ತಿದೆ. ಒಂದಲ್ಲ ಒಂದು ಪ್ರಕರಣದಲ್ಲಿ ಜೈಲು ಪಾಲಾದರೂ ಆದೇನು ಎಂಬು ಭಯದಲ್ಲಿರುವ ರಾಘು ಶಿಷ್ಯ ಸ್ವೀಕಾರಕ್ಕೆ ರಹಸ್ಯ ಸಿದ್ಧತೆ ನಡೆಸಿದ್ದಾನೆಂದು ಮಠದ ತಾಲಿಬಾನಿ ಮಡಿಗಳು ಪಿಸುಗುಡುತ್ತಿವೆ.

ಮೊದಲ ರೇಪ್ ಕೇಸಲ್ಲಿ ಕೋರ್ಟು-ಕಚೇರಿ-ಪತ್ರಕರ್ತರ-ಅಧಿಕಾರಿಗಳ ನಿಭಾವಣೆ ಎಂದೆಲ್ಲ ಹೈರಾಣಾಗಿದ್ದ ರಾಘು ಒಂದು ಹಂತದಲ್ಲಿ ಜೈಲು ಗ್ಯಾರಂಟಿ ಎಂಬ ಭಾವನೆ ಬಂದಿತ್ತು. ಆಗಾತ ತನ್ನ ಉತ್ತರಾಧಿಕಾರಿಯಾಗಿ ತಂಗಿ ಮಗ (ಜಗದೀಶ ಶರ್ಮನ ಮಗ) ಸಮರ್ಥನ್ ದೀಕ್ಷೆ ಕೊಡಲು ಪ್ಲಾನ್ ಹಾಕಿದ್ದ. ಆಗ ಆತನ ಆಪ್ತರಲ್ಲೇ ಭಿನ್ನಾಭಿಪ್ರಾಯ ಮೂಡಿತ್ತು. ಹಾಗಾಗಿ ಈಗ ತನ್ನ ಮಾತು ಚಾಚೂ ತಪ್ಪದೆ ಕೇಳುವ ಅಸಹಾಯಕ-ಅಮಾಯಕ ಕುಟುಂಬದ ವಟುಗಾಗಿ ತಲಾಶ್ ನಡೆಸಿದ್ದಾನೆ. ಸದ್ಯಕ್ಕಾತನಿಗೆ ಕೇರಳ-ಕರ್ನಾಟಕ ಗಡಿಯ ಬಡಕ್ಕಿಲ್ಲದ ಮಣಿಯೊಬ್ಬನ ಗುರುತಿಸಿದ್ದಾನೆ. ಆತನಿಗೆ ಅವಸರವಸರವಾಗಿ ಉಪನಯನ ಮಾಡಿಸಿದ್ದಾನಂತೆ. ಜೈಲಿಗೆ ಹೋದರೂ ಅಪಾರ ಸುಖ-ಸಂಪತ್ತು ಬಟ್ಟಿಯಾಗಿ ಕೊಡುವ ಮಠದ ಸುಪರ್ದಿ ಬಿಡಬಾರದೆಂಬ ಹಠಕ್ಕೆ ರಾಘು ಬಿದ್ದಿದ್ದಾನೆ. ಜೈಲು ಅನಿವಾರ್ಯವಾದರೆ ಬಡಕ್ಕಿಲ್ಲದ ಹವ್ಯಕರ ವಟು ಪೀಠಾರೋಹಣ ನಡೆಯಲಿದೆ. ಪ್ರಬಲಾ ಕೇಸು ತನಿಖೆ ಜೋರಾದರೆ ರಾಘುನ ಪೀಠೋಚ್ಚಾಟನೆ ಕೂಗಿಗೂ ಬಲಬರಲಿದೆ. ಹೊರಗೆ ತಾನೆಷ್ಟೇ ಸಾಚಾ ಎಂದು ರಾಘು ಶೋ ಮಾಡಿದರೂ ಒಳಗಿನ ಪಾಪಪ್ರಜ್ಞೆ-ಅಪರಾಧಿ ಪ್ರಜ್ಞೆ ಆತನನ್ನು ನೈತಿಕ ಅಧಃಪತನಕ್ಕೆ-ದೈಹಿಕ ಸಮಸ್ಯೆಗೆ ತಳ್ಳುತ್ತಿದೆ.....

■ ಶುದ್ಧೋಧನ

ಇವರಿಗೆ ಗೋಹತ್ಯೆ ಬರೀ ನೆಪ ಅಷ್

ಭಾರತದಲ್ಲಿ ವಾಸಿಸುತ್ತಿರುವ ಸುಮಾರು 4693 ಸಮುದಾಯಗಳು ಮತ್ತು ಇಲ್ಲಿರುವ ಸುಮಾರು 415 ಜೀವಂತ ಭಾಷೆಗಳು ನಮ್ಮ ವೈವಿಧ್ಯತೆಗೆ ಎತ್ತಿಹಿಡಿದ ಕನ್ನಡಿ. ಈ ಅನನ್ಯ ವೈವಿಧ್ಯತೆಯನ್ನು ಉಳಿಸಿ, ಬೆಳೆಸುವ ಉದ್ದೇಶದಿಂದಲೆ ಸಂವಿಧಾನ ಪ್ರತಿಯೊಬ್ಬ ಭಾರತೀಯನಿಗೂ ದೇಶದ ಬಹುಸಂಸ್ಕೃತಿ, ಸೌಹಾರ್ದ, ಸೋದರತೆಯ ಮೌಲ್ಯಗಳನ್ನು ಕಾಪಾಡುವ ಕರ್ತವ್ಯವನ್ನು ವಿಧಿಸಿದೆ. ಆದರೆ ಏಕಸಂಸ್ಕೃತಿಯನ್ನು ಆರಾಧಿಸುವಂತಹ ಹುಸಿ ಧರ್ಮಾಧಾರಿತ ರಾಜಕೀಯ ಸಿದ್ಧಾಂತವೊಂದನ್ನು ಅಪ್ಪಿಕೊಂಡಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘ ಇದನ್ನು ತಿರಸ್ಕರಿಸುತ್ತದೆ. ಇದೇ ದೇಶದ ಪ್ರಜೆಗಳಾದ ಕ್ರೈಸ್ತರು, ಮುಸ್ಲಿಮರು, ಸಿಖ್ಖರು, ಪಾರಸಿಗಳು ಮುಂತಾದವರನ್ನು ಅನ್ಯಮತೀಯರೆಂದು ಕರೆದು ಅವರನ್ನು ಪ್ರಥಮ ದರ್ಜೆಯವರೆನ್ನಲಾದ ದ್ವಿಜರ ಸೇವೆಗಾಗಿರುವ ಎರಡನೆ ದರ್ಜೆಯ ಪ್ರಜೆಗಳಾಗಿ ಪರಿವರ್ತಿಸುವುದೆ ಅದರ ಗುರಿಯಾಗಿದೆ. ಇದಕ್ಕೋಸ್ಕರವೆಂದೆ ಹೆಣೆಯಲಾಗಿರುವ ವಿಶೇಷ ಕಾರ್ಯತಂತ್ರವೊಂದರ ಮುಖಾಂತರ ಮೊದಲು ಆ ಸಮುದಾಯಗಳನ್ನು ಶತ್ರುಗಳು, ದೇಶದ್ರೋಹಿಗಳೆಂದು ಬಿಂಬಿಸಿ ಸಮಾಜದಲ್ಲಿ ಅವರ ಬಗ್ಗೆ ಸಂಶಯ ಮತ್ತು ಕೀಳುಭಾವನೆ ಮೂಡಿಸಿದ ಬಳಿಕ ಅವರನ್ನು ಸಮಾಜದ ಮುಖ್ಯವಾಹಿನಿಯಿಂದ ಬೇರ್ಪಡಿಸಲಾಗುತ್ತದೆ. ಕ್ರೈಸ್ತರು, ಮುಸಲ್ಮಾನರ ಬಗ್ಗೆ ಸಂಶಯ ಮತ್ತು ಕೀಳುಭಾವನೆ ಮೂಡಿಸುವುದಕ್ಕಾಗಿ ಕ್ರೈಸ್ತರು ಅಪಾಯಕಾರಿ ಮತಾಂತರಿಗಳು, ಮುಸಲ್ಮಾನರು ಗೋಭಕ್ಷಕರು, ಮಂದಿರ ಭಂಜಕರು ಎಂಬ ಚಿತ್ರಣವನ್ನು ಸಮಾಜದಲ್ಲಿ ವ್ಯವಸ್ಥಿತವಾಗಿ ಹರಡಲಾಗುತ್ತದೆ. ಜೊತೆಗೆ ಮೀಸಲಾತಿಯಿಂದ ಇತರರಿಗೆ ಅನ್ಯಾಯ ಆಗುತ್ತಿದೆ ಎಂಬ ಕುವಾದವನ್ನು ಹುಟ್ಟುಹಾಕಿ ಅದಕ್ಕೆ ವ್ಯಾಪಕ ಜನಬೆಂಬಲ ಪಡೆಯುವ ಪ್ರಯತ್ನ ನಡೆಯುತ್ತದೆ. ಇವೆಲ್ಲದರ ಅಂತಿಮ ಪರಿಣಾಮವಾಗಿ ಭಾರತೀಯ ಸಮಾಜ ಧ್ರುವೀಕರಿಸಲ್ಪಟ್ಟಾಗ ದ್ವಿಜಶ್ರೇಷ್ಠತೆಯ "ಹಿಂದೂ ರಾಷ್ಟ್ರ" ಸ್ಥಾಪನೆಗೆ ಮಾರ್ಗ ತೆರೆದುಕೊಳ್ಳುತ್ತದೆ. ಸಂವಿಧಾನ ಕಸದಬುಟ್ಟಿ ಸೇರುತ್ತದೆ. ಅದರ ಜಾಗದಲ್ಲಿ ಪುರುಷಪ್ರಧಾನ್ಯತೆಯ ಮನುಧರ್ಮವನ್ನು ಪ್ರತಿಷ್ಠಾಪಿಸಲಾಗುತ್ತದೆ. ಅಲ್ಪಸಂಖ್ಯಾತರು ಎರಡನೆ ದರ್ಜೆಯ ಪ್ರಜೆಗಳಾಗುತ್ತಾರೆ. ಜಾತಿಪದ್ಧತಿ ಮೇಲುಗೈ ಪಡೆದು ಮೀಸಲಾತಿ ಇಲ್ಲವಾದಾಗ ದಲಿತರು, ಹಿಂದುಳಿದವರು, ಆದಿವಾಸಿಗಳು ತಂತಾನೆ ಮೂರನೆ ದರ್ಜೆಗೆ ತಳ್ಳಲ್ಪಡುತ್ತಾರೆ. ಪ್ರಸ್ತುತ ಲೇಖನದಲ್ಲಿ ನಿರ್ದಿಷ್ಟವಾಗಿ ಗೋಹತ್ಯೆ, ಗೋಭಕ್ಷಣೆ ವಿರುದ್ಧದ ಕಾರ್ಯಾಚರಣೆಗಳ ಹಿಂದಿನ ಅಸಲಿಯತ್ತು ಏನೆಂದು ವಿವರಿಸುವ ಪ್ರಯತ್ನ ಮಾಡಲಾಗಿದೆ.


ಗೋಹತ್ಯೆ ನಿಷೇಧದ ಕೂಗು ಬೂಟಾಟಿಕೆಯ ಅರಚಾಟ

ಸಂಘ ಪರಿವಾರದ ಗೋಹತ್ಯೆ ನಿಷೇಧ ಕೂಗು ಇಂದು ನಿನ್ನೆಯದಲ್ಲ, ಅದರಷ್ಟೆ ಹಳೆಯದಾದ ಆ ಕೂಗಿಗೆ ದನಿಗೂಡಿಸಿದ ಹಲವಾರು ಗಣ್ಯರಲ್ಲಿ ಆರ್ಯ ಸಮಾಜದ ದಯಾನಂದ ಸರಸ್ವತಿಯೂ ಒಬ್ಬರು (ಆರ್ಯ ಸಮಾಜದ ಮಧ್ಯಸ್ಥಿಕೆಯಲ್ಲಿ ನಡೆಯುವ ಅಂತರ್ಧರ್ಮೀಯ ವಿವಾಹಗಳ ಸಂದರ್ಭದಲ್ಲಿ ಹಿಂದೂಯೇತರ ವಧು/ವರರನ್ನು ಹಿಂದೂ ಧರ್ಮಕ್ಕೆ ಮರುಮತಾಂತರಗೊಳಿಸಲಾಗುತ್ತದೆ). ಆದರೆ ಸಂಘ ಪರಿವಾರದ ರಾಜಕೀಯ ಸಿದ್ಧಾಂತ "ಹಿಂದೂತ್ವ"ದ ಜನಕನಾದ ವಿ.ಡಿ. ಸಾವರ್ಕರ್ ಖುದ್ದು ಓರ್ವ ನಾಸ್ತಿಕವಾದಿಯಾಗಿದ್ದ ಮಾತ್ರವಲ್ಲ ಗೋಭಕ್ತಿಯನ್ನು ಮೂರ್ಖತನವೆಂದು ಕರೆದಿದ್ದ ಸಾವರ್ಕರ್ ಪ್ರಕಾರ "ನಮ್ಮ ಕೃಷಿ ಪ್ರಧಾನ ದೇಶಕ್ಕೆ ಉಪಯುಕ್ತ ಪ್ರಾಣಿಗಳಾದ ಆಕಳುಗಳನ್ನು ಎಷ್ಟು ಬೇಕೊ ಅಷ್ಟು ಬಳಸಬೇಕು. ಗೋವು ದೇವತೆ ಪುರಾಣಗಳಲ್ಲಿ ಗೋಪೂಜೆ ಧರ್ಮವೆಂದು ಹೇಳಲಾಗಿದೆ ಎನ್ನುವುದು ಬರೀ ಬೊಗಳೆ. ಏಕೆಂದರೆ ಅದೇ ಪುರಾಣ ದೇವರು ವರಾಹಾವತಾರ ತಾಳಿದ್ದ ಎನ್ನುತ್ತದೆ. ಆದುದರಿಂದ ಹಂದಿರಕ್ಷಣೆಯನ್ನೂ ಏಕೆ ಮಾಡಬಾರದು ಎಂದು ಕೇಳಬೇಕಾಗುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಅರ್ವಾಚೀನ ಮತ್ತು ಪ್ರಯೋಗಸಿದ್ಧ ವಿಜ್ಞಾನವೆ ನಮ್ಮ ರಾಷ್ಟ್ರದ ವೇದ ಆಗಬೇಕು. ಗೋಪೂಜೆ ಧರ್ಮ ಎಂದು ಬೊಗಳೆ ಬಿಟ್ಟರೆ ದೇಶದ ಸರ್ವನಾಶ ಖಂಡಿತ. ಗೋಹತ್ಯೆ ನಡೆದರೂ ಅಡ್ಡಿಯಿಲ್ಲ, ದೇಶದ ಬುದ್ಧಿಹತ್ಯೆ ಮಾತ್ರ ಆಗಬಾರದು". ಸಾವರ್ಕರ್‌ನ ಈ ನಿಲುವುಗಳನ್ನು ಮತ್ತು ನಮ್ಮ ವೇದಕಾಲೀನ ಪೂರ್ವಜರೆಲ್ಲ ಗೋಮಾಂಸ ಸೇರಿದಂತೆ ನಾನಾ ಮಾಂಸಗಳ ಭಕ್ಷಕರು ಎಂದು ಮುಂತಾದ ಹಲವು ಅನಾನುಕೂಲ ಸತ್ಯಗಳನ್ನು ಯಾವ ಆರೆಸ್ಸೆಸ್ ಶಾಖೆಗಳಲ್ಲಿಯೂ ಹೇಳಿಕೊಡಲಾಗುವುದಿಲ್ಲ!

ಕೇಂದ್ರದಲ್ಲಿ ತಮ್ಮದೇ ಬಹುಮತದ ಸರ್ಕಾರ ಸ್ಥಾಪನೆಯಾದ ನಂತರ ಸಂಘ ಪರಿವಾರದ ಅಲ್ಪಸಂಖ್ಯಾತ ವಿರೋಧಿ ಚಟುವಟಿಕೆಗಳು ಸಿಕ್ಕಾಪಟ್ಟೆ ಹೆಚ್ಚಾಗಿವೆ. ದ್ವೇಷಪೂರಿತ ಭಾಷಣಗಳು, "ಲವ್ ಜಿಹಾದ್", ದಾಳಿಗಳು, ಗಲಭೆಗಳು, ಮತಾಂತರದ ಆರೋಪಗಳು ಮತ್ತು "ಘರ್ ವಾಪಸಿ"ಗಳೊಂದಿಗೆ ಸ್ವಾಭಾವಿಕವಾಗಿ ಗೋಹತ್ಯೆ ನಿಷೇಧದ ಕೂಗು ಕೂಡ ಉತ್ತುಂಗಕ್ಕೇರಿದೆ. ಗೋವಿನ ನೆಪದಲ್ಲಿ ಮುಸ್ಲಿಮರ ವಿರುದ್ಧ ದ್ವೇಷ ಹರಡುವಿಕೆ, ದೈಹಿಕ ಹಲ್ಲೆಗಳು ಎಗ್ಗಿಲ್ಲದೆ ಮುಂದುವರಿದಿವೆ. ಮಾಂಸ ಮಾರಾಟ ನಿಷಿದ್ಧವಾಗಿರುವ ಹಬ್ಬಗಳ ಪಟ್ಟಿ ಉದ್ದವಾಗುತ್ತಿದೆ. ಬಿಜೆಪಿ ಆಡಳಿತ ಇರುವ ರಾಜ್ಯಗಳಲ್ಲಿ ಗೋಹತ್ಯೆ ನಿಷೇಧ ಕಾಯಿದೆಗಳನ್ನು ಜಾರಿಗೊಳಿಸಲಾಗಿದೆ ಅಥವಾ ಈಗಾಗಲೆ ಅಸ್ತಿತ್ವದಲ್ಲಿರುವ ಕಾಯಿದೆಗಳನ್ನು ಪರಿಷ್ಕರಿಸಿ ಉಲ್ಲಂಘಿಸುವವರಿಗೆ ಕಠಿಣ ಶಿಕ್ಷೆ ವಿಧಿಸುವ ನಿಯಮಗಳನ್ನು ಸೇರಿಸಲಾಗಿದೆ. ಆದರೆ ಗೋವಾ, ಮೇಘಾಲಯಗಳನ್ನು ಹೊರತುಪಡಿಸಿ. ಅವೆರಡು ರಾಜ್ಯಗಳಿಗೆ ವಿನಾಯಿತಿ ಏಕೆಂದರೆ ಅಲ್ಲಿನ ಬಿಜೆಪಿ ಮತಧಾರರ ಪೈಕಿ ಗರಿಷ್ಠ ಸಂಖ್ಯೆಯ ಜನ ಗೋಭಕ್ಷಕರಾಗಿದ್ದಾರೆ! ಇದೊಂದೆ ವಿಷಯ ಸಾಕು, ಹೇಗೆ ಗೋವನ್ನು ಕೇವಲ ರಾಜಕೀಯ ದುರ್ಲಾಭಕ್ಕೋಸ್ಕರ ಭಾವನಾತ್ಮಕ ವಿಷಯವಾಗಿ ಮಾಡಲಾಗುತ್ತಿದೆ ಎಂಬುದನ್ನು ಸಾಬೀತುಪಡಿಸಲು. ಗೋಹತ್ಯೆ ನಿಷೇಧದ ಕೂಗು ಬರೀ ಒಂದು ಬೂಟಾಟಿಕೆಯ ಅರಚಾಟ ಆಗಿದ್ದು ಅದರ ಹಿಂದೆ ಇರುವುದು ಶುದ್ಧ ರಾಜಕೀಯ ಎನ್ನುವುದಕ್ಕೆ ಸಾಕಷ್ಟು ನಿದರ್ಶನಗಳನ್ನು ಕೊಡಬಹುದು.

ಕಾಪಟ್ಯದ ಉದಾಹರಣೆಗಳು

"ಹಿಂದೂ ಹೃದಯ ಸಮ್ರಾಟ" ಬಿರುದಾಂಕಿತ ನರೇಂದ್ರ ಮೋದಿಯಿಂದಲೆ ಆರಂಭಿಸಬಹುದು. 1978ರಲ್ಲಿ



ಗುಜರಾತ್ ರಾಜ್ಯದಲ್ಲಿ ಆರೆಸ್ಸೆಸ್‌ನ ಪ್ರಧಾನ ಪ್ರಚಾರಕ್ ಆಗಿದ್ದ ಮೋದಿ ಮೂರು ವರ್ಷಗಳ ನಂತರ ಇಡೀ ರಾಜ್ಯಕ್ಕೆ ಸಂಪರ್ಕಾಧಿಕಾರಿ ಆದ. ಸಂಪರ್ಕಾಧಿಕಾರಿ ಅಂದರೆ ಆರೆಸ್ಸೆಸ್ ಮತ್ತು ಅದರ ಎಲ್ಲಾ ಶಾಖೋಪಶಾಖೆಗಳ ನಡುವಿನ ಸಂಪರ್ಕ ಸೇತುವೆ ಇದ್ದಂತೆ. ಮುಂದೆ 1987ರಲ್ಲಿ ಗುಜರಾತ್ ರಾಜ್ಯದ ಸಂಘಟನಾ ಕಾರ್ಯದರ್ಶಿ ಆಗಿ 1995ರ ತನಕ ಅದೇ ಹುದ್ದೆಯಲ್ಲಿ ಮುಂದುವರಿದ. ಆರೆಸ್ಸೆಸ್‌ನ ರಾಜಕೀಯ ಮುಖವಾದ ಭಾರತೀಯ ಜನತಾ ಪಕ್ಷದೊಂದಿಗೆ ನೇರಸಂಪರ್ಕದಲ್ಲಿದ್ದುಕೊಂಡು ಸಾರ್ವಜನಿಕರಿಗೆ ತಿಳಿಯದಂತೆ ತೆರೆಮರೆಯಿಂದ ಪಕ್ಷದ ಚಟುವಟಿಕೆಗಳನ್ನು ನಿಯಂತ್ರಿಸುವುದೆ ಸಂಘಟನಾ ಕಾರ್ಯದರ್ಶಿಯ ಕೆಲಸ.

1985, 1990 ಮತ್ತು 1992ರಲ್ಲಿ ಗುಜರಾತ್‌ನಲ್ಲಿ ಮೂರು ಅತಿದೊಡ್ಡ ಕೋಮು ಗಲಭೆಗಳು ಸಂಭವಿಸಿ 900ಕ್ಕೂ ಅಧಿಕ ಜೀವಗಳನ್ನು ಬಲಿ ತೆಗೆದುಕೊಂಡಿದ್ದವು ಎಂಬುದು ಗಮನಾರ್ಹ. 1985ರಲ್ಲಿ ಸಂಘ ಪರಿವಾರ ಆರಂಭದಲ್ಲಿ ಮಂಡಲ್ ವರದಿಯನ್ನು ಪ್ರತಿಭಟಿಸಿ ರಾಜ್ಯಾದ್ಯಂತ ಬಂದ್‌ಗೆ ಕರೆಕೊಟ್ಟಿತ್ತು, ಮೀಸಲಾತಿ ವಿರುದ್ಧದ ಈ ಚಳವಳಿಯನ್ನು ನಂತರ ಒಂದು ವ್ಯವಸ್ಥಿತ ಯೋಜನೆಯ ಮೂಲಕ ದೊಡ್ಡ ಕೋಮು ಗಲಭೆಯಾಗಿ ಪರಿವರ್ತಿಸಲಾಯಿತು. ಇದಕ್ಕೆ ಕಾರಣವಾಗಿದ್ದುದು ಗೋಹತ್ಯೆಯ ಒಂದು ವದಂತಿ ಎಂಬ ವಿಚಾರ ಬಹುಶಃ ಹೆಚ್ಚಿನವರಿಗೆ ತಿಳಿದಿರಲಿಕ್ಕಿಲ್ಲ. ಒಂದು ದಿನ ಅಹಮದಾಬಾದಿನ ಸರಯೂದಾಸ್‌ಜಿ ಮಂದಿರಕ್ಕೆ ಸೇರಿದ "ಜಸೋಲಾ" ಹೆಸರಿನ ದನದ ರುಂಡ ಮತ್ತು "ಹಿಂದೂಗಳು ಕಾಫರರು, ಹಂದಿಗಳು" ಎಂಬ ಬರಹ ಅದೇ ಮಂದಿರದ ಪ್ರವೇಶದ್ವಾರದ ಬಳಿ ಪತ್ತೆಯಾದವು. ಬಳಿಕ "ಮುಸ್ಲಿಮರು ಒಂದು ಗೋವನ್ನು ಹತ್ಯೆ ಮಾಡಿದ್ದಾರೆ. ಈಗ ಎಚ್ಚೆತ್ತುಕೊಂಡು ಮುಸ್ಲಿಮರನ್ನು ಹೊಡೆದು ಸಾಯಿಸುವ ಮೂಲಕ ಅವರ ಈ ಕ್ರೂರ ಕೃತ್ಯದ ವಿರುದ್ಧ ಸೇಡು ತೀರಿಸಿಕೊಳ್ಳುವ ಸಮಯ ಬಂದಿದೆ. ಪೂಜನೀಯ ಗೋಮಾತೆಯ ಹತ್ಯೆಯಂತಹ ಕ್ರೂರ ಕೃತ್ಯಗಳನ್ನು ಎಸಗುವ ಮುಸ್ಲಿಂರೂಪದ ದೆವ್ವಗಳನ್ನು ಕೊಲ್ಲುವುದೆ ನಮ್ಮ ನೈಜ ಧರ್ಮ ಹಾಗೂ ಪವಿತ್ರ ಕರ್ತವ್ಯ" ಎಂದು ಮುಂತಾಗಿ ಬರೆದಿದ್ದ ಕರಪತ್ರಗಳನ್ನು ಹಂಚಲಾಯಿತು. ಸಂಘ ಪರಿವಾರದ ಈ ಕುತಂತ್ರ ದಲಿತರನ್ನು ಮುಸ್ಲಿಮರ ವಿರುದ್ಧ ಎತ್ತಿಕಟ್ಟುವಲ್ಲಿ ಯಶಸ್ವಿಯಾಯಿತು. ಹೀಗೆ 80 ಮತ್ತು 90ರ ದಶಕಗಳಲ್ಲಿ ರಾಜ್ಯದಾದ್ಯಂತ ಆವರಿಸಿದ ಕೋಮು ಕಾಳ್ಗಿಚ್ಚು ಬಿಜೆಪಿಗೆ ಭಾರಿ ರಾಜಕೀಯ ಲಾಭವನ್ನು ತಂದುಕೊಟ್ಟಿತು. 1985ರಲ್ಲಿ ಕೇವಲ 11 ಅಸೆಂಬ್ಲಿ ಸ್ಥಾನಗಳನ್ನು ಹೊಂದಿದ್ದ ಪಕ್ಷ 1995ರ ವೇಳೆಗೆ 121 ಸ್ಥಾನಗಳನ್ನು ಪಡೆಯುವಲ್ಲಿ ಯಶಸ್ವಿಯಾಯಿತು. ಮುಂದೆ 2001ರಲ್ಲಿ ರಾಜ್ಯದ ಮುಖ್ಯಮಂತ್ರಿ ಆದ ನಂತರವೂ ಮೋದಿಯ ಪ್ರಚೋದನಕಾರಿ ಹೇಳಿಕೆಗಳು, ಮತಾಂತರದ ನೆಪದಲ್ಲಿ ಕ್ರೈಸ್ತರ ವಿರುದ್ಧ ಮತ್ತು ಗೋಹತ್ಯೆ ನೆಪದಲ್ಲಿ ಮುಸ್ಲಿಮರ ವಿರುದ್ಧ ಕಾರ್ಯಾಚರಣೆಗಳು ಮುಂದುವರೆದವು. ಇದಕ್ಕೆ ರಾಜ್ಯದ ಬಹುತೇಕ ಸ್ಥಳೀಯ ಮಾಧ್ಯಮಗಳ ಸಹಕಾರವೂ ದೊರೆತಿತ್ತು.

ಪ್ರಧಾನಿಯಾದ ನಂತರ ನರೇಂದ್ರ ಮೋದಿಯ ವರಸೆ ಬದಲಾಗಿದೆ. ನೇರಮಾತುಗಳ ಜಾಗಕ್ಕೆ ಸುತ್ತುಬಳಸಿನ ಮಾತುಗಳು ಬಂದಿವೆ. ಆದರೂ ತನ್ನ ಬಹುತೇಕ ಚುನಾವಣಾಪೂರ್ವದ ಭಾಷಣಗಳಲ್ಲಿ ಆತ ಗೋಹತ್ಯೆಯ ವಿಚಾರವನ್ನು ಪ್ರಸ್ತಾಪಿಸದೆ ಬಿಟ್ಟಿಲ್ಲ. ಉದಾಹರಣೆಗೆ 2014ರಲ್ಲಿ ಮಧ್ಯ ಪ್ರದೇಶದ ಖಾಂಡ್ವಾ ಎಂಬಲ್ಲಿ ಚುನಾವಣಾ ಸಭೆಯೊಂದನ್ನು ಉದ್ದೇಶಿಸಿ ಆಡಿದ ಮಾತುಗಳು ಹೀಗಿವೆ:

"ಲಾಲ್ ಬಹದೂರ್ ಶಾಸ್ತ್ರಿ ಹಸಿರು ಕ್ರಾಂತಿಯ ಬಗ್ಗೆ ಮಾತಾಡುತ್ತಿದ್ದರು. ಆದರೆ ಇವರು ಮಾಂಸ ರಫ್ತು ಹೆಚ್ಚಿಸುವ ಮೂಲಕ ಗುಲಾಬಿ ಕ್ರಾಂತಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ವಧಾಶಾಲೆ ನಿರ್ಮಿಸಲು ಸಬ್ಸಿಡಿ ಕೊಡುತ್ತಿದ್ದಾರೆ...... ಗೋವುಗಳನ್ನೂ ಇತರ ಪ್ರಾಣಿಗಳನ್ನೂ ವಧೆ ಮಾಡಲಾಗುತ್ತಿದೆ."

ಇದೇ ಮೋದಿ ಅಂದು ಎಬಿಪಿ ನ್ಯೂಸ್ ವಾಹಿನಿ ಪ್ರಸಾರ ಮಾಡಿದ್ದ ವಿಶೇಷ ಕಾರ್ಯಕ್ರಮವೊಂದರ ವೇಳೆ "ನನ್ನ ಹಲವಾರು ಜೈನ ಮಿತ್ರರೂ ಇದೇ ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದಾರೆ" ಎಂದು ಹೇಳಿರುವುದಾಗಿ ದಾಖಲಾಗಿದೆ!

ಮೋದಿಯ ಖಾಂಡ್ವಾ ಸಭೆ ನಡೆದ ಕೆಲವೇ ದಿನಗಳೊಳಗಾಗಿ ಮಧ್ಯ ಪ್ರದೇಶ ಬಿಜೆಪಿಯ ಗೋ ವಿಭಾಗದ ಮಾಜಿ ಜಿಲ್ಲಾ ಸಂಚಾಲಕ ವಿಪಿನ್ ಬಿಲೌಹ ಎಂಬಾತ ಬಡಗಾಂವ್‌ನಿಂದ 150 ದನಕರುಗಳನ್ನು ಗನಿಯಾರಿಯಲ್ಲಿರುವ ವಧಾಗೃಹಕ್ಕೆ ಸಾಗಿಸುತ್ತಿದ್ದಾಗ ಪೊಲೀಸರ ಕೈಗೆ ಸಿಕ್ಕಿಬಿದ್ದು ಕೇಸು ಜಡಿಸಿಕೊಂಡಿದ್ದಾನೆ!


ಗುಜರಾತಿನ ಕೆಲವು ಬಿಜೆಪಿ ಮುಖಂಡರು ಗೋಮಾಂಸದ ದಂಧೆಯಲ್ಲಿ ತೊಡಗಿಸಿಕೊಂಡಿದ್ದು ಅದಕ್ಕಾಗಿ ಅಧಿಕೃತ ಕಾರುಗಳನ್ನು ಬಳಸುತ್ತಿರುವ ವಿಚಾರ ಬೆಳಕಿಗೆ ಬಂದಿದೆ. ಬಿಜೆಪಿ ಲಾಂಛನ ಇರುವ ವಾಹನ ಎಂದಾಕ್ಷಣ ಪೊಲೀಸರು ತಪಾಸಣೆ ಮಾಡುವುದಿಲ್ಲವೆಂದು ಅವರಿಗೆ ಗೊತ್ತಿದೆ. ಆದರೂ ಪೊಲೀಸರು ಒಂದು ವಾಹನವನ್ನು ತಡೆದು ಸಾಗಾಟಗಾರರನ್ನು ಬಂಧಿಸಿದ ಘಟನೆ ನಡೆದಿದೆ!

<http://www.truthofgujarat.com/gujarat-bjp-exposed-bjp-car-caught-transporting-cow-meat/gujarat-bjp-car-caught-transporting-cow-meat-original/>

ಸಂಘ ಪರಿವಾರಿಗರೂ ಜಾನುವಾರು ಸಾಗಾಟದಲ್ಲಿ ತೊಡಗಿಸಿಕೊಂಡಿರುವುದಕ್ಕೆ ಉದಾಹರಣೆಯಾಗಿ ಇದೇ ವರ್ಷದ ಜುಲೈ 17ರಂದು ದ.ಕ.ಜಿಲ್ಲೆಯ ಕಡಬದಲ್ಲಿ ನಡೆದ ಘಟನೆಯೊಂದನ್ನು ಹೆಸರಿಸಬಹುದು. ಸವಣೂರು ಮಂತೂರಿನಲ್ಲಿ ಕರು ಒಂದನ್ನು ಆಟೋರಿಕ್ಷಾದಲ್ಲಿ ವಧಾಗೃಹಕ್ಕೆ ಸಾಗಿಸುತ್ತಿದ್ದ ವೇಳೆ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದ ನಾಲ್ವರು ವ್ಯಕ್ತಿಗಳು ಬಜರಂಗ ದಳ ಕಾರ್ಯಕರ್ತರಾಗಿದ್ದರು!

ಸಂಘ ಪರಿವಾರದ ಪೋಷಣೆಯಲ್ಲಿರುವ ಗೋಶಾಲೆಗಳಿಂದ ನಿಯಮಿತವಾಗಿ ಹಸುಗಳನ್ನು ವಧಾಗೃಹಗಳಿಗೆ ಮಾರಾಟ ಮಾಡುತ್ತಿರುವುದು ಒಂದು ತೆರೆದ ರಹಸ್ಯವಾಗಿದೆ!

ಭಾರತದಲ್ಲಿ ಉತ್ಪಾದಿಸಲಾಗುವ ಒಟ್ಟು ಮಾಂಸದ 60 ಪ್ರತಿಶತದಷ್ಟು ವಿದೇಶಗಳಿಗೆ ರಫ್ತಾಗುತ್ತದೆ. ಈ ಉದ್ದಿಮೆಯ ಮೌಲ್ಯ ಸುಮಾರು 4.5 ಬಿಲಿಯ ಅಮೆರಿಕನ್ ಡಾಲರುಗಳಷ್ಟಿದೆ! ಇಖ್ಲಾಕ್ ಕಗ್ಗೊಲೆ ನಡೆದ ಉತ್ತರ ಪ್ರದೇಶ ಒಂದರಲ್ಲೆ 317 ವಧಾಶಾಲೆಗಳಿವೆಯಲ್ಲದೆ ಮಾಂಸ ಸಂಸ್ಕರಣೆಯಲ್ಲಿ ನಿರತವಾಗಿರುವ 24 ಉದ್ದಿಮೆಗಳಿವೆ. ದೇಶದಿಂದ ರಫ್ತಾಗುವ ಶೇಕಡಾ 67ರಷ್ಟು ಮಾಂಸ ಅಲ್ಲಿಂದಲೆ ಬರುತ್ತದೆ. ಇರಲಿ. ಈಗ ಮಾಂಸದ ದಂಧೆಯಿಂದ ಅತಿ ಹೆಚ್ಚು ಲಾಭ ಗಳಿಸುವವರು ಮುಸ್ಲಿಮರೆಂಬ ಭಾವನೆ



ಪ್ರಚಲಿತವಿದೆ. ಆದರೆ ನಿಜ ಹೇಳಬೇಕೆಂದರೆ
ಬಹುಪಾಲು ಸರಕಾರ ಮತ್ತು ಮುಸ್ಲಿಮೇತರರ
ಹೋಗುತ್ತದೆ! ಮುಸ್ಲಿಂ ಮಾಲಕತ್ವದಲ್ಲಿರುವ ಒಂದೇ
ದೊಡ್ಡ ರಫ್ತು ಕಂಪೆನಿ ಎಂದರೆ ಅಲ್ಲಾನಾ ಸನ್ಸ್. ಪ
ಚಿಕ್ಕಪುಟ್ಟ ಸಂಸ್ಥೆಗಳು. ಮುಸ್ಲಿಮೇತರರು ಕೇವಲ
ರಫ್ತಿನಲ್ಲಷ್ಟೆ ಅಲ್ಲ, ಆಧುನಿಕ ವಧಾಗೃಹ, ಉಪ ಉ
ಉದ್ದಿಮೆ ಮುಂತಾದ ಕ್ಷೇತ್ರಗಳಲ್ಲಿಯೂ ಮುಂಚೂ
ದ್ದಾರೆ. ಆಕಳ ಮಾಂಸ ಮತ್ತು ಅದರ ಉಪ ಉ
ವ್ಯಾಪಾರದಲ್ಲಿ ತೊಡಗಿರುವ ಕೆಲವು ಪ್ರಮುಖ ಸ
ಮತ್ತು ಅವುಗಳ ಮುಖ್ಯಸ್ಥರು ಯಾರೆಂದು ನೋ
ಅಸಲಿಯತ್ತಿನ ಅರಿವಾಗುತ್ತದೆ: ಅರೇಬಿ
ಎಕ್ಸ್‌ಪೋರ್ಟ್ (ದೀಪಕ್ ತಿಜೋರಿ), ಅಲ್
(ಅತುಲ್ ಸಬರ್‌ವಾಲ್), ಅಲ್ ನೂರ್ ಎಕ್ಸ್‌ಪೆ
(ಅಜಯ ಸೂದ್), ಸುಜಾತಾ ಬೋನ್ಸ್ (ಎಂ.ಕೆ.ದ
ಮಹೇಶ ಜಗದಾಲೆ ಅಂಡ್ ಕೊ, ದೋಡೆ ಇಂ
ಫೈನ್ ಎಕ್ಸ್‌ಪೋರ್ಟ್, ಎಸ್.ಕೆ. ಲೆದರ್,
ಜುನೇಜಾ ಅಂಡ್ ಸನ್ಸ್, ಭಾರತ್ ಲೆದರ್, ವುಡ್
ರೇಮಂಡ್ಸ್, ದತ್ತಾ ಸೋಪ್, ಬಿ.ಎಸ್. ಇಂಟರ್‌ನ
ಸಿಕ್ಸ್ ಸೆನ್ಸ್, ನ್ಯಾಚುರಲ್ ಕ್ರಾಫ್ಟ್, ಬೌಂಟಿ
ಎಕ್ಸ್‌ಪೋರ್ಟ್, ಕೋಚರ್ ಬ್ರದರ್ಸ್, ರವಿ ಎಕ್ಸ್‌ಪೆ
ಕಾಲಿಯಾ ಇಂಟರ್‌ನ್ಯಾಷನಲ್, ಹಿಂದು
ಯುನಿಲಿವರ್.........!!

"ಆರೆಸ್ಸೆಸ್ ಪ್ರಚಾರಕರ ಪೈಕಿ ಹೆಚ್ಚಿನವರು ಮಾ
ಸೇವಿಸುತ್ತಾರೆ. ಮೋಹನ ಭಾಗವತ್ ಸರಸಂಘಚಾಲ
ತನಕವೂ ಮಾಂಸಾಹಾರ ಸೇವಿಸುತ್ತಿದ್ದರು. 2
ಸರಸಂಘಚಾಲಕನಾದ ಬಳಿಕ ಮಾಂಸಾಹಾರ ತ್ಯ
ದೇವರಸ್ ಕೂಡಾ ಸರಸಂಘಚಾಲಕ ಆಗುವ
ಕುರಿ, ಕೋಳಿಗಳ ಮಾಂಸ ತಿನ್ನುತ್ತಿದ್ದರು" ಎಂದು
ಕುರಿತಂತೆ 42 ಕೃತಿಗಳನ್ನು ರಚಿಸಿರುವ ಸ
ದಿಲೀಪ್ ದೇವಧರ್ ಬರೆದಿದ್ದಾರೆ. ಅಂದ ಹಾಗೆ
ಈ ಲೇಖನ ಪ್ರಕಟವಾಗಿರುವುದು ಆರೆಸ್ಸೆಸ್ ಮು
ಯಾದ ಆರ್ಗನೈಸರ್ ನಲ್ಲಿ!!

ಮೋದಿ ಸರ್ಕಾರ ಅಧಿಕಾರಕ್ಕೆ ಬಂದನಂತ
ರಫ್ತಿನ ಪ್ರಮಾಣ ಮನಮೋಹನ ಸಿಂಗ್ ಸರ್ಕಾರದ
ಇದ್ದುದಕ್ಕಿಂತ ಶೇಕಡಾ 15ರಷ್ಟು ಹೆಚ್ಚಾಗಿದೆ!!

ವಾಜಪೇಯಿ ಸರ್ಕಾರದ ಕಾಲದಲ್ಲೂ ಬೀ
ಅನಿರ್ಬಂಧಿತವಾಗಿ ನಡೆಯುತ್ತಿತ್ತು. ವಾ
ಗೋಮಾಂಸ ಪ್ರಿಯರಾಗಿದ್ದರೆನ್ನುವುದು ಇಡೀ
ಗೊತ್ತಿರುವ ಸತ್ಯ. ಒಮ್ಮೆ ಅಮೆರಿಕ ಭೇಟಿಯ
ಬೀಫ್ ತಿನ್ನುತ್ತಿದ್ದಾಗ ಅದನ್ನು ಪ್ರಶ್ನಿಸಿ
ಸುಬ್ರಮಣಿಯನ್ ಸ್ವಾಮಿಗೆ ಅದು ಸ್ವದೇಶೀ ಗೋ
ವಿದೇಶೀ ಗೋವಿನದ್ದೆಂದು ಉತ್ತರಿಸಿದ್ದರು!!

2015ರ ಸೆಪ್ಟಂಬರ್ 28ರಂದು ಉತ್ತರ
ದಾದ್ರಿಯಲ್ಲಿ ಸುಮಾರು 200 ಸಂಘ ಪರಿ
ಗುಂಪೊಂದು ಫ್ರಿಜ್‌ನಲ್ಲಿ ದನದ ಮಾಂಸವಿ
ನೆಪವೊಡ್ಡಿ ಮೊಹಮ್ಮದ್ ಇಖ್ಲಾಕ್ ಸೈಫಿ ಎ
ಹರೆಯದ ವೃದ್ಧನ ಮನೆಗೆ ನುಗ್ಗಿ ಆತನನ್ನು
ಹೊಡೆದು ಕೊಂದುಹಾಕಿತು. ಹತ್ಯೆಯ ಬಳಿಕ
ದೌಡಾಯಿಸಿದ ಶಾಸಕ ಸಂಗೀತ ಸೋಮ್
ಬಿಜೆಪಿ ಮುಖಂಡರು ಎಂದಿನಂತೆ ಸಾರ್ವಜನಿಕ
ಮುಸ್ಲಿಮರು ಮತ್ತು ಗೋಹತ್ಯೆ ವಿರುದ್ಧ ಬೆಂಕಿಯ
ಉಗುಳಿದರು. ಇದೀಗ ತಿಳಿದುಬಂದಿರುವ
ಸಂಗತಿ ಏನೆಂದರೆ ಆಕಳ ಮಾಂಸ ತಿನ್ನುವ
ಎತ್ತಿಕೊಂಡು ಹಿಂದೂ ಮುಸ್ಲಿಮರ ನಡುವೆ
ಕಟ್ಟಲು ಹೊರಟಿರುವ ಈ ಸಂಗೀತ ಸೋಮ
ಅಲ್ ದುವಾ ಎಂಬ ಹಲಾಲ್ ಮಾಂಸ ರಫ್ತು
ಸಂಸ್ಥಾಪಕರಲ್ಲೊಬ್ಬ! ಯೋಗೇಶ ರಾವತ
ಮೊಯಿನುದ್ದೀನ್ ಕುರೇಶಿ ಅಲ್ ದುವಾ ಸಂಸ್ಥೆಯ
ಸಂಸ್ಥಾಪಕರು. ಸೋಮ, ಕುರೇಶಿ ಇಬ್ಬರೂ ಅ
ಆಗ್ರೊ ಫುಡ್ಸ್ ಎಂಬ ಇನ್ನೊಂದು ಕಂಪೆನಿಯಲ್ಲಿ

ಕರೂ ಆಗಿದ್ದಾರೆ! ಇದರೊಂದಿಗೆ ಗೋಹತ್ಯೆ ವಿಷಯದಲ್ಲಿ ಸಂಘ ಾರದ ಆಷಾಢಭೂತಿತನ ಮತ್ತೊಮ್ಮೆ ಸಂಪೂರ್ಣವಾಗಿ ಯಲಾಗಿದೆ!!

ಗೋರಾಜಕೀಯ ಒಪ್ಪಿಕೊಂಡ ಗೋಲ್ವಾಲ್ಕರ್

1960ರ ದಶಕದಲ್ಲಿ ಗೋಹತ್ಯೆಯ ವಿಷಯವನ್ನು ಎತ್ತಿಕೊಂಡು ುದ್ದಗಲಕ್ಕೂ ಚಳವಳಿ ನಡೆಸಿದ ಆರೆಸ್ಸೆಸ್ ಸರಸಂಘಚಾಲಕ ಎಂ.ಎಸ್. ್ವಾಲ್ಕರ್, ಅಂದು ಕೆಲವೊಂದು ರಾಜ್ಯಗಳಲ್ಲಿ ಗೋಹತ್ಯಾ ನಿಷೇಧ ನನ್ನು ಜಾರಿಗೊಳಿಸುವಲ್ಲಿ ಸಫಲರಾಗಿದ್ದರು. ಆ ಸಂದರ್ಭದಲ್ಲಿ ಕೇಂದ್ರ ಒಂದು ತ್ರಿಸದಸ್ಯ ಸಮಿತಿಯನ್ನು ನೇಮಿಸಿ ಈ ವಿಷಯದ ಬಗ್ಗೆ ಕಷ ಅಧ್ಯಯನ ನಡೆಸುವಂತೆ ಆದೇಶಿಸಿತ್ತು. ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿ ಎ.ಕೆ.ಸರ್ಕಾರ್ ಅಧ್ಯಕ್ಷತೆಯ ಆ ಸಮಿತಿಯ ಾಗಿದ್ದವರು ಗೋಲ್ವಾಲ್ಕರ್, ಪುರಿಯ ಶಂಕರಾಚಾರ್ಯ ಮತ್ತು ಡಾ. ್ ಕುರಿಯನ್ (ಅಮುಲ್). ಒಮ್ಮೆ ಹೈದರಾಬಾದಿನ ಕೋಶೀಯ ಅಣ್ವಿಕ ಜೀವಶಾಸ್ತ್ರ ಕೇಂದ್ರದ (Centre for Cellular and cular Biology) ಸ್ಥಾಪಕ ನಿರ್ದೇಶಕರಾದ ಪುಷ್ಪ ಎಂ. ಭಾರ್ಗವರನ್ನು ಯ ಮುಂದೆ ಕರೆಸಲಾಯಿತು. ಭಾರ್ಗವರನ್ನು ಭಾರತದಲ್ಲಿ ಆಧುನಿಕ ಸ್ತ್ರದ ಬೆಳವಣಿಗೆಗೆ ನಾಂದಿ ಹಾಡಿದವರೆಂದು ಗುರುತಿಸಲಾಗಿದೆ. ಜ್ಞಾನ ಆಯೋಗದ ಮಾಜಿ ಅಧ್ಯಕ್ಷರೂ ಆಗಿದ್ದ ಭಾರ್ಗವರಿಗೆ ಲ್ಕರ್ ಕೆಲವು ಪ್ರಶ್ನೆಗಳನ್ನು ಹಾಕಿದರು.

ಗೋಲ್ವಾಲ್ಕರ್: ಶರೀರ ಹಾಲು ಮತ್ತು ಮಾಂಸಗಳನ್ನು ಹೇಗೆ ಸುತ್ತದೆ?

ಭಾರ್ಗವ: ಅವೆರಡೂ ಮೂಲತಃ ಒಂದೇ ರೀತಿಯಾದ ಪ್ರಕ್ರಿಯೆಗಳ ಕ ತಯಾರಿಸಲ್ಪಡುತ್ತವೆ.

ಗೋಲ್ವಾಲ್ಕರ್: ಹಾಗಾದರೆ ನೀವೇಕೆ ಮಾಂಸ ಮಾತ್ರ ತಿನ್ನುತ್ತೀರಿ? ಕುಡಿಯುವುದಿಲ್ಲ?

ಭಾರ್ಗವ: ನಿಮ್ಮದೇ ತರ್ಕ ಬಳಸಿ ನಾನು ನಿಮಗೊಂದು ಪ್ರಶ್ನೆ ಕೇಳುತ್ತೇನೆ. ಹಾಲು ಕುಡಿಯುತ್ತೀರಿ? ಏಕೆ ಮಾಂಸ ಸೇವಿಸುವುದಿಲ್ಲ?

ನಿಂದ ಕುದ್ದುಹೋದ ಗೋಲ್ವಲ್ಕರ್‌ರನ್ನು ಸಮಾಧಾನಪಡಿಸುವಷ್ಟರಲ್ಲಿ ದು ಅಧ್ಯಕ್ಷರು ಮತ್ತು ಶಂಕರಾಚಾರ್ಯರಿಗೆ ಸಾಕುಬೇಕಾಯಿತು! ುಕ್ತಾಯವಾದ ನಂತರ ಕುರಿಯನ್ ಜೊತೆ ಲೋಕಾಭಿರಾಮವಾಗಿ ಡುತ್ತಿದ್ದ ಸಂದರ್ಭದಲ್ಲಿ ಗೋಲ್ವಾಲ್ಕರ್, ಗೋಹತ್ಯೆ ನಿಷೇಧದ ಬೇಡಿಕೆಯು ಇರುವುದು ಬರೀ ರಾಜಕೀಯ ಎಂದು ಒಪ್ಪಿಕೊಂಡರು! ಆದರೆ ಈ ಸಂಘ ಪರಿವಾರದ ಹಿಂಬಾಲಕ ಗಣಗಳಿಂದ ಮುಚ್ಚಿಡಲಾಗಿದೆ!!


ಹಾರಿಕೆ ಮತ್ತು ಜಾರಿಕೆಯ ಮಾತುಗಳು

ಷ್ಪಿನ್ ಶೇಕ್‌ನಿಂದ ಇಕ್ಲಾಖ್ ಮೊಹಮ್ಮದ್‌ವರೆಗಿನ ಹಲ್ಲೆ, ಕಗ್ಗೊಲೆಗಳು ಸರ್ಕಾರದ ಆಡಳಿತದಲ್ಲಿ ಧಾರ್ಮಿಕ ಅಸಹಿಷ್ಣುತೆ, ಭಿನ್ನಮತ ದಮನ, ಸ್ವಾತಂತ್ರ್ಯದ ಹತ್ತಿಕ್ಕುವಿಕೆಗಳು ಪರಾಕಾಷ್ಠೆ ತಲುಪಿರುವುದರ ಳಾಗಿವೆ. ಈ ವಿದ್ಯಮಾನಗಳು ಇಡೀ ದೇಶವನ್ನು ಬೆಚ್ಚಿಬೀಳಿಸಿರುವುದರಲ್ಲಿ ವಿಲ್ಲ. ಪ್ರಜ್ಞಾವಂತ ಜನರು ತಮ್ಮ ಆಘಾತ, ಆಕ್ರೋಶಗಳನ್ನು ವಾಗಿ ವ್ಯಕ್ತಪಡಿಸುತ್ತಿದ್ದಾರೆ. ಸಾಹಿತಿಗಳು ಒಬ್ಬೊಬ್ಬರಾಗಿ ಪ್ರಶಸ್ತಿಗಳನ್ನು ುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಗುಲಾಂ ಅಲಿ ಸಂಗೀತ ಕಾರ್ಯಕ್ರಮದ ಮತ್ತು ಸುಧೀಂದ್ರ ಕುಲಕರ್ಣಿ ಮೋರೆಗೆ ಮಸಿ ಬಳಿದ ಘಟನೆಗಳು ಈಗ ನ್ಯೂಯಾರ್ಕ್ ಟೈಮ್ಸ್‌ನಂತಹ ಅಂತಾರಾಷ್ಟ್ರೀಯ ಮಾಧ್ಯಮಗಳು ಭಾರತದ ಪರಿಸ್ಥಿತಿಯನ್ನು ಟೀಕಿಸಿ ಸಂಪಾದಕೀಯ ಮತ್ತು ಲೇಖನಗಳನ್ನು ವಂತಾಗಿದೆ. ಪರಿಣಾಮವಾಗಿ ಭಾರತ ಸರ್ಕಾರ ಭಾರಿ ಮುಜುಗರ ಸುವಂತಾಯಿತು. ಭಾರತದಲ್ಲಿ ಹೂಡಿಕೆ ಮಾಡಲು ಬಯಸಿದ್ದ ಕಂಪೆನಿಗಳು ಮತ್ತೊಮ್ಮೆ ಯೋಚಿಸುವಂತಾಯಿತು. ಈ ಒತ್ತಡದ ನಿರ್ವಾಹವಿಲ್ಲದೆ ಮೋದಿಯ ಬಾಯಿಂದ ದಾದ್ರಿ, ಗುಲಾಂ ಅಲಿ ದುರದೃಷ್ಟಕರ; ಇದರಲ್ಲಿ ಕೇಂದ್ರ ಸರಕಾರದ ಪಾತ್ರ ಏನಿದೆ; ುಗ್ಗೆ ಬೊಬ್ಬೆ ಹಾಕುವವರು ಕಪಟ ಜಾತ್ಯತೀತರು ಎಂಬ ತಿಪ್ಪೆ ಹೇಳಿಕೆಯೊಂದು ಹೊರಬಿದ್ದಿದೆ. ಮೋದಿ ಬಂಟ ಜೇಟ್ಲಿಯ ಳಕು ಪ್ರತಿಕ್ರಿಯೆಗಳಂತೂ ಆತನ ಸಂಸ್ಕಾರವನ್ನು ವಿಶ್ವಕ್ಕೆ ಸಾರಿವೆ. ಳು ತುಟಿಬಿಚ್ಚಿರುವುದರ ಹಿಂದೆ ಮೋದಿಯ ಪ್ರಚಾರ ಸಂಸ್ಥೆ ಆಪ್ಕೋ ್ಯಾಷನಲ್‌ನ ಸಕ್ರಿಯ ಪಾತ್ರ ಇರುವಂತಿದೆ.

ೇಂದ್ರ ಮೋದಿ ಭಾರತದ ಪ್ರಧಾನಿ ಆದಂದಿನಿಂದ ಅಲ್ಪಸಂಖ್ಯಾತರ ಸಂಘ ಪರಿವಾರಿಗರ ದ್ವೇಷದ ಮತ್ತು ಉದ್ರೇಕಕಾರಿ ಹೇಳಿಕೆಗಳಿಗೆ ಬಂದಿದೆ. ಇದಕ್ಕೆಲ್ಲ ಆತನ ಮೌನಸಮ್ಮತಿ ಇರುವುದರಿಂದಲೆ ಗೆ ಆತ ಯಾರೊಬ್ಬನನ್ನೂ ನೇರವಾಗಿ ಖಂಡಿಸಿಲ್ಲ. ದಾದ್ರಿ ಘಟನೆಯ ಮೌನವ್ರತ ಆಚರಿಸಿದ ಪ್ರಧಾನಿ ಮೋದಿಯ ಬಾಯಿಂದ ಪೇಲವ ಗಳು ಹೊರಬೀಳುವುದಕ್ಕೂ ರಾಷ್ಟ್ರಪತಿಯವರಿಂದ ಮತ್ತು ರ್ಯಾಯ ವಲಯಗಳಿಂದ ಪ್ರತಿಕ್ರಿಯೆಗಳ ಚುಚ್ಚುಮದ್ದು ಬೇಕಾಯಿತು. ಲ್ಲಿ ತನ್ನ ರಾಜಕೀಯ ಜೀವನದುದ್ದಕ್ಕೂ ಹಿಂದೂ ರಾಷ್ಟ್ರ ನಿರ್ಮಾಣದ ಧಿಸಲು ಅಗತ್ಯವಿರುವ ಇಂತಹುದೇ ಕೃತ್ಯಗಳನ್ನು ಪೋಷಿಸಿದ ನಿಷ್ಠಾವಂತ ಗೆ ಆ ನೈತಿಕ ಶಕ್ತಿ ಎಲ್ಲಿಂದ ಬರಬೇಕು? ತನ್ನ ಬದುಕಿನುದ್ದಕ್ಕೂ ಮತ್ತು ಮತ್ತಿತರ ಅಲ್ಪಸಂಖ್ಯಾತ ವಿರೋಧಿ ಅಭಿಯಾನಗಳನ್ನು ಮಾಡುತ್ತಾ ವ್ಯಕ್ತಿ ಈಗ ಇದ್ದಕ್ಕಿದ್ದಂತೆ ಅದರ ವಿರುದ್ಧ ಮಾತಾಡುವುದಾದರೂ 2002ರ ನರಮೇಧ, ತಥಾಕಥಿತ ಮುಸ್ಲಿಂ ಉಗ್ರರ ನಕಲಿ ಬಗ್ಗೆ ಈಗಾಗಲೆ ಸಾಕಷ್ಟು ಲೇಖನಗಳು, ಸಂಶೋಧನಾ ವರದಿಗಳು ಹೀಗೆ ಹೊಟ್ಟೆಯಲ್ಲಿ ಬಚ್ಚಿಟ್ಟುಕೊಂಡಿರುವ ಈ ವಿಚಾರಗಳೆಲ್ಲವೂ ಪ್ರತಿಕ್ರಿಯೆ ಬಾರದಂತೆ ತಡೆದಿವೆ. ವಿದೇಶಗಳಲ್ಲಿ ಕಣ್ಣೀರ್ಗರೆಯುವ ಸ್ವದೇಶದಲ್ಲಿ ನಡೆಯುತ್ತಿರುವ ಕಗ್ಗೊಲೆಗಳ ಕುರಿತು ಒಂದು ಮಾತಾಡದಂತೆ ಮಾಡಿವೆ. ತನ್ನ ಹಿಂಬಾಲಕ, ಶಾಸಕ, ಸಂಸದ, ಮಂತ್ರಿಗಳನ್ನು ನೈತಿಕ ಸ್ಥೈರ್ಯ ಇಲ್ಲದಂತೆ ಮಾಡಿವೆ. ತನ್ನ ಸಂಘ ಪರಿವಾರದ ದಾಂಧಲೆಯನ್ನು ಹತ್ತಿಕ್ಕದಂತೆ ಮಾಡಿವೆ. "ಆಹಾರ, ಚಿಂತನೆ, ಧರ್ಮಗಳಿಗಾಗಿ ಯಾರನ್ನಾದರೂ ಕೊಲ್ಲುವುದು ಅತಿದೊಡ್ಡ ಹಾಗೆ ಮಾಡುವವರನ್ನು ನ್ಯಾಯಯುತವಾಗಿ ಶಿಕ್ಷಿಸಲಾಗುವುದು. ಭಾರತದ ಸಂವಿಧಾನದಲ್ಲಿ ಪ್ರತಿಬಿಂಬಿತವಾಗಿರುವ ಬಹುಸಂಸ್ಕೃತಿಗೆ ಯಾವುದೇ ಕೃತ್ಯವನ್ನು ಸಹಿಸುವುದಿಲ್ಲ" ಎಂಬ ಸ್ಪಷ್ಟ ಸಾರದಂತೆ ತಡೆದಿವೆ.

■ ಸುರೇಶ್ ಭಟ್ ಬಾಕ್ರಬೈಲ್

ಮೈಸೂರು ಆಶಾ ಸ್ಟುಡಿಯೋ



ನಾಲ್ಕು ದಶಕದ ನಂತರ ಮೈಸೂರಿನ ನಂಜೂ ಮಳಿಗೆಯಲ್ಲಿರುವ ಆಶಾ ಸ್ಟುಡಿಯೋದ ಒಳಗೆ ಕಾಲಿಟ್ಟೆ. ಆಶ್ಚರ್ಯವೆಂದರೆ ನಲವತ್ತು ವರ್ಷಗಳ ಹಿಂದೆ ಫೋಟೋ ಸ್ಟುಡಿಯೋದ ಒಳಕ್ಕೆ ಕಾಲಿಟ್ಟಾಗ ರಾಚಿದ ವಾಸನೆ ಇವತ್ತಿಗೂ ಇನ್ನೂ ಹಾಗೇ ಇದೆ. ಆ ಕಾರಣಕ್ಕೆ ನಾಲ್ಕು ದಶಕದ ಹಿಂದಿನ ನೆನಪುಗಳು ಆ ಸ್ಟುಡಿಯೋದ ಒಳಗಡೆಯೇ ನುಗ್ಗಿ ಬಂದವು. ಈ ಸ್ಟುಡಿಯೋ ಬಂಡೀಕೇರಿಯಲ್ಲಿರುವ ನಮ್ಮ ದೊಡ್ಡವ್ವನ ಮನೆಯ ಹತ್ತಿರದಲ್ಲೇ ಇದೆ. ಆದ್ದರಿಂದ ಊರಕಡೆಯವರು ದಸರಾ ನೋಡಲು ಬಂದಾಗ, ಆಶಾ ಸ್ಟುಡಿಯೋಕ್ಕೆ ಹೋಗಿ ಫೋಟೋ ಹೊಡೆಸಿಕೊಂಡು ಅವರು ಹೊರಟಾಗ ತೆಗೆದುಕೊಂಡು ಹೋಗುತ್ತಿದ್ದರು. ಹಾಗಾಗಿ ಊರಿನ ನಮ್ಮೆಲ್ಲಾ ಹಿರಿಯರ ಮನೆಗಳಲ್ಲಿರುವ ಭಾವಚಿತ್ರಗಳೆಲ್ಲಾ ಈ ಆಶಾ ಸ್ಟುಡಿಯೋದಲ್ಲಿ ಹೊಡೆಸಿಕೊಂಡು ಬಂದಂತವು.

ಅಂದು ಮೈಸೂರು ಪೌಜು ನೋಡಲು ಹೋದವರು ತೆಗೆಸಿಕೊಂಡು ಬಂದಿರುವ ಫೋಟೋಗಳನ್ನು ನೋಡಿದರೆ ಅವರ ವೇಷಭೂಷಣದಲ್ಲಿ ಒಂದು ಸಾಮ್ಯತೆ ಇದೆ. ಅದೇನೆಂದರೆ ಎಲ್ಲರೂ ಹಾಕಿರುವುದು ಒಂದೇ ಕೋಟು. ಹಾಗೆಯೇ ಅಂದು ಖ್ಯಾತನಾಗಿದ್ದ ಹಿಂದೀ ಸಿನಿಮಾ ನಟ ಅಶೋಕ್‌ಕುಮಾರನ ಹೇರ್ ಸ್ಟೈಲನ್ನೇ ಎಲ್ಲರೂ ಅನುಕರಿಸಿದ್ದಾರೆ. ಅಂದರೆ ಪೂರಾ ಹಿಂದಕ್ಕೆ ಬಾಚಿ ಗುದ್ದುವ ಟಗರಿನಂತೆಯೋ, ಕೋಣನಂತೆಯೋ ಕಾಣುತ್ತಾರೆ. ಫೋಟೋ ತೆಗೆಯುವಾಗಲೂ ಅವರ ಮೂಲ ಗುಣಗಳಾದ ಕೆಕ್ಕರಿಸಿಕೊಂಡು ನೋಡುವುದನ್ನು ಫೋಟೊ ತೆಗೆಯುವವನೂ ಅವಾಯ್ಡು ಮಾಡಲಾಗಿಲ್ಲ.

ಈ ಅಶೋಕ್‌ಕುಮಾರನ ನಂತರ ನಮ್ಮ ಹಿರಿ ತಲೆಮಾರನ್ನು ತಲೆಯಿಂದಲೇ





ಪ್ರಭಾವಿಸಿರುವವನು ದೇವಾನಂದ. ಕ್ಯಾಪಿನ ತಲೆಗೆ ಬಲಗಡೆ ಗುಪ್ಪೆ ಏಳಿಸಿಕೊಂಡವರ ತಲೆಗಳು ಅಂದಿನ ಫೋಟೋಗಳಲ್ಲಿ ಹೇರಳವಾಗಿ ಕಾಣುತ್ತವೆ. ಇನ್ನು ಹೆಣ್ಣುಮಕ್ಕಳ ಫೋಟೋ ನೋಡಿದರೆ ಅಂದಿನ ವಹಿದಾ ರೆಹಮಾನ್, ಆಶಾ ಪರೇಖ್, ಸಾಯಿರಾ ಬಾನು, ಶರ್ಮಿಳಾ ಠಾಗೂರ್‌ಳನ್ನು ಅನುಕರಿಸಿರುವ ವೇಷಭೂಷಣಗಳ ಫೋಟೋ ಇವೆ.

ಆಶಾ ಸ್ಟುಡಿಯೋ ಮುಂದೆ ಹಾದು ಹೋಗುತ್ತ ಆ ಕಡೆ ನೋಡಿದರೆ ಸಾಕು, ನಿಂತು ನೋಡುವಂತಹ ಭಾವಚಿತ್ರಗಳು ನಮ್ಮನ್ನು ಸೆಳೆಯುತ್ತಿದ್ದವು. ತುಂಬಿದ ಮುಖದ ಮನಮೋಹಕ ನಗೆಯ ರಾಜಕುಮಾರ್, ಅಶ್ವತ್ಥ್ ಉದಯಕುಮಾರ್, ದಿಲೀಪ್‌ಕುಮಾರ್, ರಾಜಕಪೂರ್ ಫೋಟೋಗಳೆಲ್ಲಾ ಸ್ಟುಡಿಯೋ ಹೊರಾಂಡದಲ್ಲಿದ್ದವು.

ಒಳಗೋದರೆ ಅಂದಿನ ಶೋಡಷಿಯರಾದ ಭಾರತಿ, ಜಯಂತಿ, ಕಲ್ಪನಾ, ಸರೋಜಾದೇವಿಯವರ ಚಿತ್ರಗಳು ನಿಂತು ಗಂಟೆಗಟ್ಟಲೆ ನೋಡುವಂತಿದ್ದವು. ಕಲ್ಪನಾ ಕೆಂಪು ಅಂಬಾಸಿಡರ್ ಕಾರನ್ನ ಒರಗಿಕೊಂಡು ಕೂಲಿಂಗ್ ಗ್ಲಾಸಾಕಿಕೊಂಡು ನಿಂತಿರುವ ಫೋಟೊ ಇನ್ನೂ ಹಾಗೇ ಇದೆ. ಜೊತೆಗೆ ಜಯಂತಿ ಸರೋಜಾದೇವಿಯವರ ಐದಡಿ ಎತ್ತರದ ಕಟೌಟ್‌ಗಳೂ ಇದ್ದವು.

ಈ ಪೈಕಿ ಜಯಂತಿ ಜೊತೆ ಫೋಟೊ ತೆಗೆಸಿಕೊಂಡ ನಾನು ಊರ ಜನರಿಗೆ ತೋರಿಸುತ್ತ, ನಿಜವಾಗಿಯೂ ಜೀವಂತ ಜಯಂತಿಯೇ ನನ್ನ ಜೊತೆ ನಿಂತು ಫೋಟೋ ತೆಗೆಸಿಕೊಂಡರೆಂದು ವಾದಿಸಿ ಹಳ್ಳಿ ಮುಗ್ಧರ ನಂಬಿಕೆಯನ್ನೆ ಕಳೆದುಕೊಂಡಿದ್ದೆ. ಆ ನಂತರ ನಾನು ಯಾವುದೇ ಕೌತುಕ ಹೇಳಿದರೂ ಅವರಿಗೆ ವಿಶ್ವಾಸ ಮೂಡುತ್ತಿರಲಿಲ್ಲವೆಂಬುದು ತಡವಾಗಿ ಗೊತ್ತಾಯ್ತು. ಏಕೆಂದರೆ, ನಮ್ಮ ಹಳ್ಳಿಗರು ಸುಮ್ಮನೆ ಕೇಳಿಸಿಕೊಳ್ಳುತ್ತಾರೆ, ನಾವು ಜಾಗ ಖಾಲಿ ಮಾಡಿದ ನಂತರ ಅಳೆದು ಸುರಿಯುತ್ತಾರೆ!

ಈ ಆಶಾ ಸ್ಟುಡಿಯೋದಲ್ಲಿ ಇನ್ನೊಂದೆರಡು ಚಮತ್ಕಾರಗಳಿದ್ದವು. ಕೈಗೆ ಒಂದು ಹ್ಯಾಂಡಲ್ ಕೊಟ್ಟು ಫೋಟೊ ತೆಗೆಯುತ್ತಿದ್ದರು. ತೊಳೆದು ಕೊಟ್ಟಾಗ ಹೊಡೆಸಿಕೊಂಡವನು ಅಂದಿನ ಪ್ರಖ್ಯಾತ ಜಾವಾ ಬೈಕಿನ ಮೇಲೆ ಸ್ಟೈಲಾಗಿ ಕುಳಿತಿರುತ್ತಿದ್ದ. ಒಮ್ಮೆ ನಮ್ಮ ಅಣ್ಣ ಭಾವಂದಿರೆಲ್ಲಾ ಸಾಲಾಗಿ ನಿಂತು ಫೋಟೊ ತೆಗೆಸಿಕೊಂಡೆವು. ಆಶಾ ಸ್ಟುಡಿಯೊ ಮಾಲೀಕ ರಾಜು ಫೋಟೊ ತೊಳೆದುಕೊಟ್ಟಾಗ ನಾವೆಲ್ಲಾ ಚವರ್‌ಲೆಟ್ ಕಾರಿನಲ್ಲಿ ಕುಳಿತಿದ್ದೆವು. ಇದಂತೂ ರೋಮಾಂಚನಕಾರಿ ಘಟನೆಯಾಗಿತ್ತು.

ಈಗ ಸ್ಟುಡಿಯೋ ಮಾಲೀಕ ರಾಜುಗೆ ವಯಸ್ಸಾಗಿದೆ. ಇಡೀ ನಂಜೂ ಮಳಿಗೆಯೇ ಬದಲಾದರೂ ರಾಜು ಮಾತ್ರ ಸ್ಟುಡಿಯೊ ಬದಲಾಯಿಸಿಲ್ಲ.

"ಈಗಲೂ ನೀವು ಫೋಟೋ ತೆಗೆಸಿದ ವರ್ಷ ಮತ್ತು ದಿನಾಂಕ ಹೇಳಿ ನೆಗೆಟಿವ್ ತೆಗೆದುಕೊಡುತ್ತೇನೆ" ಎಂದರು. ಹಳೆ ಫೋಟೊಗಳವೆ ಸಾಕು ಎಂದು ಹೊಸದಾಗಿ ಒಂದೆರಡು ಫೋಟೊ ತೆಗೆಸಿಕೊಂಡೆವು. ಜೊತೆಯಲ್ಲಿ ಬಂದಿದ್ದ ಡಾ. ರವೀಂದ್ರನಾಥ್ ಜೊತೆ ನಂಜುಮಳಿಗೆ ನೋಡಬೇಕೆಂದು ಹೊರಟೆ. ಏಕೆಂದರೆ ಈ ನಂಜು ಮಳಿಗೆಯ ನೆನಪೇ ರೋಮಾಂಚಕಾರಿಯಾದದ್ದು.

ಇಲ್ಲಿ ನಮ್ಮಕ್ಕ ಅಂದರೆ ದೊಡ್ಡವ್ವನ ಮಗಳಾದ ಚಿಕ್ಕ ಸೊಪ್ಪು ಮಾರುತ್ತಿದ್ದಳು. ಈ ಪ್ರಾಂತ್ಯಕ್ಕೆ ರೌಡಿಯವಳು. ಸೊಪ್ಪು ತರಕಾರಿ ಮಾರುವವರೊಂದಿಗೆ ಜೋರಾಗಿ ಮಾತನಾಡಿ ಅವಳ ನಿಜವಾದ ಗಂಟಲೇ ಒಡೆದುಹೋಗಿ ಗದರುವ ದನಿಯಾಗಿತ್ತು. ಬನುಮಯ್ಯ ಕಾಲೇಜು ಮುಗಿಸಿಕೊಂಡು ಆ ಮಾರ್ಗವಾಗಿ ಬರುತ್ತಿದ್ದ ನನ್ನನ್ನು ಕರೆದು "ಲೇ ಚಂದ್ರಾ ಬಪ್ಪಾ ಇಲ್ಲಿ ಕೂತಿರು ಕಾಫಿ ಕುಡಿದು ಬತ್ತೀನಿ" ಎಂದು ಬಿಡುತ್ತಿದ್ದಳು. ನಾನು ಯಾವ ಸಬೂಬು ಹೇಳದೆ ಹೋಗಿ ಕೂರುತ್ತಿದ್ದೆ. ಇಂತಹ ದುಡಿಮೆಗೆ ಯಾವ ಬೆಲೆಯನ್ನು ಕೊಡದೆ ಕೀಳಾಗಿ ಕಾಣುವ ನಮ್ಮ ಸಮಾಜದಲ್ಲಿ ಕಾಲೇಜಿಗೆ ಹೋಗುತ್ತಿದ್ದ ನಾನು ಸೊಪ್ಪು ಮಾರಲು ಕೂರುವುದು ಜೀವ ಹಿಂಡುವಂತಹ ಘಟನೆಯಾಗಿತ್ತು. ಏಕೆಂದರೆ ಆ ಮಾರ್ಗದಲ್ಲೇ ಬಂದ ಸಹಪಾಠಿಗಳು ನನ್ನನ್ನು ನೋಡಿದ್ದು, ನಾನು ಕೀಳರಿಮೆಯಿಂದ ನಕ್ಕಿದ್ದು ಇನ್ನು ನೆನಪಿದೆ.

ಕೊನೆಗೊಮ್ಮೆ ನಾನು ಚಿಕ್ಕಕ್ಕ ಕರೆದಾಗ "ನನಿಗೆ ನಾಚಿಗಾಯ್ತದೆ ಕಣಕ್ಕ ಸೊಪ್ಪು ಮಾರಕ್ಕೆ" ಎಂದೆ. ಅದಕ್ಕವಳು "ಕದಿದ್ದಿಯೇನೊ ನಾಚಿಗಳಕ್ಕೆ, ಇನ್ನೇನು ಅನ್ನ ಹುಟ್ಟಿಸಿಕೊಂಡು ತಿಂತಿ ನೀನು ನಾಚಗಾಯ್ತದೆ ಅಂತಿಯಲ್ಲಾ" ಎಂದು ಬೈದಳು. ನನಗೆ ಸೊಪ್ಪು ಬೆಳೆಯಲು ಯಾವ ಕೀಳರಿಮೆಯೂ ಇರಲಿಲ್ಲ. ದೊಡ್ಡವ್ವ ಹೂವಿನ ತೋಟದಲ್ಲಿ ಸಬ್ಬಸಿಗೆ, ಮೆಂತ್ಯ ಕೀರೆ, ಕೊತ್ತಂಬರಿ ಬೆಳೆಯುತ್ತಿದ್ದಳು. ಪಾತಿ ಮಾಡಿ ನೀರು ಹಾಕುವುದು ನನ್ನ ಕೆಲಸ. ಇದೊಂದು ರೀತಿ ಊರಿನ ಕೃಷಿ ಕೆಲಸದ ಮುಂದುವರಿಕೆ. ಅಂದರೆ ಊರಿನಷ್ಟು ಶ್ರಮ ಇಲ್ಲಿರಲಿಲ್ಲ. ಇಪ್ಪತ್ತು ಅಡಿ ಉದ್ದದ ಪಾತಿ ಮಾಡಿ, ಬೀಜ ಉದುರಿಸಿ ನೀರು ಕೊಟ್ಟರಾಯ್ತು. ಸೊಪ್ಪು ಭೂಮಿ ಮುಚ್ಚಿಕೊಂಡು ಪುಟ್ಟ ಕಗ್ಗಾಡಿನಂತೆ ಕಾಣುತ್ತಿತ್ತು. ಆಗ ಚಿಕ್ಕಕ್ಕ ಮತ್ತು ಅವಳಂತವರು ಬಂದು ಗಂಟೆಗಟ್ಟಲೆ ಚೌಕಾಸಿ ಮಾಡಿ ಕಿತ್ತು ಕಂತೆ ಕಟ್ಟಿಕೊಂಡು ನಂಜುಮಳಿಗೆಗೆ ತೆಗೆದುಕೊಂಡು ಹೋಗುತ್ತಿದ್ದರು. ಆಗ ಚಿಕ್ಕಕ್ಕ ಮತ್ತು ದೊಡ್ಡವ್ವನ ನಡುವೆ ನಡೆಯುತ್ತಿದ್ದ ಚೌಕಾಸಿ ನನಗೆ ಆಶ್ಚರ್ಯ ಹುಟ್ಟಿಸುತ್ತಿತ್ತು. ಏಕೆಂದರೆ ನಾವೆಷ್ಟು ಬೆಳೆದರೂ ಪುನಃ ಬೆಳೆಯಬೇಕಾದ ಸ್ಥಿತಿಯಿತ್ತು. ಆದರೆ ಕಂತೆ ಕಟ್ಟಿ ಮಾರ್ಕೆಟ್ಟಿನಲ್ಲಿ ಮಾರುವ ಹೆಂಗಸರು ಸೀರೆ ಒಡವೆ ಮಾಡಿಸಿಕೊಂಡು, ಮಸಾಲೆದೋಸೆ ತಿನ್ನುತ್ತ ಅಂದಿನ ರಾಜ್‌ಕುಮಾರ್ ಸಿನಿಮಾ ನೋಡಿಕೊಂಡು ಮಜವಾಗಿದ್ದರು ಮತ್ತು ಬಡ್ಡಿಗೆ ಸಾಲ ಕೊಡುತ್ತಿದ್ದರು. ಆದರ ವಸೂಲಿಗೆ ಬಳಸುತ್ತಿದ್ದ ಅವರ ಭಾಷೆ ಕೇಳಿದರೆ ಹಳ್ಳಿಯಿಂದ ಹೋದ ನಾನೇ ಹೆದರುತ್ತಿದ್ದೆ. ಮುಂದೆ ಆ ಭಾಷೆ ನನಗೆ ಸಿಕ್ಕಿದ್ದು ದೇವನೂರು ಸಾಹಿತ್ಯದಲ್ಲಿ.

ನಾವು ಸೊಪ್ಪು ಬೆಳೆಯುತ್ತಿದ್ದುದು ಮಹಾರಾಜರ ಭೂಮಿಯಲ್ಲಿ. ಈಗ ಅದೆಲ್ಲ ಕಾಣೆಯಾಗಿದೆ. ಅದನ್ನು ಸುತ್ತೂರು ಗಣಪತಿ ಸಚ್ಚಿದಾನಂದ ಆಕ್ರಮಿಸಿಕೊಂಡಿದ್ದಾನೆ. ಚಾಮುಂಡಿ ಬೆಟ್ಟದ ಮೇಲೆ ನಿಂತು ನೋಡಿದರೆ ಅಂದಿನ ಮೈಸೂರು ನಗರ ಅರಮನೆ ಸುತ್ತ ವ್ಯವಸ್ಥಿತವಾಗಿ ರಚನೆ ಗೊಂಡಂತೆ ಕಾಣುತ್ತಿತ್ತು. ಈಗ ಮೂರು ಮೈಸೂರುಗಳು ಬಂದು ಸೇರಿಕೊಂಡಿವೆ. ಕೊನೆಮೊದಲಿಲ್ಲದ ಲೇಔಟ್‌ಗಳು ರಚನೆಯಾಗುತ್ತಿವೆ. ಆದರೆ ದಸರಾ ಮಾತ್ರ ತನ್ನ ವೈಭವ ಕಳೆದುಕೊಂಡಿದೆ.

ನಮ್ಮ ಹಳ್ಳಿಗರು ದಸರಾಕ್ಕೆಂದೇ ದುಡಿದು ಗಂಟು ಮಾಡಿ ಹೋಗಿ ನೋಡಿ ಬರುತ್ತಿದ್ದುದನ್ನು ಕಂಡಿದ್ದೇನೆ. ಪಾಂಡವಪುರದವರೆಗೂ ನಡೆದುಹೋಗಿ ನಂತರ ರೈಲಿಡಿದು ದಸರಾ ನೋಡಿ ಬರುತ್ತಿದ್ದರು. ಅಂತಹ ದಸರಾದ ಬಗ್ಗೆ ಅವರು ಉತ್ಸಾಹ ಕಳೆದುಕೊಂಡ ಸಂದರ್ಭ ನನಗಿನ್ನು ನೆನಪಿದೆ. ಆ ವರ್ಷ ಊರ ಕಡೆಯಿಂದ ನಮ್ಮ ಹಿರಿಯರೆಲ್ಲಾ ಬಂದಿದ್ದರು. ದೊಡ್ಡವ್ವನ ಮನೆಯಲ್ಲಿ ಕೂರಲು ಜಾಗವಿರಲಿಲ್ಲ. ಅದೇ ವರ್ಷ ಇಂದಿರಾ ಗಾಂಧಿ ರಾಜಧನ ರದ್ದು ಮಾಡಿದ್ದರಿಂದ ಅಂಬಾರಿಯೊಳಗೆ ಮಹಾರಾಜರ ಬದಲು ಚಾಮುಂಡಿ ವಿಗ್ರಹದ ಮೆರವಣಿಗೆಯಿತ್ತು. ಇದನ್ನು ನೋಡಿ ನಮ್ಮ ಕಡೆಯ ಜನ ಬಹಳ ಬೇಸರದಿಂದ ಮಾತನಾಡಿದ್ದನ್ನು ಕೇಳಿಸಿಕೊಂಡಿದ್ದೆ.

ಬಹುಶಃ ಅಂತಹ ಜನರು ದಸರಾ ನೋಡುವುದು ಬಿಟ್ಟು ಬೇರೆಯದೇ ಜನಾಂಗವೀಗ ದಸರಾದಲ್ಲಿ ಪಾಲ್ಗೊಳ್ಳತೊಡಗಿದೆ. ಅಂದು ಇಡೀ ಮೈಸೂರು ರಾತ್ರಿಯೆಲ್ಲಾ ದಸರಾಚರಣೆ ಸಂಭ್ರಮದಲ್ಲಿ ತೊಡಗಿ ಬೀದಿಯಲ್ಲೇ ಜನ ಮಲಗುತ್ತಿದ್ದರು. ಈಗ ಹನ್ನೊಂದು ಗಂಟೆಗೆ ಪೊಲೀಸ್ ಇಲಾಖೆ ಎಲ್ಲರನ್ನು ಗದರಿ ಮನೆಗೆ ಓಡಿಸುತ್ತಿದೆ. ಅಂದು ನಾನು ನೋಡಿದ್ದನ್ನೆಲ್ಲಾ ಡಾ. ರವಿಗೆ ಹೇಳುತ್ತ ನಮ್ಮಕ್ಕ ಸೊಪ್ಪು ಮಾರುತ್ತಿದ್ದ ಜಾಗಕ್ಕೆ ಹೋದೆ. ಅಕ್ಕ ಈಗಿಲ್ಲ, ತೀರಿಹೋದಳು. ಇಪ್ಪತ್ತು ವರ್ಷದ ಹಿಂದೆ ಬಂದಾಗ ಅವಳ ಮಗಳಾದ ಮಂಗಳಗೌರಿ ಸೊಪ್ಪು ಮಾರುತ್ತಿದ್ದಳು. ಈಗ ಅವಳ ಬದಲಿಗೆ ಅವಳ ಮಗಳು ಕುಳಿತಿದ್ದಳು. ಮೂರನೆ ತಲೆ ಮಾತನಾಡಿಸಿ ಅವಳ ಕೈಗೆ ಕಾಸು ಕೊಡಲು ಹೋದಾಗ ತಿರಸ್ಕರಿಸಿದಳು. ಎಷ್ಟೇ ಆಗಲಿ ಸ್ವಾಭಿಮಾನದಿಂದ ದುಡಿದು ಗಂಡ ಮಕ್ಕಳನ್ನು ಸಾಕಿದ ನಮ್ಮಕ್ಕನ ಮೊಮ್ಮಗಳಲ್ಲವೆ ಎಂಬ ಹೆಮ್ಮೆಗೆ ಮಾತಿಲ್ಲದ [illegible]

■ ಬಿ. ಚಂದ್ರೇಗೌಡ

ಕಡು ಬಡತನದ ಹಿನ್ನೆಲೆಯಲ್ಲಿ ಜನನ. ಮಧ್ಯವಯಸ್ಸಿನವರೆಗೂ ಅದನ್ನೆದುರಿಸಲು ಪಟ್ಟ ಪಡಿಪಾಟೀಲು ಹೇಳಲಸದಳ. ಪ್ರಸಕ್ತ 'ಹಾವಾಡಿಗ ಮಗಳು' ಕಥೆ ಅಂದು ಇಂಗ್ಲೆಂಡಿನಲ್ಲಿ ಪ್ರಕಟಗೊಂಡಿತ್ತು, ಇಂಡಿಯನ್ ರೈಟಿಂಗ್‌ನಲ್ಲಿ (ಈಗ ಕಣ್ಮುಚ್ಚಿರುವ ನಿಯತಕಾಲಿಕೆ) ಮೊದಲಿಗೆ ಜಾಗತಿಕ ಮಹಾಸಮರದ ಅವಧಿಯಲ್ಲಿ ಪ್ರಕಟವಾಯಿತು. ಜಾತಿಯನ್ನು ಮೀರಿ ನಿಲ್ಲುವ ಈರ್ವರು ಪ್ರೇಮಿಗಳ ಸುತ್ತ ಸುತ್ತುವರಿದಿರುವ ಮನಕಲಕುವ ಪ್ರಣಯಚರಿತೆ ಇದು.

ಹಾವಾಡಿಗನ ಮಗಳ

ಕತೆ

ನಾವು ಶಾಲೆಗೆ ಪಕ್ಕಾ ಎಂಟು ಮೈಲಿ ನಡೆಯಬೇಕಿತ್ತು. ಹತ್ತೋ ಹನ್ನೆರಡೋ ಮಂದಿ ನಾವಿದ್ದೆವು. ನಮ್ಮ ದೀರ್ಘಯಾನದಲ್ಲಿ ಮೂರು ಹಳ್ಳಿಗಳನ್ನು ದಾಟಬೇಕಿತ್ತು. ಶಾಲೆಗೆ ಹೋಗುವ ದಾರಿ ಮಧ್ಯೆ ಓರ್ವ ಹಳ್ಳಿಯವನನ್ನು ನಾನು ಭೇಟಿಯಾಗುತ್ತಿದ್ದೆ. ಅವನ ಹೆಸರು ಮೃತ್ಯುಂಜಯ. ವಯಸ್ಸಿನಲ್ಲಿ ನಮಗಿಂತ ಹಿರಿಯ. ಒಳ್ಳೆ ರೂಪು ಇತ್ತು. ನಮ್ಮಲ್ಲಿ ಯಾರೊಬ್ಬರಿಗೂ ಅವನು ಇಲ್ಲಿಗೆ ಏಕೆ ಬಂದ, ಹೇಗೆ ಬಂದ ಎಂಬುದು ಗೊತ್ತಿರಲಿಲ್ಲ, ಆದರೆ ನಾವು ಅವನನ್ನು ಅಲ್ಲಿ ಸದಾ ನೋಡುತ್ತಿದ್ದೆವು. ಅವನೋರ್ವ ಅನಾಥ, ಅಕ್ಕ ತಂಗಿಯರಾಗಲೀ ಅಣ್ಣ ತಮ್ಮಂದಿರಾಗಲೀ ಇರಲಿಲ್ಲ, ಅವನಿಗಿದ್ದ ಒಂದೇ ಒಂದು ಆಸ್ತಿ ಎಂದರೆ ಊರಾಚೆಯ ತೋಟ; ಅದು ಹಣ್ಣಿನ ತೋಟ. ಆ ತೋಟದ ಮಧ್ಯದೊಳಗೊಂದು ಶಿಥಿಲಗೊಂಡ ಕುಟೀರ. ಅವನಿಗೊಬ್ಬ ಚಿಕ್ಕಪ್ಪನಿದ್ದ. ಆ ಚಿಕ್ಕಪ್ಪನ ಮುಖ್ಯ ಕಸುಬೆಂದರೆ ಎಲ್ಲ ತರಹದ ಕುಖ್ಯಾತ ಕಥೆಗಳನ್ನು ಮೃತ್ಯುಂಜಯನ ಮೇಲೆ ಹಬ್ಬಿಸುವುದಾಗಿತ್ತು, ನನ್ನ ಸಂಬಂಧಿ ಭಂಗಿ ಬಡಕ, ಮಾದಕ ವ್ಯಸನಿ ಎಂದೆಲ್ಲ ಹೇಳುತ್ತಿದ್ದ. ಅವನ ಪ್ರಿಯವಾದ ಕಥೆ ಎಂದರೆ ಆ ತೋಟದ ಅರ್ಧ ಭಾಗ ತನಗೆ ಸೇರಿದೆ ಎಂದು ಹೇಳಿಕೊಳ್ಳುವುದರಲ್ಲಿತ್ತು ಹಾಗೂ ತಾನು ಈ ಬಗ್ಗೆ ಕೋರ್ಟ್ ಮೆಟ್ಟಲೇರುವೆನೆಂದು ಹೇಳುತ್ತಿದ್ದ.

ಮೃತ್ಯುಂಜಯ ತನ್ನ ಅಡುಗೆ ತಾನೇ ಬೇಯಿಸಿಕೊಳ್ಳುತ್ತಿದ್ದ ಹಾಗೂ ತನ್ನ ತೋಟದ ಸಂಪಾದನೆಯಿಂದ ಹೊಟ್ಟೆ ಹೊರೆದುಕೊಳ್ಳುತ್ತಿದ್ದ. ಆ ಕೆಲಸ ಚೆನ್ನಾಗಿ ನಿಭಾಯಿಸುತಲಿದ್ದ ಕೂಡ. ಶಾಲೆಗೆ ನಾವು ಹೋಗುವ ಸಂದರ್ಭದಲ್ಲೆಲ್ಲಾ ಅವನು ಕಂಕುಳಲ್ಲಿ ಹರಿದ, ಹಳೆ ಪುಸ್ತಕಗಳನ್ನು ಇರುಕಿಕೊಂಡು ರಸ್ತೆಯ ಅಂಚಿನಲ್ಲಿ ಮೆಲ್ಲಗೆ ಹೋಗುತ್ತಿದ್ದುದನ್ನು ನಾವು ನೋಡುತ್ತಿದ್ದೆವು. ಅವನ ಮೇಲಿನ ನಮ್ಮ ಆಕರ್ಷಣೆಗೆ ಕಾರಣ, ಅವನು ಆ ಊರಿನ ಮಿಠಾಯಿ ಅಂಗಡಿಯಲ್ಲಿ ಮಾಡುತ್ತಿದ್ದ ಚೌಕಾಸಿ ವ್ಯಾಪಾರ.

ಒಮ್ಮೆ ಹಲವು ದಿನಗಳವರೆಗೆ ಮೃತ್ಯುಂಜಯ ನಮಗೆ ಕಾಣಲಿಲ್ಲ. ಅವನು ಸಾಯುವ ಸ್ಥಿತಿಯಲ್ಲಿರುವನೆಂಬು ಸುದ್ದಿ ಬಂದಿತು ನಮಗೆ ಹಾಗೂ ಓರ್ವ ವೃದ್ಧ ಹಾವಾಡಿಗ ಅವನ ಆರೈಕೆ ಮಾಡುತ್ತಿರುವನೆಂದೂ, ಹಾವಾಡಿಗನ ಮಗಳು ಬಿಲಾಸಿ ಅವನಿಗೆ ಮರುಜೀವ ತುಂಬಿರುವಳೆಂದೂ ಕೇಳಿದೆವು.

ಅವನ ಸಿಹಿಖಾದ್ಯದ ಹಂಬಲವನ್ನು ನಾವು ಆಗಾಗ್ಗೆ ಪೂರೈಸುತ್ತಿದ್ದೆವು. ಅವನ ಕಾಯಿಲೆ ಸುದ್ದಿ ಕೇಳಿ ನನ್ನ ಮನಸಾಕ್ಷಿ ಚುಚ್ಚಿತು. ಒಂದು ಸಂಜೆ ಕತ್ತಲೆಯಲ್ಲಿ ನಾನು ಅವನನ್ನು ನೋಡಲು ಹೋದೆ. ಕುಟೀರದ ಬಾಗಿಲು ಅರ್ಧ ತೆರೆದಿತ್ತು, ದೀಪವೊಂದು ಒಳಗಡೆ ಉರಿಯುತ್ತಿತ್ತು, ಶುಭ್ರ ಹಾಸಿಗೆಯೊಂದರ ಮೇಲೆ ಮೃತ್ಯುಂಜಯ ಮಲಗಿದ್ದ. ಅವನ ಶರೀರ ಮೂಳೆಚಕ್ಕಳ ಬಿಟ್ಟುಕೊಂಡಿತ್ತು, ಅವನೆದುರ ಹಾಸಿಗೆಯ ತುದಿಯಲ್ಲಿ ಓರ್ವ ಹೆಂಗಸು ಕುಳಿತಿದ್ದಳು. ದಿಢೀರನೇ ಪ್ರತ್ಯಕ್ಷಗೊಂಡ ಅಪರಿಚಿತನೋರ್ವನ ಕಾರಣದಿಂದ ಆಕೆ ಮೇಲೆದ್ದಳು. ಆಕೆ ಆ ವೃದ್ಧ ಹಾವಾಡಿಗನ ಮಗಳು. ಅವಳು ಹದಿನೆಂಟರ ಬಾಲೆಯೋ ಇಪ್ಪತ್ತೆಂಟರ ಬಾಲೆಯೋ ನಾನು ಹೇಳಲಾರೆ, ಆದರೆ ಆಕೆ ಹಗಲಿರುಳು ದುಡಿದು, ದುಡಿದು ತೀರಾ ಬಳಲಿ, ಸೊರಗಿದವಳಂತೆ ಕಂಡುಬಂದಳು.

"ಯಾರದು? ನೀರಣಾ?" ಮೃತ್ಯುಂಜಯ ಕೇಳಿದ ನನ್ನನ್ನು ಗುರುತು ಹಿಡಿಯುತ್ತ.

"ಹೌದು" ಎಂದೆ ನಾನು.

"ಕೂತ್ಕೋ" ಎಂದ ಮೃತ್ಯುಂಜಯ.

ಆಕೆ ಕತ್ತು ಬಾಗಿಸಿ ನಿಂತೇ ಇದ್ದಳು. ನಮ್ಮ ಸಂವಾದದ ನಡುವೆ ಮೃತ್ಯುಂಜಯ ಹಾಸಿಗೆ ಹಿಡಿದು ಆರು ವಾರಗಳಾಗಿತ್ತೆಂದು, ಸುಮಾರು ಹದಿನೈದು ದಿನ ಪ್ರಜ್ಞೆಯೇ ಇರಲಿಲ್ಲ ಎಂದೆಲ್ಲ ವಿಷಯ ತಿಳಿಯಿತು. ಕೆಲವು ದಿನಗಳಿಂದೀಚೆಗಷ್ಟೇ ಮಂದಿಯನ್ನು ಗುರುತಿಸುವವನಾಗಿದ್ದನೆಂತಲೂ, ಆದರೂ ಇನ್ನೂ ಹಾಸಿಗೆ ಬಿಟ್ಟೇಳಲು ಆಗುತ್ತಿಲ್ಲವೆಂತಲೂ, ಅಂತೂ ಪ್ರಾಣಾಪಾಯವಿಲ್ಲವೆಂಬ ವಿಷಯ ಅರಿತೆನು.

ನಾನು ಹೊರಡುತ್ತಿದ್ದಂತೆ, ಆಕೆ ದೀಪ ಹಿಡಿದುಬಂದಳು ದಾರಿ ತೋರಲು. ಈವರೆಗೆ ಆಕೆ ಏನೊಂದು ಆಡಿರಲಿಲ್ಲ. "ರಸ್ತೆವರೆಗೂ ಬರಲೇ ನಿಮ್ಮೊಂದಿಗೆ?" ಎಂದು ಕೇಳಿದಳು ಮೆಲ್ಲಗೆ.

ಅವಳ ಹಿಂಭಾಗದಲ್ಲಿ ಕಾಣುತ್ತಿದ್ದ ಬೃಹತ್ ಮಾವಿನ ಮರ ಕಗ್ಗತ್ತಲೆಯ ಗಟ್ಟಿಮುದ್ದೆಯಂತೆ ತೋರುತ್ತಿತ್ತು, ದಾರಿ ಆ ಕಗ್ಗತ್ತಲೆಯಲ್ಲಿ ಅಳಿಸಿಹೋಗಿತ್ತು, ನನ್ನ ಕೈಗಳೇ ನನಗೆ ಕಾಣಿಸುತ್ತಿರಲಿಲ್ಲ. "ಬೇಡ" ಎಂದೆ, "ದೀಪ ಕೊಡ್ತಿಯಾ?" ಕೇಳಿದೆ.

ಅವಳು ನನ್ನ ಕೈಗೆ ದೀಪ ಹಸ್ತಾಂತರಿಸುವಾಗ ಅವಳ ವದನದ ಕ್ಷಣದರ್ಶನವಾಯಿತು. ನನ್ನ ಬಗ್ಗೆ ಆಸ್ಥೆ ವಹಿಸಿದಂತೆ ತೋರಿದಳು. "ಒಬ್ಬರೆ ಹೋಗೋಕೆ ಭಯ ಆಗಲ್ವಾ? ಇನ್ನೂ ಸ್ವಲ್ಪ ದೂರ ಜೊತೆಗೆ ಬರಲೆ?" ಎಂದು ನುಡಿದಳು. ಭಯ? ಈ ಮಾತನ್ನು ಸ್ತ್ರೀಯೋರ್ವಳಿಂದ ಕೇಳುವುದೆ! ಪಿಸು ನನ್ನ ಅಂತರ್ಯದಲ್ಲಿ ನನಗೆ ಆಗ ಏನೇನೋ ಅನ್ನಿಸಿರಬಹುದು, ಆಗ ಸುಮ್ಮನೆ "ಬೇಡ" ಅಂತ ಹೇಳಿ ಹೆಜ್ಜೆ ಚುರುಕುಗೊಳಿಸಿದೆ.

"ನೋಡ್ಕೊಂಡು ಹೋಗಿ" ಎಂದಳು.

ಎರಡು ತಿಂಗಳವರೆಗೂ ಮೃತ್ಯುಂಜಯನ ಕುರಿತು



ಏನೊಂದು ಸುದ್ದಿ ಬರಲಿಲ್ಲ, ಅವನ ಸಾವಿನ ಸುದ್ದಿ ಬಾರದ ಕಾರಣ ಅವನಿನ್ನು ಬದುಕಿರುವನೆಂದೇ ಭಾವಿಸಿಕೊಂಡಿದ್ದೆ.

ಈ ವೇಳೆಗೆ ಮೃತ್ಯುಂಜಯನ ಚಿಕ್ಕಪ್ಪ, ಅವನ ಆಸ್ತಿಯ ಪಾಲುದಾರಿಕೆಯಲ್ಲಿ ಹಕ್ಕುಳ್ಳವನು, ಊರೊಳಗೆ ಕಾಲಿಡುತ್ತಾ ಜಗತ್ತಿನ ಅಂತ್ಯ ಇನ್ನೇನು ಆಗೇ ಹೋಯ್ತೆಂದು ಕಣಿ ನುಡಿಯುತ್ತಿದ್ದ ನಾಲ್ವೆಯ ಮಿತ್ರ ಸಮುದಾಯದಲ್ಲಿ ಇನ್ಮುಂದೆ ಅವನೇಗೆ ಮುಖ ಹೊತ್ಕೊಂಡು ತಿರುಗ್ತಾನೆ? ಹಾವಾಡಿಗನ ಮಗಳನ್ನು ಆ ಮೂರ್ಖ ಕೈಹಿಡಿದಿದ್ದಾನೆ. ಮಿತ್ರ ಕುಟುಂಬದ ಘನತೆ ಗೌರವ ಪಣಕ್ಕೊಡ್ಡಿದೆ. ನಾವೀಗ ಊರಿನ ಮಾನ ಉಳಿಸಲೇಬೇಕು.

ಇಂದು ಕೂಡ ನಾನು ತಲೆತಗ್ಗಿಸಬೇಕಾಗಿದೆ ಅಪಮಾನದಿಂದಾಗಿ. ನಮಗೆ ಅಗ್ರಸ್ಥಾನದಲ್ಲಿರುವ ಚಿಕ್ಕಪ್ಪ ಮಿತ್ರ ಅಪದ್ರಕ್ಷರು, ಪೋಷಕರು ನಮ್ಮ ಕುಟುಂಬಕ್ಕೆ, ಕುಟುಂಬದ ನಾವು ಹತ್ತೋ ಹನ್ನೆರಡೋ ಮಂದಿ, ನಮ್ಮ ಊರಿನ ವೈಭವವನ್ನು ಪುನರುರ್ಜಿತಗೊಳಿಸಲು ಅವರನ್ನು ಹಿಂಬಾಲಿಸಿದೆವು.

ಮೃತ್ಯುಂಜಯನ ಮನೆ ಬಳಿಗೆ ನಾವು ಬಂದಾಗ್ಗೆ ಸೂರ್ಯ ಆಗಷ್ಟೆ ಮುಳುಗಿದ್ದ. ವರಾಂಡದ ಮೂಲೆಯೊಂದರಲ್ಲಿ ಆ ಹೆಂಗಸು ರೊಟ್ಟಿ ಸುಡುತ್ತಿದ್ದಳು. ದೊಣ್ಣೆ ಹಿಡಿದಿದ್ದ ನಮ್ಮ ಗುಂಪಿನ ಬಹಳಷ್ಟು ಮಂದಿ ನೋಡಿ ಆಕೆಯ ಮುಖ ವಿಷಣ್ಣವಾಯಿತು.

ಚಿಕ್ಕಪ್ಪ ರೂಮಿನೊಳಗೆ ಇಣುಕಿದರು. ಮೃತ್ಯುಂಜಯ ಹಾಸಿಗೆ ಮೇಲೆ ಮಲಗಿದ್ದ. ಶಿಷ್ಟಾಚಾರ ಬಿಟ್ಟು ರೂಮಿನ ಚಿಲಕ ಹೊರಗಡೆಯಿಂದ ಭದ್ರಪಡಿಸಿದ. ಚಿಕ್ಕಪ್ಪ ಆದಾಗಲೆ ಭಯದಿಂದ ತತ್ತರಿಸಿ ಅರ್ಧಸತ್ತು ಹೋಗಿದ್ದ ಆಕೆಯನ್ನು ಮಾತನಾಡಿಸಿದ. ಆಗ ಆಕೆ "ನಿಮಗೆ ಗೊತ್ತಾ, ನಮ್ಮ ತಂದೆ ಇವರಿಗೆ ನನ್ನನ್ನು ಕೊಟ್ಟು ಲಗ್ನ ಮಾಡಿದ್ದಾರೆ ಅಂತ?" ಎನ್ನುತ್ತ ತನ್ನ ಹುಬ್ಬೇರಿಸಿ ಪ್ರತಿಭಟಿಸಿದಳು.

"ಇರಬಹುದು" ಎಂದು ಅಬ್ಬರಿಸಿದ ಚಿಕ್ಕಪ್ಪ ಆಮೇಲೆ ನಾವೆಲ್ಲ ಅವಳ ಮೇಲೆ ಆಮರಿಕೊಂಡೆವು. ಹೀರೋಗಳ ತರಹ ಬೊಬ್ಬೆ ಹಾಕುತ್ತ ಒಂದು ಚೀತ್ಕಾರದೊಂದಿಗೆ ಆ ಹೆಂಗಸು ಸಂಪೂರ್ಣ ನಿಶ್ಶಬ್ದಗೊಂಡಳು. ತದನಂತರ ಊರಿನಿಂದ ಅವಳನ್ನು ನಾವು ಹೊರದಬ್ಬಲು ಶುರುವಾಗುತ್ತಿದ್ದಂತೆ ಆಕೆ ಸೆರಗೊಡ್ಡಿ ಅಂಗಲಾಚುತ್ತಾ: "ಒಂದೇ ಒಂದು ನಿಮಿಷ ಮಾರಾಯ್ರೇ, ನಿಮ್ಮ ದಮ್ಮಯ್ಯ ಅಂತೀನಿ ಸ್ವಾಮಿ, ನನ್ನ ಬಿಡಿ, ಅವರಿಗೆ ರೊಟ್ಟಿ ಕೊಡಬೇಕು. ಅವರು ಹಾಸಿಗೆ ಹಿಡಿದವರೆ, ಇಡೀ ರಾತ್ರಿ ಪೂರಾ ಹೊಟ್ಟೆಗೆ ಏನೂ ತಿಂದಿಲ್ಲ."

ನಾಲ್ಕು ಗೋಡೆಗಳ ಮಧ್ಯೆ ಬಂದಿಯಾಗಿದ್ದ ಮೃತ್ಯುಂಜಯ ಶತಪಥ ಹೆಜ್ಜೆ ಹಾಕುತ್ತ ಹೊರಗಿನಿಂದ ಚಿಲಕ ಹಾಕಿದ ಬಾಗಿಲನ್ನು ಒದೆಯುತ್ತಿದ್ದ ಒಂದೇ ಸಮನೆ. ಅವನನ್ನು ನಾವು ಒಂದಿಷ್ಟು ಕ್ಯಾರೆ ಅನ್ನದೆ ಅವಳನ್ನು ಎಳೆತಂದೆವು ನಮ್ಮ ಸಂಗಡ.

'ನಾವು' ಎಂದು ನಾನು ಹೇಳುವೆ, ಏಕೆಂದರೆ ಘಟನೆಯ ಸಂದರ್ಭ ಪೂರಾ ನಾನು ಅಲ್ಲಿದ್ದೆ. ಆದರೆ ನನ್ನಲ್ಲೇನೋ ಒಂದು ಬಗೆಯ ದೌರ್ಬಲ್ಯವಿದ್ದ ಕಾರಣ, ನಾನು ಅವಳ ಮೇಲೆ ಕೈಮಾಡಲಿಲ್ಲ.

ಮತ್ತೊಂದು ವರ್ಷ ಉರುಳಿತು. ಸೊಳ್ಳೆ ಕಾಟ ಇನ್ನೂ ಹೆಚ್ಚು ತಡೆಯಲಾರದೆ, ನನ್ನ ಸಂನ್ಯಾಸಿ ಜೀವನಕ್ಕೆ ವಿದಾಯ ಹೇಳಿ ಮನೆಗೆ ವಾಪಸ್ಸಾದೆ. ಒಂದು ಮಧ್ಯಾಹ್ನ ಸುಮಾರು ಎರಡು ಮೈಲಿ ದೂರದಲ್ಲಿದ್ದ ಹಾವಾಡಿಗನ ಕುಟೀರದ ಎದುರು ಹಾದುಹೋಗುತ್ತಿರಬೇಕಾದರೆ ಮೃತ್ಯುಂಜಯ ಕುಟೀರದ ಬಾಗಿಲಲ್ಲಿ ಕುಕ್ಕರಗಾಲಲ್ಲಿ ಕುಳಿತು ಕೆಮ್ಮುತ್ತಿದ್ದ ದೃಶ್ಯ ದಿಢೀರನೇ ಕಣ್ಣಿಗೆ ಬಿತ್ತು. ಅವನ ತಲೆಯ ಮೇಲೊಂದು ಕೇಸರಿ ಬಣ್ಣದ ಮುಂದಾಸು, ಕೊರಳಲ್ಲಿ ರುದ್ರಾಕ್ಷಿ ಮಾಲೆ ನೇತಾಡುತ್ತಿತ್ತು, ಕಾಯಸ್ಥನ ಮಗನೋರ್ವ ತನ್ನ ಜಾತಿ ಬಿಟ್ಟು ಹಾವಾಡಿಗನಾಗಿದ್ದ.

ಹೃತ್ಪೂರ್ವಕ ಸ್ವಾಗತವನ್ನು ಕೋರಿದ ನನಗೆ. ಬಿಲಾಸಿ ಕೂಡ, ಕೊಳದಿಂದ ನೀರು ತರಲು ಹೋಗಿದ್ದವಳು ನನ್ನ ಕಂಡೊಡನೆ ತುಂಬಾ ಖುಷಿಪಟ್ಟಳು. ನೀವು ಅಂದು ರಾತ್ರಿ ಇಲ್ಲದಿದ್ದರೆ ಅವರು ನನ್ನನ್ನು ಮುಗಿಸಿಬಿಡುತ್ತಿದ್ದರು! ನನ್ನಿಂದಾಗಿ ನೀವೆಷ್ಟು ತೊಂದ್ರೆಗೆ ಸಿಕ್ಕಿಹಾಕಿಕೊಂಡಿರಿ! ಹೀಗೆಂದು ಇನ್ನೂ ಏನೇನೋ ಹೇಳುತ್ತಲೇ ಇದ್ದಳು.

ಆ ಘಟನೆಯ ಮರುದಿನವೇ ಅವರು ಇಲ್ಲಿಗೆ ಬಂದರೆಂದು ತಿಳಿದುಕೊಂಡೆ. ಆಮೇಲೆ ಇಲ್ಲಿ ಅವರು ಮನೆ ಕಟ್ಟಿಕೊಂಡು ಸುಖವಾಗಿ ನೆಲೆಸಿದ್ದಾರೆ. ಅವರ ನೆಮ್ಮದಿ ಬಗೆಗೇನೂ ನಾನು ಕೇಳಿಕೊಳ್ಳಬೇಕಿರಲಿಲ್ಲ, ಅದು ಅವರ ವದನದಲ್ಲಿ ಕಾಣಿಸಿತು ನನಗೆ.

ಅಂದು ಅವರು ಹಾವು ಹಿಡಿಯಲು ಹೋಗುವ ಸಿದ್ಧತೆಯಲ್ಲಿದ್ದರು. ಪ್ರತಿಯಾಗಿ ಕಮಿಷನ್ ದೊರೆಯುತ್ತಿತ್ತು, ನಾನೂ ಅವರ ಸಂಗಡ ಜೊತೆಗೂಡಲು ತುದಿಗಾಲಲ್ಲಿ ನಿಂತೆ. ಬಾಲ್ಯದಿಂದಲೂ ನನಗೆರಡು ಹೆಬ್ಬಯಕೆಗಳಿದ್ದವು, ಅದೇ ನಾಗರಹಾವನ್ನು ಪಳಗಿಸುವುದು, ಆ ಕೈಕಸ... ಕೈ ಚಳಕದ ಅದ್ವರ್ಯನಾಗುವುದು, ಆಮೇಲೆ ... ಮೃತ್ಯುಂಜಯ ಗುರುವಾಗಿ ಲಭಿಸಲಿರುವನೆಂದು ತಿ... ಹೆಮ್ಮೆಯಿಂದ ಉಬ್ಬಹೋದೆ ಅಪಾರವಾಗಿ.

ಅವರೀರ್ವರೂ ಆಕ್ಷೇಪವೆತ್ತಿದರು; ಹಾ... ಹಿಡಿಯುವುದು ಸುಲಭದ ಕೆಲಸವಲ್ಲ, ಅಪಾಯ... ಕೂಡಿದೆ. ಆದರೂ ನಾನು ಅದನ್ನು ಮಾಡಲೇಬೇಕ... ಪಟ್ಟು ಹಿಡಿದ ಪರಿಣಾಮ, ಮೃತ್ಯುಂಜಯ ... ತಿಂಗಳೊಳಗೆ ನನ್ನನ್ನು ತನ್ನ ಶಿಷ್ಯನನ್ನಾಗಿ ಮಾಡಿಕೊ... ಕಟ್ಟುಬಿದ್ದ. ಹಾವು ಹಿಡಿವ ಸೂತ್ರ ಕಲಿತ ಮೇಲೆ ತೋಳಿಗೊಂದು ತಾಯಿತ ಕಟ್ಟಿದ, ಬಳಿಕ ಶೀ... ನಾನು ಪೂರ್ತಿ ಪರಿಪೂರ್ಣ ಹಾವಾಡಿಗನೆನಿಸಿಕೊಂ...

ನನಗೆ ನೆನಪುಳಿದ ಸೂತ್ರದ ಕನೆಯ ಕ... ಸಾಲುಗಳಿವು:

ಓ ನಾಗರಾಜನೇ, ಮಾನಸ ಗಿರಿಯ ಮಾರ್ತಾ...
ಓ ತಾಯಿ ಮಾನಸ,
ಇಳೆಯನ್ನು ಮಥಿಸು, ಇಳೆಯನ್ನು ಭೇದಿಸು,
ದ್ರೋಣನ ವಿಷ ಸ್ವೀಕರಿಸಿ,
ನಿನ್ನದನ್ನು ನೀಡವಗೆ,
ಹೊ ದುಧ್‌ರಾಜ್, ಮಣಿರಾಜ್,
ಯಾರ ಆಜ್ಞೆ ಇದು?
ಬಿಷಹಾರಿಯ ಆಜ್ಞೆ ಇದು.

ಆ ಸೂತ್ರದ ಅರ್ಥ ನನಗೇನೂ ತಿಳಿಯದು, ಒಮ್ಮೆ ಅದನ್ನೂ ಒರೆಗೆ ಹಚ್ಚುವ ದಿನ ಎದುರಾ... ಹಾವು ಹಿಡಿಯುವ ಕಾಯಕದಲ್ಲಿ ಇಡೀ ಜಿಲ್ಲೆಯಾ... ನನ್ನ ಖ್ಯಾತಿ ಹಬ್ಬಿತ್ತು, ಖುಷಿಯಿಂದ ಅದೇ ಗುಂಗಿನ... ನೇರ ಓರ್ವ ಭರ್ಜರಿ ಆಸಾಮಿ ನಾನು! ಕಾಮಾಖ್... ಸಂನ್ಯಾಸಿಯಾಗಿದ್ದ ದಿನಗಳಲ್ಲಿ ಕಣ್ಕಟ್ಟುವ ರಹಸ್ಯವನ್ನು ... ಬಂದಿರುವೆನೆಂದು ಅವರೆಲ್ಲ ನಂಬಿದ್ದರು.

ಆದರೆ ಇಬ್ಬರು ಮಾತ್ರ ನನ್ನನ್ನು ಗಂಭೀರವಾಗಿ ... ತೆಗೆದುಕೊಂಡಿರಲಿಲ್ಲ. ನನ್ನ ಗುರು ನನಗೆ ಒಳ್ಳೆ... ಯಾವುದು ಕೆಟ್ಟದ್ದು ಯಾವುದು ಎಂದು ಎಂದೂ ಹೇ... ಬಿಲಾಸಿ ಸಹ. ಕೆಲವೊಮ್ಮೆ ಮುಗುಳುನಗೆ ಸೂ... "ಇವು ತುಂಬಾ ಅಪಾಯಕಾರಿ ವಿಷಜಂತುಗಳು, ... ಹಿಡಿಯುವಾಗ ಬಹು ಜಾಗರೂಕರಾಗಿರು." ಆದ... ಈಗಲೂ ಸಹ, ಯೋಚಿಸಿದೊಡನೆ ನನಗೆ ನಡುಕ ಬ... ನಾನೆಷ್ಟು ಅವುಗಳೊಡನೆ ಅಜಾಗರೂಕತೆಯಿಂದೆದ್ದೆ ... ನೆನಸಿ.

ಈ ಬಗ್ಗೆ ಸತ್ಯಸಂಗತಿ ಏನೆಂದರೆ ಹಾವು ಹಿಡಿಯ... ಅಂತಹ ತಾಪತ್ರಯದ ಕೆಲಸವೇನಲ್ಲ. ಅವು ... ಅದರ ವಿಷದ ದಂತ ತೆಗೆದಿರಲಿ ಅಥವಾ ತೆ... ಇರಲಿ, ಕೆಲದಿನಗಳು ಮಟ್ಟಿಗೆ ಒಂದು ಸಾರಿ ... ಬುಟ್ಟಿಯೊಳಗೆ ಸೇರಿಸಿ ಬಿಟ್ಟರೆ ಮುಗಿಯಿತು.


ಹಾವಾಡಿಗನ ಅತ್ಯಂತ ಫಾಯಿದೆಯ ವ್ಯಾಪಾರ... ಗೆಡ್ಡೆಗಳ ಮಾರಾಟ, ಅದನ್ನು ಕಂಡೊಡನೆ ಹಾ... ಕಾಲ್ಕೀಳುತ್ತವೆ. ಆದರೆ ಅವನ್ನು ಮಾರುವ ... ಪ್ರದರ್ಶಿಸುವ ಹಾವುಗಳ ಬಾಯನ್ನು ಕಾದ ಇಕ್ಕ... ಸೀಯಬೇಕು. ಇದೇ ಟ್ರಿಕ್ಕು! ಆಮೇಲೆ, ನೀವು... ತೋರಿಸಿದರೂ ಹಾವುಗಳು ಕಂಬಿ ಕೀಳುತ್ತವೆ.

ಮೃತ್ಯುಂಜಯನಿಗೆ ಹಾವು ಹಿಡಿಯಲು ಕ... ಸಿಕ್ಕಾಗಲೆಲ್ಲ ಬಿಲಾಸಿ ಎಲ್ಲ ತರಹದ ಆಕ್ಷೇಪಣೆ... ಎತ್ತುತ್ತಿದ್ದುದನ್ನು ನಾನು ಗಮನಿಸಿದೆ. ಅವಳ ಪತಿ ಮ... ಇಲ್ಲದಿರುವಾಗ ಮಂದಿ ಅವನನ್ನು ಹುಡುಕಿಕೊಂಡು ... ಅವಳು ಅವರನ್ನು "ಅವರು ಮನೆಯಲ್ಲಿ ಇಲ್ಲ" ... ಹೇಳಿ ಸಾಗಾಕುತ್ತಿದ್ದಳು. ಆದರೆ ಹಣದ ... ಮೃತ್ಯುಂಜಯನನ್ನು ಹಾವು ಹಿಡಿಯಲು ಪ್ರೇರೇಪಿ...

ಒಂದು ದಿನ ನಾವು ಮೂರು-ನಾಲ್ಕು ... ದೂರದಲ್ಲಿದ್ದ ಓವು ಗೌಳಿಗನ ಮನೆಯೊಳಗೆ ... ಹಾವು ಹಿಡಿಯಲು ಹೋದೆವು. ಎಂದಿನಂತೆ ಬಿಲ... ನನ್ನ ಜೊತೆಗೂಡಿದಳು. ಆ ಮನೆಯೊಳಗೆ ನಾವ... ತೋಡುವ ಮುನ್ನ ತಮಗೊಂದು ಬಿಲ ಕ... ಅದರೊಳಗೆ ನಮಗ್ಯಾರಿಗೂ ಏನೊಂದು ಕಾ... ವಾದರೂ ಬಿಲಾಸಿಗೆ ಮಾತ್ರ ಒಂದು ಚೂರು ... ದೊರಕಿತು. "ಎಚ್ಚರಿಕೆ ಇರಲಿ ಕುಳಿ ತೋಡ... ಎಂದಳು ಅವಳು. "ಒಂದಕ್ಕಿಂತ ಹೆಚ್ಚು ಹಾವ... ಖಂಡಿತ ಜೋಡಿ ಹಾವೇ! ಇನ್ನೂ ಹೆ... ಇರ್ಬಹುದು."

"ಇಲ್ಲ, ಅವರು ಒಂದು ಹಾವು ಬಂದುದನ್ನು ನೋಡಿದ್ದಾರೆ" ಎಂದ ಮೃತ್ಯುಂಜಯ.

⏭




ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಸಂಸ್ಕೃತಿಯಲ್ಲಿ ಭಾವನಾತ್ಮಕ ಮೋಸಗಳು





ನಾವು ಶಾಲೆಯಲ್ಲಿ ಓದುತ್ತಿದ್ದಾಗ ದುಶ್ಯಂತ ಮತ್ತು ...ತಲೆಯ ಮಗ ಭರತನಿಂದಲೇ ನಮ್ಮ ದೇಶಕ್ಕೆ ಭಾರತ ...ು ಹೆಸರು ಬಂದಿತು ಎಂದು ಕಲಿತಿದ್ದೆವು. ಭರತನಿಂದ ...ತವರ್ಷ, ಭರತ ಖಂಡ ಎಂದಾಗಿ ಅದೇ ...ಶವಾಯಿತು ಎಂದು ಪಾಠ ಮಾಡುತ್ತಿದ್ದರು.

...ಬಾಲ್ಯದಲ್ಲಿ ನಾವು ಏನನ್ನು ಕಲಿಯುವೆವೋ ಅದನ್ನೇ ... ಮಾಡಿಕೊಂಡು ಬರುವುದು ಸಾಮಾನ್ಯ ಮನುಷ್ಯನ ...ಣಧರ್ಮ. ಯಾವ ಪರ ವಿರೋಧವೂ ಇಲ್ಲದೇ ...ಕಾರ್ಯವಾಗಿ ಕಲಿತು, ಜ್ಞಾನ ಎಂದು ಎಲ್ಲೋ ...ಬೇಕಾದರೆ ಅದನ್ನು ಮೀರುವಂತಹ ವಿಚಾರದ ...ನ್ನು ಹೆಚ್ಚಿಸಿಕೊಳ್ಳುವುದು ಅನಿವಾರ್ಯವಾಗುವುದು. ...ರೆ, ಇಲ್ಲೊಂದು ಮುಖ್ಯವಾದ ವಿಷಯ ...ವಾಗಿರುತ್ತದೆ. ಅದೇನೆಂದರೆ ಭಾವುಕತೆ.

...ನಮ್ಮ ಹಳೆಯ ಜ್ಞಾನದಿಂದ ಯಾವುದೂ ...ದರೆಯಾಗಿರದಿದ್ದ ಪಕ್ಷದಲ್ಲಿ, ಅದೆಷ್ಟೇ ಸತ್ಯವಾಗಿರಲಿ, ...ವಾಗಿರಲಿ ಅದನ್ನು ನಿರಾಕರಿಸುವುದಕ್ಕೆ ...ನಾತ್ಮಕವಾದ ತೊಡಕುಂಟಾಗುತ್ತದೆ. ಆದ್ದರಿಂದಲೇ ...ಷ್ಟು ಮಂದಿ ತಾವು ಕಲಿತಿರುವ ತಮ್ಮ ಹಳೆಯ ...ವಗಳನ್ನು ಪೋಷಿಸಲು ಬೇಕಾದ ವಿಚಾರಗಳನ್ನೇ ...ಕುವರು. ಅವನ್ನು ಸಾಧ್ಯವಾದಷ್ಟು ಸತ್ಯವೆಂದೇ ...ಲು ಹೆಣಗಾಡುವರು. ಅದಕ್ಕೆ ಪೂರಕವಾಗಿ ಹೊಸ ... ಆವಿಷ್ಕಾರದ ವಿಜ್ಞಾನದ ವಿಷಯಗಳನ್ನೂ ಕೂಡ ...ಕರಿಸುವುದು.

...ಂದು ವೇಳೆ, ಅದರಿಂದ ತಮಗೆ ತೊಂದರೆಯಾಗಿದ್ದಲ್ಲಿ, ...ರದ ಶೋಷಣೆಗೆ ಒಳಗಾಗುತ್ತಿದ್ದೇವೆ ಎಂಬ ಅರಿವು ...ದ್ದಲ್ಲಿ, ಬಹಳ ಗಟ್ಟಿ ಮನಸ್ಸು ಮಾಡಿ ಹೊರಗೆ



...ವುದೆಂದರೆ, ಜೈಲಿನಿಂದ ತಪ್ಪಿಸಿಕೊಂಡು ಬರುವ ...ದುಂತಲ್ಲ, ಕೋಶದಿಂದ ಬಿಡುಗಡೆ ಪಡೆದು ...ಹಾರುವ ಚಿಟ್ಟೆಯ ಸ್ವಾತಂತ್ರ್ಯದಂತೆ ಸುಂದರ ಮತ್ತು ... ಆದರೆ ಬಹಳಷ್ಟು ಮಂದಿ ಜೈಲಿನ ಗೋಡೆಗಳ ... ಇರುವುದಕ್ಕೇ ಬಯಸುತ್ತಾರೆಯೇ ಹೊರತು ...ವಾಗಿ ರೆಕ್ಕೆ ಬೀಸಲು ಸಿದ್ಧವಾಗಿರುವುದಿಲ್ಲ.

ಕಥೆಗಳೇಕೆ ಆಪ್ತ?

...ಶ್ಯಂತ ಮತ್ತು ಶಕುಂತಲೆಯರ ಮಗ ಭರತನು ... ಬಹುದೊಡ್ಡ ರಾಜನಾಗಿ ಇಡೀ ಭಾರತದಂತಹ ...ಖಂಡವೊಂದು ಆತನ ಹೆಸರನ್ನು ಧರಿಸಿಕೊಂಡು ...ರು ವರ್ಷಗಳ ಕಾಲ ಜೀವಂತವಾಗಿರುವುದು ಒಬ್ಬ ...ಇಲ್ಲದೇ ಬೆಳೆದ ತಾಯಿಯ ಮಗನಿಗೆ ಭಾವನಾತ್ಮಕ ...ಆಪ್ತವಾಗಿರುತ್ತದೆ.

...ರಿಂದ ಪರಿತ್ಯಕ್ತಳಾಗಿದ್ದ ಶಕುಂತಲೆ ತನ್ನೊಬ್ಬ ...ನ್ನು ಸಾಕಿ ಸಲುಹಿ ಬೆಳೆಸಿದ ಮೇಲೆ ಅವನ ತಂದೆ ... ಮುಂದೊಂದು ದಿನ ನೋಡುತ್ತಾನೆ. ಅದೂ ...ಯಲ್ಲಿ ಅಲ್ಲ, ಬಾಲಕನಾಗಿದ್ದರೂ ಶೂರನೂ, ...ನೂ, ಧೈರ್ಯವಂತನೂ ಆಗಿರುವ ಬಾಲಕ ಸಿಂಹದ ...ರುವ ಹಲ್ಲುಗಳನ್ನು ಎಣಿಸುವಷ್ಟು ತೇಜಸ್ವಿಯಾಗಿ ... ಆ ಬಾಲಕನ ಎದೆಯಲ್ಲಿ ತಂದೆಯಿಲ್ಲದೇ ಬೆಳೆದ ...ಒಬ್ಬ ತನ್ನ ತಾನು ಇರಿಸಿಕೊಳ್ಳುತ್ತಾನೆ.

...ವು ತಾವು ಶಾಲೆಯಲ್ಲಿ ಕಲಿತ ಈ ಭರತನೆಂಬ ...ೇ ದೊಡ್ಡವನಾಗಿ ಮಹಾ ಸಾಮ್ರಾಜ್ಯನಾದ ...ನು ಬಹಳ ಆಪ್ತವಾಗಿರುತ್ತದೆ. ಆದರೆ ಅವನಿಗೆ ...ಂದು ದಿನ, ಶಕುಂತಲೆಯ ಮಗ ಭರತನಿಗೂ ಮತ್ತು ಭಾರತಕ್ಕೂ ಏನೂ ಸಂಬಂಧವೇ ಇಲ್ಲ; ಇದು ಬರೀ ಕಾಗಕ್ಕ ಗುಬ್ಬಕ್ಕನ ಕಥೆ ಎಂದು ಯಾರೇ ತಿಳಿಸಿದರೂ ತನ್ನ ಭಾವನೆಗೆ ಘಾಸಿಯಾಗುವುದು ಎಂದು ಸಿಡಿಮಿಡಿಗೊಳ್ಳುತ್ತಾನೆ. ಅವನ ತಂದೆ ಇದ್ದಿರದ ಆಳದ ನೋವಿಗೆ ಅದೊಂದು ಸಾಂತ್ವನವಾಗಿರುವಾಗ ಅದನ್ನು ತ್ಯಜಿಸಲು ಸಿದ್ಧನಾಗಿರುವುದಿಲ್ಲ.

ಭರತ ಖಂಡದ ಹೆಸರು ಆರ್ಯರ ಹೆಮ್ಮೆಯ ಕುರುಹಾಗಿ ವೇದಕಾಲದ ನಂತರವೂ ಮುಂದುವರಿದಿರುವ ಭಾಗವೆಂದೂ, ಭರತವೆಂಬುದು ಸಪ್ತ ಸಿಂಧು ಪ್ರಾಂತ್ಯದಲ್ಲಿದ್ದ ಆರ್ಯರ ಬುಡಕಟ್ಟಿನ ಹೆಸರೆಂದೂ, ಅವರು ದಸ್ಯು ಮತ್ತು ಸ್ಥಳೀಯ ಬುಡಕಟ್ಟಿನವರಾದ ಕಿರಾತರ ಮೇಲೆ ದಾಳಿ ಮಾಡಿದ್ದರೆಂದೂ, ಗೆದ್ದ ಭರತ ಬುಡಕಟ್ಟಿನ ನಾಯಕ ಸುಧಾಸ ರಾಜ್ಯ ಸ್ಥಾಪನೆ ಮಾಡಿದನೆಂದೂ ತಿಳಿಸಿದರೆ ಅವನಿಗೆ ಅಷ್ಟೇನೂ ಪಥ್ಯವಾಗುವುದಿಲ್ಲ.

ಆದರೆ ಭಾರತದ ಪುರಾತನ ಲಿಖಿತ ದಾಖಲೆಯಾದ ಋಗ್ವೇದವೇ ಈ ವಿಚಾರಗಳನ್ನು ಹೇಳುತ್ತವೆ. ಋಗ್ವೇದವೇ ಆರ್ಯರು ನಡೆಸಿದ ದಾಳಿಗಳ, ಯುದ್ಧಗಳ ಮತ್ತು ಸ್ಥಳೀಯ ಬುಡಕಟ್ಟಿನವರ ಮೇಲಿನ ವಿಜಯಗಳ ಕಥೆಗಳನ್ನು ಹೇಳುತ್ತವೆ. ಇದನ್ನು ವ್ಯಕ್ತಿಗತವಾಗಿ ಭಾವನಾತ್ಮಕವಾಗಿ ಕಥೆಗಳನ್ನು ಒಪ್ಪಿಕೊಂಡವನಿಗೆ ಸಮ್ಮತಿಸಲು ತೀರಾ ಕಷ್ಟವಾಗುತ್ತದೆ. ಬಹಳಷ್ಟು ಸಲ ಭಾವನೆಗಳಿಗೂ ಮತ್ತು ವಿಚಾರಗಳಿಗೂ ತಾಕಲಾಟ ಬಂದಾಗ ಗೆಲ್ಲುವುದು ಭಾವನೆಗಳೇ.

ಇಂತಹ ಭಾವನೆಗಳಿಂದಲೇ ಬ್ರಾಹ್ಮಣ್ಯವು ಈ ನೆಲದ ಜನರನ್ನು ತನ್ನ ಅಧೀನಕ್ಕೆ ಒಳಮಾಡಿಕೊಂಡಿದ್ದು. ಇಂತಹ ಭಾವನಾತ್ಮಕ ಸಂಮೋಹನಕ್ಕೆ ಒಳಪಡಿಸಲು ಅವರು ಬಳಸಿಕೊಂಡ ಪರಿಕರಗಳೆಂದರೆ ಕಥೆಗಳು, ಸಂಗೀತ, ನೃತ್ಯ ಮತ್ತು ಅತೀಂದ್ರಿಯ ಶಕ್ತಿಗಳ ಪರಿಕಲ್ಪನೆಗಳ ಭಯ ಹಾಗೂ ಆಸೆಗಳು.

ಕಲೆಗಳ ಸಂಮೋಹನ

ಮತ್ತಿನ್ನೇನೋ ಆಗಿ ಹೊರಹೊಮ್ಮಬಹುದಾಗಿದ್ದ ಈ ನಾಡಿನ ಸಂಸ್ಕೃತಿಯ ಪೂರ್ತಿ ರಾಮ, ಕೃಷ್ಣ ದೇವಿ, ಸರಸ್ವತಿ, ಲಕ್ಷ್ಮಿಯರೇ ತುಂಬಿಹೋಗಿರುವುದು ಹೀಗೆಯೇ. ಪ್ರತಿಯೊಂದೂ ಸಾಹಿತ್ಯ ಮತ್ತು ಸಂಗೀತವೇ ಮೊದಲಾದ ಪ್ರದರ್ಶಕ ಕಲೆಗಳ ಮೂಲಕ ಜನಮಾನಸದಲ್ಲಿ ಬೇರುಬಿಡಿಸುವುದರಲ್ಲಿ ಅತ್ಯಂತ ಯಶಸ್ವಿಯಾಗಿದ್ದಾರೆ.

ಧರ್ಮ, ದೇವರು, ಮೂಲನಿವಾಸಿ ಇತ್ಯಾದಿ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ವಿಷಯಗಳನ್ನು ಬಿಟ್ಟು ಸಾಮಾಜಿಕವಾಗಿಯೂ ನುಸುಳಿರುವಂತಹ ಪರಿಕಲ್ಪನೆಗಳನ್ನು ಗಮನಿಸಿ.

ಸುಂದರವಾದ ಪುಟ್ಟ ಹುಡುಗಿ ಅಥವಾ ಹುಡುಗನನ್ನು ನೋಡಿದಾಕ್ಷಣವೇ ರಾಜಕುಮಾರಿ ಅಥವಾ ರಾಜಕುಮಾರ ಎಂದು ಉದ್ಗರಿಸುತ್ತಾರೆ. ರಾಜಕುಮಾರ ಇದ್ದ ಹಾಗಿದ್ದಾನೆ ಅಥವಾ ರಾಜಕುಮಾರಿ ಇದ್ದಹಾಗೆ ಇದ್ದಾಳೆ ಎಂದು ಹೇಳುವುದರಲ್ಲಿರುವ ಭಾವವನ್ನು ಗಮನಿಸಿ. ಸೌಂದರ್ಯ, ತೇಜಸ್ಸು, ಅದೊಂದು ರೀತಿಯ ಸಾಮಾನ್ಯತೆಯಿಂದ ಬೇರಾಗಿಯೇ ಕಾಣುವಂತಹ ಧೀಮಂತಿಕೆಯು ರಾಜಕುಮಾರ, ರಾಜಕುಮಾರಿಯಲ್ಲಿರುವುದು ಎಂಬ ಭಾವನೆ ಬೇರೂರಿದೆ. ರಾಜಕುಮಾರೇತರರಲ್ಲಿ ಸೌಂದರ್ಯವಿರುವುದಿಲ್ಲವೇ? ಧೀಮಂತಿಕೆಯ ಭಾವವಿರುವುದಿಲ್ಲವೇ? ಸಾಮಾನ್ಯ ಮಗುವನ್ನು ರಾಜ ಪದವಿಗೆ ಏರಿಸುವ ಮೂಲಕ ತಮ್ಮ ಪ್ರಶಂಸೆಯನ್ನು ತೋರುವ ಮಂದಿಗೆ ತಮ್ಮನ್ನು ತಾವು ಅಪಮಾನಿಸಿಕೊಳ್ಳುತ್ತಿದ್ದೇವೆಂಬ ಸೂಕ್ಷ್ಮತೆ ಇರಲಾರದು ಅಥವಾ ಇದನ್ನು ಹೇಳುವವರು ಅತಿಯಾಗಿ ವಿಚಾರ ಮಾಡುತ್ತಿದ್ದಾರೆ ಎಂದು ಅನಿಸುತ್ತದೆ.

ರಾಜರನ್ನು, ರಾಜಕುಮಾರರನ್ನು ಎತ್ತರದ ಸ್ಥಾನದಲ್ಲಿ ಇರಿಸಿರುವುದರಿಂದಲೇ ಹಾಗಾಗಿರುವುದಲ್ಲದೇ, ತಮ್ಮ ಸ್ತರ ಮತ್ತು ಸ್ಥಾನದಿಂದ ಉನ್ನತಕ್ಕೆ ಏರಬೇಕೆಂಬ ಆಕಾಂಕ್ಷೆ ಯಾವಾಗಲೂ ರಾಯಗದ್ದುಗೆಯನ್ನು ಕಲ್ಪಿಸಿಕೊಳ್ಳುವಂತೆ ಮಾಡುತ್ತದೆ.

ನಾಯಕರಿಗೆ ರಾಜತ್ವದ ಗೀಳು

ಈಗಲೂ ನಮ್ಮಲ್ಲಿ ಅನೇಕ ನಾಯಕರಿಗೆ ನಾಯಕತ್ವ ಗುಣಧರ್ಮ ಅರ್ಥವಾಗಿರುವುದಿಲ್ಲ. ಅವರು ನಾಯಕರೆಂದ ಮಾತ್ರಕ್ಕೆ ಹಿಂಬಾಲಕರ ಪಡೆಯ ಮುಂದಿದ್ದು, ವಂದಿಮಾಗಧರಿಂದ , ಹೊಗಳಿಸಿಕೊಂಡು, ಜಯಘೋಷಗಳನ್ನು ಹಾಕಿಸಿಕೊಂಡು ಅದೇ ರಾಜ ಮರ್ಯಾದೆಯಲ್ಲಿ ಗದ್ದುಗೆಯಲ್ಲಿ ಪ್ರತಿಷ್ಠಾಪಿತವಾಗಿರುವಂತಹ ಗೀಳೇ ಇರುತ್ತದೆ. ನಾಯಕನೆಂಬುವುದು ಜಯಕಾರಕ್ಕೆ ಒಳಗಾಗಬೇಕಾಗಿಲ್ಲ. ಮೆರವಣಿಗೆ ಹೋಗಬೇಕಿಲ್ಲ. ಹಿಂಬಾಲಕರ ಪಡೆಯನ್ನು ಕಟ್ಟಿಕೊಂಡಿರುವುದು ಬೇಕಿಲ್ಲ. ತನ್ನನ್ನು ಟೀಕಿಸಿದವರ, ವಿಮರ್ಶಿಸಿದವರ ಬಗ್ಗುಬಡಿಯಲು ಮಂದಿಯು ಮುನ್ನಗ್ಗಬೇಕಾಗಿಲ್ಲ. ಅವನದೊಂದು ಸಿದ್ಧಾಂತ, ಅವನ ಕೆಲಸಗಳಿಗೊಂದು ಕಾರಣ, ಅದಕ್ಕೆ ಸ್ಪಷ್ಟತೆ, ಅದರ ಯೋಜನೆಗಳ ಬಗ್ಗೆ ಪೂರ್ಣ ಅರಿವು ಹಾಗೂ ನಿಖರತೆಗಳಿದ್ದು, ಅದೇ ದಾರಿಯಲ್ಲಿ ಮತ್ತು ಗುರಿಗಳ ಕಡೆ ಮುಖಮಾಡಿರುವವರ ಮುಂಚೂಣಿಯಲ್ಲಿರುತ್ತಾನೆ. ಅವನಿಗೆ ಅನುಭವ ಅಥವಾ ಅರಿವು ಇವುಗಳ ಗುಣಧರ್ಮದಿಂದ ತಿಳಿವಳಿಕೆ ಮತ್ತು ಸೂಚನೆಗಳನ್ನು ನೀಡುವ ಸಾಮರ್ಥ್ಯವನ್ನು ಹೊಂದಿರುತ್ತಾನೆ. ಹಾಗೆ ನೀಡುವ ಅವನಲ್ಲಿಯೂ, ಪಡೆಯುವವರಲ್ಲಿಯೂ ಸಾಮಾನ್ಯವಾಗಿರುವ ಗುಣವೆಂದರೆ ವಿನಯ ಮತ್ತು ಸಮಾನತೆ. ತಾವು ಯಾವ ಕಾರಣಕ್ಕೂ ಮೇಲಲ್ಲ, ಹಾಗೆಯೇ ಕೀಳಲ್ಲ ಎನ್ನುವಂತಹ ಆದರೆ ತಮ್ಮ ಇತಿಮಿತಿಯ ಅರಿವಿನಲ್ಲಿ ಬಾಗುವ, ಒಪ್ಪುವ ಗುಣಗಳನ್ನು ಹೊಂದಿರುವುದು ಮುಖ್ಯವಾಗುತ್ತದೆ.

ತಮ್ಮದೇ ನೆಲೆಗಟ್ಟಿನಲ್ಲಿ, ತಮ್ಮದೇ ಗುಣಮಟ್ಟದಲ್ಲಿ ಉನ್ನತವಾಗುವುದು ಎಂದರೆ ಅವರಿಗೆ ಅರ್ಥವಾಗುವುದಿಲ್ಲ. ಬಡವನೊಬ್ಬ ಅವನ ಸರಳತೆಯಲ್ಲಿ ಉನ್ನತಿಗೇರುವನು ಎಂಬ ಅರಿವು ಬಹಳ ದೂರದ ಮಾತು. ಬಡವನೊಬ್ಬ ಔನ್ನತ್ಯಕ್ಕೇರಬೇಕಾದರೆ ಅವನು ಶ್ರೀಮಂತನಾಗಬೇಕು ಎಂಬುದೇ ಸಾಮಾನ್ಯ ಸಾಮಾಜಿಕ ವಿಕಾಸವಾದ.

ಇಂತಹ ಸಾಮಾಜಿಕ ವಿಕಾಸವಾದದಿಂದ ಆಳುವ ಅರಸರೂ ಹೊರತಾಗಿರಲಿಲ್ಲ. ತಾವೇ ರಾಜ್ಯವ್ಯವಸ್ಥೆಯ ಉನ್ನತ ಸ್ಥಾನದಲ್ಲಿರುವಾಗ ಅದಕ್ಕಿಂತ ಉನ್ನತ ಸ್ಥಾನವೆಂದು ಬಗೆಯಬಹುದಾದರೆ ಅದು ದೈವತ್ವವೇ ಆಗಿತ್ತು. ಹಾಗಾಗಿಯೇ ರಾಜಾ ಪ್ರತ್ಯಕ್ಷ ದೈವತಾಃ ಎಂದು ಪುರೋಹಿತರು ರಾಜರ ಪಾಲಿನ ಅರ್ಚಕರಾದರು. ಪುರೋಹಿತರೆಂಬ ವರ್ಗದ ಉದರ ಪೋಷಣೆಯಷ್ಟೇ ಆಗದೇ ಬ್ರಾಹ್ಮಣ್ಯದ ಮೇಲುಗೈ ಸಾಧಿಸಲೂ ಅದು ನೆರವಾಯಿತು.

ದೇವತೆಗಳೆಂಬ ರಾಜರ ನಕಲು

ದೇವರನ್ನು ನೋಡಿ ರಾಜರು ಕಿರೀಟಧಾರಿಗಳಾದುದಲ್ಲ. ರಾಜರನ್ನು ನೋಡಿ ದೇವತೆಗಳ ಚಿತ್ರಗಳನ್ನು ಬಿಡಿಸಿದ್ದು. ಚಲುವ ನಾರಾಯಣನಾಗಲಿ, ಚೆಲುವರಾಯ ಸ್ವಾಮಿಯಾಗಲಿ, ಬಿಳಿಗಿರಿ ರಂಗನಾಗಲಿ ದೈವತ್ವಕ್ಕೆ ಏರಿಸಲ್ಪಟ್ಟಂತಹ ಸ್ಥಳೀಯ ಆಳರಸರೇ.


ಅತಿಮಾನವ ಮತ್ತು ಅತೀಂದ್ರಿಯ ಶಕ್ತಿಗಳನ್ನು ನಂಬಿ, ಅವುಗಳ ಬಲದಿಂದ ತಮ್ಮ ಸ್ಥಾನ, ಸಂಪತ್ತುಗಳನ್ನು ಉಳಿಸಿಕೊಳ್ಳುವ ಅನಿವಾರ್ಯತೆ ರಾಜರಿಗೆ ಅದೆಷ್ಟಿತ್ತೋ, ಬ್ರಾಹ್ಮಣ್ಯಕ್ಕೂ ತಮ್ಮ ಮೇಲುಗೈಯನ್ನು ಉಳಿಸಿಕೊಳ್ಳುವ ಅವಕಾಶವೂ ಅದರೊಂದಿಗೇ ಅಷ್ಟೇ ಇತ್ತು.

ಅದರಿಂದಲೇ ಭವಿಷ್ಯಗಳನ್ನು ಹೇಳುವ, ದೋಷ ಪರಿಹಾರಗಳನ್ನು ಹೇಳುವ, ಶಾಂತಿ, ಮಾಟ ಮತ್ತು ಪ್ರತಿಮಾಟ ಮಾಡಿಸುವಂತಹ ಗೀಳು ಬ್ರಾಹ್ಮಣರಿಗೆ ನಿಷಿದ್ಧವಿದ್ದರೂ ಬ್ರಾಹ್ಮಣ್ಯದ ಔನ್ನತ್ಯಕ್ಕೆ ಅಗತ್ಯವಿದ್ದುದರಿಂದ ಮಾಟ ಮಂತ್ರದಂತಹ ಅಬ್ರಾಹ್ಮಣ ವಿಧಿಗಳನ್ನು ಬ್ರಾಹ್ಮಣರು ಅಳವಡಿಸಿಕೊಂಡರು. ಅದಕ್ಕೆ ಅವರಿಗೆ ಇದ್ದಂತಹ ಬಹಳ ಉಪಯುಕ್ತವಾದಂತಹ ಶಾಸ್ತ್ರವೆಂದರೆ ಅದು ಜ್ಯೋತಿರ್ಶಾಸ್ತ್ರ

ಜ್ಯೋತಿಷ್ಯಕ್ಕೂ ಜ್ಯೋತಿರ್ಶಾಸ್ತ್ರಕ್ಕೂ ವ್ಯತ್ಯಾಸವಿದೆ. ಆದರೆ ಅವುಗಳಿಗೆ ವ್ಯತ್ಯಾಸವೇ ಇಲ್ಲದಂತೆ ಖಗೋಳ ಶಾಸ್ತ್ರದ ವಿದ್ಯೆಯನ್ನು ಜ್ಯೋತಿಷ್ಯಕ್ಕೆ ಜೋಡಿಸಿದ ಅಪ್ರತಿಮ ಕಿಲಾಡಿತನ ಬ್ರಾಹ್ಮಣ್ಯದ್ದು. ಅದರ ಬಗ್ಗೆ ಮುಂದೆ ನೋಡುವ. ■



ದೇವರಿಗೇ ನ್ಯಾಯ ಕೊಡಿಸಲು ಮುಂದಾಗಿರುವ ಪೆದ್ದರು



ಧರ್ಮಸ್ಥಳ ಕ್ಷೇತ್ರದ ಆಡಳಿತದಲ್ಲಿರುವ ಕೆಲವರ ಬಗ್ಗೆ ನಾಗರಿಕ ಸೇವಾ ಟ್ರಸ್ಟ್‌ನವರು ಮಾಡಿರುವ ಆರೋಪಗಳ ವಿರುದ್ಧ ಮೊನ್ನೆ ಹಿಂದೂ ಸ್ವಾಮೀಜಿಗಳೆಲ್ಲಾ ಒಟ್ಟಾಗಿ ಗುರುವಾಯನಕೆರೆಯಲ್ಲಿ ಜನಜಾಗೃತಿ ಸಭೆ ನಡೆಸಿದರು. ಈ ಸಭೆಯಲ್ಲಿ ಜನರು ನೂರಾರು ಬ್ಯಾನರ್ ಹಿಡಿದುಕೊಂಡಿದ್ದರು. ಆ ಬ್ಯಾನರ್‌ಗಳಲ್ಲಿ ಬರೆದಿದ್ದೇನೆಂದರೆ 'ಮಂಜುನಾಥ ಸ್ವಾಮಿಗೆ ಜಯವಾಗಲಿ', 'ಅಣ್ಣಪ್ಪ ಸ್ವಾಮಿಗೆ ಜಯವಾಗಲಿ', 'ಧರ್ಮದೇವತೆಗಳಿಗೆ ಜಯವಾಗಲಿ', 'ನ್ಯಾಯಕ್ಕೆ ಜಯವಾಗಲಿ' ಇತ್ಯಾದಿ. ಇಲ್ಲಿ ಮಂಜುನಾಥ ದೇವರಿಗೆ ಜಯವಾಗಲಿ ಎಂದರೆ ಯಾರ ವಿರುದ್ಧ ಜಯ ವಾಗಲಿ ಎಂಬ ಪ್ರಶ್ನೆ ಏಳುತ್ತದೆ. ಮಂಜುನಾಥ ಸ್ವಾಮಿ, ಅಣ್ಣಪ್ಪ ಸ್ವಾಮಿ ಅಥವಾ ಜೈನ ಧರ್ಮದೇವತೆಗಳು ಯಾವುದಾದರೂ ಚುನಾವಣೆಗೆ ನಿಂತಿದ್ದಾರೆಯೇ? ಅಥವಾ ಕ್ರಿಕೆಟ್ ಆಡುತ್ತಿದ್ದಾರೆಯೇ?



ಸರ್ವಶಕ್ತ ದೇವರಿಗೆ ಯಃಕಶ್ಚಿತ್ ಮನುಷ್ಯರ ಸಹಾಯದಿಂದ ಅಥವಾ ಜಯಘೋಷದಿಂದ ವಿಜಯ ಆಗಬೇಕೆಂದೇನಿಲ್ಲ, ಕಾರಣ ದೇವರಿಗೆ ಎದುರಾಳಿಗಳು ಎಂಬುದೇ ಇಲ್ಲ. ಪುರಾಣಕಾಲದಲ್ಲಿಯೂ ರಾಕ್ಷಸರು ಎಂಬ ವೈರಿಗಳು ಇದ್ದಿದ್ದು ಸಹ ಶುದ್ಧ ಸುಳ್ಳು! ರಾಕ್ಷಸರು ಎಂಬ ಜೀವಿಗಳೇ ಈ ಜಗತ್ತಿನಲ್ಲಿ ಎಂದೂ ಇರಲಿಲ್ಲ, ಹಾಗಾಗಿ ಈ ಕಾಲ್ಪನಿಕ ದೈತ್ಯ ಜೀವಿಗಳ ವಿರುದ್ಧ ಯುದ್ಧ ಮಾಡಿ ದೇವರು ಗೆಲ್ಲಬೇಕಾದ ಸಂದರ್ಭವೇ ಇರಲಿಲ್ಲ, ವಿಚಾರವಾದಿಗಳು ಮತ್ತು ನಾಸ್ತಿಕರು ಸಹ ದೇವರಿಗೆ ವೈರಿಗಳಲ್ಲ, ಅವರೂ ಯಃಕಶ್ಚಿತ್ ಮಾನವರು. ದೇವರಿಗೆ ನಿಜವಾಗಿ ಅವರ ಮೇಲೆ ಸಿಟ್ಟಿದ್ದರೆ ರೋಗ- ರುಜಿನ ಬರಿಸಿ ಸುಲಭವಾಗಿ ಅವರನ್ನೆಲ್ಲ ಎಂದೋ ನಿರ್ನಾಮ ಮಾಡಿ ಬಿಡುತ್ತಿದ್ದನು.

ಹಾಗಾಗಿ ಎಲ್ಲಿಯೇ ಆಗಲಿ ದೇವರಿಗೆ ಜಯವಾಗಲಿ ಎಂಬ ಘೋಷಣೆ ಹಾಕುವುದರ ಅರ್ಥ-ದೇವರು ಸರ್ವ ಶಕ್ತನಲ್ಲ ಆತನಿಗೆ ಆವನಷ್ಟೇ ಪ್ರಬಲ ಎದುರಾಳಿಗಳಿದ್ದಾರೆ, ಹಾಗಾಗಿ ಕ್ಷುಲ್ಲಕ ಮಾನವರಿಂದ ದೇವರಿಗೆ ನೈತಿಕ ಬೆಂಬಲ ಹಾಗೂ ಜಯದ ಹಾರೈಕೆಯ ಆಗತ್ಯವಿದೆ ಎಂದು ಘೋಷಿಸಿ ದೇವರನ್ನು ಅವಮಾನಿಸಿದಂತೆ ಆಗಲಿಲ್ಲವೇ? ಅಥವಾ ದೇವರಿಗೆ ಜಯ ಘೋಷ ಹಾಕುವುದರ ಅರ್ಥ ದೇವರ ಏಜಂಟರಿಗೆ ಜಯವಾಗಲಿ ಎಂದು ಇರಬಹುದೇನೋ!

ನ್ಯಾಯಕ್ಕೆ ಜಯವಾಗಲಿ ಎಂದು ಬರೆದ ಬೋರ್ಡು ಸಹ ಬಹಳಷ್ಟು 'ಬಾಡಿಗೆ ಭಕ್ತರು' ಹಿಡಿದಿದ್ದರು. ಆದರೆ ಇವರು ಸುಮ್ಮನಿದ್ದರೆ ತಾನೇ ನ್ಯಾಯಕ್ಕೆ ಜಯವಾಗಲು ಸಾಧ್ಯ. ಕೋರ್ಟ್ ಅಥವಾ ಸರಕಾರದ ತನಿಖಾ ಸಂಸ್ಥೆಗಳನ್ನು ಸರಿಯಾಗಿ ಕಾರ್ಯ ನಿರ್ವಹಿಸಲು ಬಿಟ್ಟರೆ ನ್ಯಾಯಕ್ಕೆ ಜಯ ತಾನೇ ತಾನಾಗಿ ಆಗುತ್ತದೆ. ನಿಜವಾಗಿ ಕೋರ್ಟಿನ ಮೇಲೆ ಇವರಿಗೆ ನಂಬಿಕೆ ಇಲ್ಲ, ಆದಕ್ಕಾಗಿಯೇ ಈ ಘೋಷಣೆ ಹಾಗೂ ಕಾವಿಧಾರಿಗಳ ಸಮಾ-ವೇಶ ತಾನೇ? ಆದರೆ ಈ ಘೋಷಣೆಕಾರರು ನ್ಯಾಯ ಎನ್ನುವುದು ಒಬ್ಬ ರಾಜಕಾರಣಿಯ ಹೆಸರು ಎಂದು ತಪ್ಪಾಗಿ ಭಾವಿಸಿ ಜಯಕಾರ ಹಾಕಿದಂತಿತ್ತು, ಇಷ್ಟೆಲ್ಲಾ ಭಾರಿ ಜನಜಾತ್ರೆ ಸೇರಿಸುವ ಬದಲು ಕೋರ್ಟಿಗೆ ಮತ್ತು ತನಿಖಾ ಸಂಸ್ಥೆಗಳಿಗೆ ದಾಖಲೆಗಳ ಪುರಾವೆ ಒದಗಿಸಿ ನಾಗರಿಕಸೇವಾ ಟ್ರಸ್ಟ್‌ನವರು ಮಾಡಿರುವ ಆರೋಪಗಳೆಲ್ಲಾ ಸುಳ್ಳು ಎಂದು ಸಾಬೀತುಮಾಡಿದರೆ ವಿಷಯ ಅಲ್ಲಿಗೇ ಮುಕ್ತಾಯವಾಗುತಿತ್ತು, ಆದರೆ ಕಾವಿಧಾರಿಗಳ ಹತ್ತಿರ ಪುರಾವೆಗಳು ಇಲ್ಲದೇ ಇರುವುದರಿಂದ ಹಾಗೂ ನಾಗರಿಕ ಸೇವಾ ಟ್ರಸ್ಟಿನವರ ಕೈಮೇಲಾಗಿರುವುದರಿಂದ ಹೀಗೆ ಕಾಸು ಕೊಟ್ಟು ಜನರನ್ನು ಸೇರಿಸಿ ರೋಡ್ ಶೋ ಮಾಡಿ ತಮ್ಮ ಜನಬಲ ಮತ್ತು ತೋಳ್ಬಲ ತೋರಿಸಿ ನಾಗರಿಕ ಸೇವಾ ಟ್ರಸ್ಟಿನವರ ಸಾಕ್ಷ-ಪುರಾವೆಗಳನ್ನು ಗೌಣವಾಗಿಸಿ ಕೋರ್ಟನ್ನು ತಪ್ಪು ದಾರಿಗೆಳೆಯುವ ತಂತ್ರವಿರುವಂತೆ ಕಾಣುತ್ತಿದೆ.

ಈ ಗುರುವಾಯನಕೆರೆ ಸಮಾವೇಶಕ್ಕೆ ಕಾವಿಧಾರಿಗಳು ಎಲ್ಲಾ ಪಕ್ಷದ ಸ್ಥಳೀಯ ಶಾಸಕ, ಸಂಸದ ಹಾಗೂ ಗ್ರಾಮ ಪಂಚಾಯತ್ ಸದಸ್ಯರನ್ನು ಆಹ್ವಾನಿಸಿದ್ದರು. ಆದರೆ ಯಾವ ರಾಜಕೀಯ ನೇತಾರನೂ ಸಮಾವೇಶಕ್ಕೆ ಬಾರದಿರುವುದು ನಮ್ಮ ಕರಾವಳಿಯ ಕಾವಿಧಾರಿಗಳು ವಿಶ್ವಾಸಾರ್ಹತೆ ಕಳೆದುಕೊಂಡಿದ್ದಾರೆ ಎಂದು ಅರ್ಥೈಸಬಹುದು. ಉಜಿರೆಯ ಸೌಜನ್ಯ ರೇಪ್ ಮತ್ತು ಕೊಲೆಯಾಗಿ ಮೂರು ವರ್ಷವಾಯಿತು. ಜತೆಗೆ ಸಿಬಿಐ ತನಿಖೆ ಶುರುವಾಗಿ 10 ತಿಂಗಳಾಯಿತು. ಆದರೆ ಯಾವುದೇ ಪ್ರಗತಿಯಾಗದಿದ್ದರೂ ಈ ಕಾವಿಧಾರಿಗಳಿಗೆ ಆತಂಕ ಹುಟ್ಟಿಸದಿರುವುದು ಇವರಿಗೆ ಸಾಮಾಜಿಕ ಕಾಳಜಿ ಇಲ್ಲದಿರುವುದಕ್ಕೆ ಸಾಕ್ಷಿ.

ಒಬ್ಬ ನಿಸ್ಸಹಾಯಕ ಹೆಣ್ಣಿನ ಮೇಲೆ ಗೋಸ್ವಾಮಿಯ ನಿರಂತರ ಅತ್ಯಾಚಾರದ ಬಗ್ಗೆ ಯಾವ ಕಾವಿಧಾರಿಯೂ ಸೊಲ್ಲೆತ್ತುವುದಿಲ್ಲ, ಇದರ ಅರ್ಥ ಎಲ್ಲ ಕಾವಿಧಾರಿಗಳೊಳಗೂ ಏನಾದರೊಂದು ಗುಟ್ಟು ಅಡಗಿದೆ ಎಂದಂತಾಯಿತು.

-ಆರ್ ಕೆ ರೈ, ಮಂಗಳೂರು

ಅವತಾರಗಳು ಹತ್ತು, ಪ್ರಶ್ನೆಗಳು ನೂರೆಂಟು?!

'ಅವತಾರ್' ಎನ್ನುವ ಹಾಲಿವುಡ್ ಸಿನಿಮಾದಿಂದಾಗಿ ಅವತಾರ ಎನ್ನುವ ಶಬ್ದವೀಗ ವರ್ಲ್ಡ್ ಫೇಮಸ್. ವೀರಪ್ಪ ದಿ ನಾಯ್ಕ್ ಅವರು ತಮ್ಮ ಪತ್ರದಲ್ಲಿ ಅಂದಂತೆ ಮಾಧ್ವರಿಗೆ ಶಂಕರಾಚಾರ್ಯ ರಾಕ್ಷಸನ ಹಾಗು ನಾಯಿಯ ಅವತಾರದಂತೆ ಕಂಡರೆ ಅವರ ಗುರು ನಿತ್ಯನಾರಕಿ ಮಧ್ವನು ಹನುಮ ಹಾಗು ಭೀಮನ ಥರ್ಡ್ ಜನರೇಷನ್ ಅವತಾರವಂತೆ. ಇದಕ್ಕೆ ಸಾಕ್ಷಿಯನ್ನೂ ಉಡುಪಿಯ ಕುಂಜಾರುಗಿರಿಯ ಪಾಜಕವೆಂಬಲ್ಲಿ ಈ ಮಾಧ್ವಾನುಯಾಯಿಗಳು ಈಗಲೂ ತೋರುತ್ತಾರೆ. ಅಂದರೆ ಒಂದು ಚಪ್ಪಡಿಕಲ್ಲನ್ನು ತೋರಿಸಿ ಪಾತ್ರಕ್ಕೆ ಬಾಯಿ ಮುಚ್ಚು ಎಂದರೆ ಹುಡುಗಪ್ರಾಯದ ಮಧ್ವ ಬಲಭೀಮನಂತೆ ಇದೇ ಚಪ್ಪಡಿಕಲ್ಲನ್ನು ಎತ್ತಿ ಮುಚ್ಚಿಟ್ಟದ್ದೇ ಆತ ಭೀಮ ಹನುಮನೆನ್ನಲು ಪ್ರತ್ಯಕ್ಷ ಸಾಕ್ಷಿ ಎಂದು ಬಿಡುತ್ತಾರೆ. ನಂಬುವುದು ಬಿಡುವುದು ನಿಮಗೆ ಬಿಟ್ಟದ್ದು.

ಆದೇರೀತಿ ರಾಘವೇಂದ್ರ ಸ್ವಾಮಿಗಳು ಪ್ರಹ್ಲಾದನ ಅವತಾರ, ವಾದಿರಾಜರು ಮತ್ತೊಂದು ಅವತಾರ ಎಂದು ಸಾಗುತ್ತದೆ ಇವರ ಅವತಾರ ಸರಣಿ. ಇವರ ಅವತಾರಗಳ ಕಲ್ಪನೆ ಅನುಕೂಲಕ್ಕೆ ತಕ್ಕಂತೆ (ಇನ್ನು ಇಪ್ಪತ್ತು ವರ್ಷಗಳ ಬಳಿಕ ಪೇಜಾವರರನ್ನ ನೆನಪಿಸಿಕೊಳ್ಳುವ ಅವರ ಶಿಷ್ಯಂದಿರು ಅವರನ್ನ ಬಹುಶಃ ಚಿತ್ರಗುಪ್ತನ ಅವತಾರದಲ್ಲಿ ಕಾಣಲೂಬಹುದು ಯಾರಿಗೊತ್ತು?) ಸಾಗುತ್ತಲೇ ಇರುತ್ತದೆ.

ಮುಖ್ಯವಾಗಿ ವೈಷ್ಣವರಲ್ಲಿರುವ ಈ ಅವತಾರ ಕಲ್ಪನೆಯ ಚಾಳಿಗೆ ಅತಿ ದೊಡ್ಡ ಉದಾಹರಣೆಯೆಂದರೆ ಅದು ವಿಷ್ಣುವಿನ ದಶಾವತಾರಗಳ ಕಲ್ಪನೆ. ಬಹುತೇಕ ಮಂದಿ ಇದನ್ನು ಹತ್ತು ಸಂಖ್ಯೆಯ ದಶಾವತಾರಕ್ಕೆ ಸೀಮಿತಗೊಳಿಸಿದರೆ ಇನ್ನು ಕೆಲವರು ಮತ್ತಷ್ಟು ಹಟ್ಟು ಸಂಖ್ಯೆಯನ್ನು ಇಲ್ಲಿ ಹೆಚ್ಚಿಸುವುದೂ ಉಂಟು. ಆದರೆ ಈ ದಶಾವತಾರದ ಕಲ್ಪನೆ ಯಾವ ಆಧಾರದಲ್ಲಿ ರಚಿಸಲ್ಪಟ್ಟಿದೆ ಎಂಬುವುದೇ ವಿಚಿತ್ರವಾದುದು. ಯಾಕೆಂದರೆ ಇಲ್ಲಿ ಸೂಚಿಸಲ್ಪಡುವ ಅವತಾರಗಳೆಲ್ಲ ನಿರ್ದಿಷ್ಟ ನಿಯಮಗಳಿಗೆ ಬದ್ಧವಾಗಿಲ್ಲದೆ ಚಿತ್ರವಿಚಿತ್ರವಾಗಿ ರಚನೆಗೊಂಡಿವೆ.

ದೇವರು ಎಂದಾಕ್ಷಣ ಬೇಕೆಂದಲ್ಲಿ ಬೇಕಾದಂತೆ ಪ್ರತ್ಯಕ್ಷವಾಗುವ ಮಾಯಾಜಾಲ ಎಂಬ ಕಲ್ಪನೆ ನಮ್ಮಲ್ಲಿದೆ. ಇದಕ್ಕೆ ಆತನ ರೂಪಪರಿವರ್ತನೆಯ ಕಥೆಗಳೇ (ಭಕ್ತನನ್ನು ಪರೀಕ್ಷಿಸಲು ವೃದ್ಧ ಬ್ರಾಹ್ಮಣನಾಗಿಯೋ, ಅತಿಥಿಯಾಗಿಯೋ, ಬೇಡನಾಗಿಯೋ ಬರುವುದರಿಂದ ಹಿಡಿದು ಹಲವು ಮುಖಗಳುಳ್ಳ ವಿಶ್ವರೂಪ ಪ್ರಕಟಣೆಯವರೆಗೆ ಹೀಗೆ ಸಾಂದರ್ಭಿಕ ರೂಪ ಪರಿವರ್ತನೆಯ ಕಥೆಗಳು) ನಮಗೆಲ್ಲ ಆಧಾರ. ಆದರೆ ಈ ದಶಾವತಾರಗಳಲ್ಲಿ ಕೂರ್ಮ, ಮತ್ಸ್ಯ ವರಾಹ, ನರಸಿಂಹನ ಅವತಾರಗಳೆಲ್ಲ ಈ ರೀತಿಯಾಗಿ ಕೆಲ ಕ್ಷಣಕ್ಕಷ್ಟೆ ಸೀಮಿತವಾದ ಸಾಂದರ್ಭಿಕ ರೂಪ ಪರಿವರ್ತನೆಯ ಕಥೆಗಳಾದರೆ ರಾಮ ಹಾಗು ಕೃಷ್ಣರಿಗೆ ಮಾನವ ಸಹಜ ಪ್ರಕ್ರಿಯೆಯಂತೆ ಮಾನವ ದಂಪತಿಗಳಿಗೆ ಹುಟ್ಟಿ ಅಲ್ಲಿಂದ ಸಾವಿನವರೆಗಿನ ಚರಿತ್ರೆಯಿದ್ದು ಆ ಇಡೀ ಸಮಯದಲ್ಲಿ ಭಕ್ತರನ್ನುದ್ಧರಿಸಿದ, ರಾಕ್ಷಸರನ್ನು ಕೊಂದ, ಪವಾಡಗಳನ್ನು ಮಾಡಿದಂತಹ ದೀರ್ಘ ಕಥೆಯಿದೆ.

ಮಾತ್ರ. ಕೇವಲ ಇಂತಹ ಒಂದು ದಿನಕ್ಕಾಗಿ ಮಾನವನಾಗಿ ಹುಟ್ಟಬೇಕಾಗಿ ಬಂದದ್ದು ಆತನ ಪ... ಎಲ್ಲಾ ಬಗೆಯ ಮಾಹಿತಿಗಳೂ ದೊರೆಯ... ಇಂಟರ್‌ನೆಟ್‌ನಲ್ಲಿ ಸಂಬಂಧಿಸಿದವರು ತಮಗೆ ಪೂರಕವ... ಮಾಹಿತಿಗಳನ್ನೇ ಹೆಚ್ಚು ತುಂಬಿಸಿಟ್ಟಿರುತ್ತಾರೆ.

ಗೌರಿ ಲಂಕೇಶ್ ಪತ್ರಿಕೆಯಲ್ಲೇ ಒಮ್ಮೆ ಉಡು... ಅಂಬಲಪಾಡಿ ದೇಗುಲದ ಬಗ್ಗೆ ವಿಕಿಪೀಡಿಯಾದ... ಬಹುತೇಕರು ಮಾನ್ಯಮಾಡುವ ಮಾಧ್ಯಮದಲ್ಲೇ ... ಮಾಹಿತಿ ತುಂಬಿದ ಸಂಗತಿ ಪ್ರಕಟವಾಗಿತ್ತು, ಎ... ಬಾರಿ ತಿದ್ದಲ್ಪಟ್ಟ ಸಂಗತಿಗಳೇ ಮೂಲ ವಿಚಾರ... ತೋರುವುದುಂಟು. ತುಳುನಾಡಿನ ಮೂಲ ಇತಿಹಾ... ಪಾದೂರು ಗುರುರಾಜ ಭಟ್ಟರು ಧರ್ಮಸ್ಥಳದ ಕು... ಹೇಳಿರುವಂತಹ ಹೆಗ್ಗಡೆಗಳ "ಬ್ರಿಟಿಷ್ ಬಟರಿಂ... ನೈಜ ಐತಿಹಾಸಿಕ ವಿಚಾರ ಯಾರಿಗೂ ಗೊತ್ತಿಲ್ಲ, ಬ... ಇಂಟರ್‌ನೆಟ್‌ನಲ್ಲೂ ಅದು ಸಿಗದೇನೋ. ಅ... ಹೊಸದಾಗಿ ಕಟ್ಟಲ್ಪಟ್ಟ 'ಧರ್ಮವಂತ' ಕಥೆಗಳಿಗೆ ಬ... ದಂಡಿಯಾಗಿ ಎಲ್ಲೆಂದರಲ್ಲಿ ಸಿಗುತ್ತವೆ.

ಆದೇರೀತಿ ದಶಾವತಾರದ ಮೂಲ ಬುದ್ಧನ ಕ... ಶತಮಾನದ ಹಿಂದೆ ಜೋಡಿಸಲ್ಪಟ್ಟ ಹೊಸ ಜಟ... ಗೌತಮ ಬುದ್ಧನ ಕಥೆಯೇ ಈಗ ಹೆಚ್ಚು ಚಾಲ್ತಿಯ... ಪುನರೂರು ಅವರ ಪ್ರಶ್ನೆಯಂತೆ ಹಿಂದೂಗಳು ಗ... ಬುದ್ಧನನ್ನು ವಿಷ್ಣುವಿನೊಂದಿಗೆ ಬೆಸೆದದ್ದೇ ಅ... ಮಾಡಿದಂತಹ ಅವಮಾನಗಳಲ್ಲೇ ಅತೀ ದೊಡ್ಡದ...

ವಿಷ್ಣುವಿನ ಕೂರ್ಮ, ಮತ್ಸ್ಯ, ವರಾಹ, ನರಸಿಂ... ಸಾಂದರ್ಭಿಕ ರೂಪಪರಿವರ್ತನೆಯ ಮ... ಪ್ರಕಟಗೊಳ್ಳುವಿಕೆಯ ಅವತಾರದಂತೆ ಅಥವ ಅ...




MATSYA | KURMA | VARAHA | NARASIMHA | VAMAN
PARASHURAM | RAMA | BALARAM | BUDDHA | KALKI

ಇನ್ನು ಹರಿಯ ಮತ್ತೊಂದು ಅವತಾರವಾದ ಪರಶುರಾಮ ರಾಮನ ತಂದೆಯ ಕಾಲದವನಾದರೂ ಶ್ರೀಕೃಷ್ಣನ ಕಾಲದಲ್ಲೂ (ಕರ್ಣ ದ್ರೋಣಾದಿಗಳ ಗುರು) ಇದ್ದು ವಿಸಿಟಿಂಗ್ ಪ್ರೊಫೆಸರ್ ರೀತಿ ಎಲ್ಲಾ ಕಡೆಗಳಲ್ಲೂ ಆತ ಕಾಣಿಸಿಕೊಳ್ಳುತ್ತಾನೆಯೇ ಹೊರತು ಆತನದ್ದೇ ಆದಂತಹ ಚರಿತ್ರೆಗೆ ಮನ್ನಣೆಯಿಲ್ಲ. ಗೀತೆಯಲ್ಲಿ ಕೃಷ್ಣ ಆತ್ಮದ ಕುರಿತಾಗಿ "ನೈನಂ ಛಿಂದಂತಿ ಶಸ್ತ್ರಾಣಿ ನೈನಂ ತೋಯಂತಿ ಪಾವಕಹ" ಎನ್ನುತ್ತಾನೆ. ಅಂದರೆ ಈ ಆತ್ಮವನ್ನು ತುಂಡರಿಸಲಾಗಲೀ ಒದ್ದೆ ಮಾಡಲಾಗಲೀ ಸಾಧ್ಯವಿಲ್ಲ ಎಂದರ್ಥ. ಆದರೆ, ಮಾನವರಿಗೆ ಜನಿಸಿದ ಪರಶುರಾಮ, ಶ್ರೀರಾಮ ಮತ್ತು ಕೃಷ್ಣರೆಂಬ ಒಂದೇ ಮೂಲದ ಮೂರು ಮನುಷ್ಯಾತ್ಮಗಳು ಏಕಾಲದಲ್ಲಿ ಸಕ್ರಿಯವಿರುತ್ತವೆ. ಅಷ್ಟೇ ಅಲ್ಲ, ಆ ಮೂವರೂ ಒಬ್ಬನೇ ಆಗಿದ್ದೂ ಪರಶುರಾಮನು ಶ್ರೀರಾಮನೆದುರು ಸೆಣಸಾಟಕ್ಕೂ ಮುಂದಾಗುವ ಸಂದರ್ಭವೂ ಎದುರಾಗುವುದುಂಟು. ಅಂದರೆ ಕೂರ್ಮ, ವರಾಹಗಳಂತಹ ರೂಪಪರಿವರ್ತನೆಯ ಕಥೆಗಳನ್ನು ಹೊರತುಪಡಿಸಿ ನಂತರದ ಅವತಾರಗಳನ್ನು ಇಂತಹ ಜನಪ್ರಿಯ ವ್ಯಕ್ತಿಗಳನ್ನಾಧರಿಸಿ ಕಟ್ಟಲಾಯಿತೇ ವಿನಹ (ಮಾಧ್ವನ ಮೇಲೆ ಹನುಮ ಭೀಮನನ್ನು ಆರೋಪಿಸಿದಂತೆ) ವಿಭಾಗಿಸಲ್ಪಟ್ಟ ಆತ್ಮಗಳಂತೆ ಅವರು ಏಕಕಾಲಕ್ಕೆ ಸಕ್ರಿಯರಾಗಿದ್ದರೂ ಈ ವಿಚಾರವನ್ನು ಇಲ್ಲಿ ಕಡೆಗಣಿಸಲಾಯಿತು.

ಅದೇ ರೀತಿ ವಿಷ್ಣು ವಾಮನ ಹಾಗು ಬುದ್ಧನಾಗಿ ಅವತಾರವೆತ್ತಿದ ಕಥೆಯಲ್ಲಿ ರಾಮ ಮತ್ತು ಕೃಷ್ಣರ ರೀತಿ ಇವರ ಹುಟ್ಟಿನಿಂದ ಸಾವಿನವರೆಗಿನ ದೀರ್ಘ ಚರಿತ್ರೆ ವೈದಿಕ ಸಾಹಿತ್ಯದಲ್ಲಿಲ್ಲ, ಅಂದರೆ ಇವರಿಗೆ ಹುಟ್ಟು ಸಾವು ಇದ್ದರೂ ವಿಷ್ಣು ಅವತಾರ ತಳೆದು ವೈದಿಕರಿಗೆ ಆತ ಈ ಬದುಕಿನಲ್ಲಿ ಸಹಕರಿಸಿದ್ದು ಕೇವಲ ಒಂದೇ ದಿನದ ಮಟ್ಟಿಗೆ ಮಾತ್ರ. ಅದು ವಾಮನ ಬಲಿಯನ್ನು ದಾನ ಕೇಳಿದ ದಿನವಾದರೆ ಮತ್ತೊಂದು ಬುದ್ಧ ಬೆತ್ತಲೆ ನಿಂತು ತ್ರಿಪುರಾಸುರನ ಪತ್ನಿಯರ ವ್ರತ ಭಂಗಮಾಡಿ ಆತನನ್ನು ಕೊಂದಂತಹ ದಿನದಲ್ಲಿ

ಹೆಚ್ಚಿನ ತಾಕತ್ತುಳ್ಳ ವಿಷ್ಣುವಿನ ಅವತಾರವೊಂದು ಲೋಕಪ್ರಸಿದ್ಧ. ಆದರೆ ಅದು ಹರಿಯ ದಶಾ... ಲಿಸ್ಟ್‌ನಲ್ಲಿ ಎಲ್ಲೂ ಕಾಣಿಸಿಕೊಳ್ಳುವುದೇ ಇಲ್ಲವೆಂಬ... ವಿಚಿತ್ರವಾದರೂ ಸತ್ಯ. ಅದೇ ಇಡೀ ರಾಕ್ಷಸ (... ದುಷ್ಟರು ಎನ್ನಿ) ಸಂಕುಲವನ್ನೇ ಯಾಮಾರಿಸಿ ಅ... ದೇವತೆಗಳಿಗಷ್ಟೇ ಸಿಗುವಂತೆ ಮಾಡಿ ಆ ಮೂಲಕ ... ಅಮರತ್ವ ತಂದುಕೊಡಲು ಕಾರಣವಾಗಿರುವುದರ... ಈಗಿನ ಜ್ಯೋತಿಷಿಗಳ ಹೊಟ್ಟೆ ಪಾಡಿಗೆ ನಾಂದಿ ಹ... ರಾಹು-ಕೇತುಗಳ ಹುಟ್ಟಿನ ಜತೆಗೆ ದುಷ್ಟ ಮಹಿ... ಕೊಲ್ಲಲು ಮಣಿಕಂಠನ ಹುಟ್ಟಿಗೂ ಕಾರ... ಮೋಹಿನಿಯ ಅವತಾರ.

ಸಮುದ್ರ ಮಥನದ ಆರಂಭದಲ್ಲಿ ವಿಷ್ಣು ... ವತಾರ ತಾಳಿ ಕಡಗೋಲಾದ ಮೇರು ಪರ... ಬೆನ್ನಮೇಲೆ ಹೊತ್ತುಕೊಂಡರೆ ಮಥನದ ಬ... ಅಮೃತವನ್ನು ಯೋಗ್ಯ (!!?) ರಿಗೆ ಹಂಚುವ ... ಮೋಹಿನಿ ಅವತಾರ ತಾಳಿದ ಅದು ... ದಂಗುಪಡಿಸುವಷ್ಟು (ಆ ಮೂಲಕ ದಾಖಲೆ ... ಭಕ್ತರಿಂದ ಪೂಜಿಸಲ್ಪಡುವ ಅಯ್ಯಪ್ಪನ ... ಕಾರಣವಾಗುವಂತೆ) ಪರ್ಫೆಕ್ಟ್ ಆಗಿತ್ತಲ್ಲದೇ ... ಭಸ್ಮಾಸುರನಿಂದ ಶಿವನಂತಹ ಶಿವನ ಪ್ರಾಣವನ್ನ... ಸಲುವಾಗಿಯೂ ಪುನಃ ವಿಷ್ಣು ಎರಡನೇ ಬಾ... ಅವತಾರವನ್ನೇ ತಾಳಬೇಕಾಗಿ ಬಂದಿದ್ದು ಗ... ಗಮನಿಸಿ, ಈ ಅವತಾರ ನರಸಿಂಹ, ವಾಮನ, ... ಕೇವಲ ಒಂದೇ ಒಂದು ಮಹತ್ಕಾ...



ವಿ.ಸೂ. : ನಿಮ್ಮ ಅನಿಸಿಕೆಗಳನ್ನು ...
lankesh70@rediffmail.com ...
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹ...
ಪ್ರತಿಕ್ರಿಯೆಗಳನ್ನು 9980331427 ನಂ...
ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿ...

...ತವಾಗಿರದೇ ದೇವತೆ ಹಾಗು ವೈದಿಕರಿಗೆ ...ಗುವಂತಹ ಅನೇಕ ಮಹತ್ಕಾರ್ಯಗಳನ್ನು ...ತ್ತಾದರೂ ವಿಷ್ಣುವಿನ ಈ ಮಹಾವತಾರಕ್ಕೆ ...ತಾರದಲ್ಲಿ ಮಾನ್ಯತೆಯೇ ಇಲ್ಲ.

...ನ್ನು ಕಲಿಯುಗದ ಖ್ಯಾತ ದೇವರಾದ ತಿರುಪತಿ ...ಪ್ಪ ಅರ್ಥಾತ್ ಶ್ರೀನಿವಾಸನೂ ವಿಷ್ಣುವಿನ ಅವತಾರವೇ. ...ತಿಮ್ಮಪ್ಪನಿಗೆ ಇನ್ನಿಲ್ಲದಂತಹ ಖ್ಯಾತಿ ಇದ್ದರೂ ಈ ...ವತಾರದ ಲಿಸ್ಟ್‌ನಲ್ಲಿ ಶ್ರೀನಿವಾಸನಿಲ್ಲ. ಇದಕ್ಕೆ ...ಕಾರಣ ಈ ಶ್ರೀನಿವಾಸ ಹಾಗು ಆತನ ಚರಿತ್ರೆ ಇತ್ತೀಚಿಗಿನ ರಚನೆಯೆಂಬುದು. ರಾಮ ಹಾಗು ...ರೀತಿಯಲ್ಲೇ ಶ್ರೀನಿವಾಸನಿಗೂ ಸುಂದರವಾದ ...ಯನ್ನು ಕಟ್ಟಲಾಗಿದೆ. ವಿಜಯನಗರದ ಅರಸರ ...ವಲ್ಲಿ ಹಾಗು ರಾಮಾನುಜಾಚಾರ್ಯ ಅಂಥವರ ...ವಲ್ಲಿ ಪ್ರಸಿದ್ಧಿ ಪಡೆದಂತಹ ಈ ಕ್ಷೇತ್ರದ ಕತೆ ...ಯಿಸಿ ರಚಿಸಲ್ಪಟ್ಟ ಸ್ಥಳ ಪುರಾಣದ ರಚನೆ ತೀರಾ ...ನಲ್ಲ ಹಾಗು ಆಕಾಲಕ್ಕಿದು ಸರ್ವಸಮ್ಮತವಿದ್ದಿರಲಿಲ್ಲ. ...ಂದರೆ ಉಳಿದ ದಶಾವತಾರದ ಕಥೆಗಳೆಲ್ಲ ಮುಖ್ಯವಾಗಿ ...ಭಾರತದ ಕಥೆಗಳಾಗಿದ್ದರೆ ಈ ಶ್ರೀನಿವಾಸ ಪಕ್ಕಾ ...ದವನಾಗಿದ್ದ. ದಕ್ಷಿಣದಲ್ಲಿ ಮಾನ್ಯತೆ ಸಿಕ್ಕಿದ್ದರೂ ...ದಲ್ಲಿ ಉತ್ತರದಲ್ಲಿನ್ನೂ ಶ್ರೀನಿವಾಸ ಈಗಿನಂತೆ ...ಸಿರಲಿಲ್ಲ. ಜೊತೆಗೆ ತ್ರಿಮತಸ್ಥರಲ್ಲೇ ಈ ಬಗ್ಗೆ ...ದಲವಿದ್ದಿತ್ತು. ಈ ಎಲ್ಲಾ ಕಾರಣಗಳಿಗಾಗಿ ...ನಾಗಿಯೂ ವಿಷ್ಣುವಿನ ದಶಾವತಾರದ ಲಿಸ್ಟಿನಿಂದ ...ಪ್ಪಗಿರಿವಾಸಿ ಹೊರಗುಳಿಯಲೇ ಬೇಕಾಗಿ ಬಂತು.


...ದೇ ರೀತಿ ನರಸಿಂಹನಂತೆ ವಿಷ್ಣು ಕುದುರೆಯ ...ತ್ತು ಅವತರಿಸಿದ ಹಯಗ್ರೀವಾವತಾರದ ಕಥೆಯೂ ...ವಾದಿರಾಜರಂತಹ ಮಾಧ್ವ ಸನ್ಯಾಸಿಗಳಿಗೆ ಪ್ರಿಯವಾಗಿದ್ದ ...ರ ಇದು. ಅವರು ತಲೆಮೇಲೆ ಹುರುಳಿಕಾಳಿನ ...ಹಿಡಿದಿದ್ದರೆ ಹಿಂದಿನಿಂದ ಬಂದು ಈ ಅವತಾರ ...ತ್ತಂತೆ. ಇನ್ನು ವಿಷ್ಣು ತನ್ನ ದಶಾವತಾರದ ಕಾಲುಭಾಗದ ...ವನ್ನು ಕೇವಲ ಒಂದೇ ಕುಟುಂಬಕ್ಕಾಗಿ ಬಳಸಿದ್ದೂ ...ದು ವರಾಹ, ನರಸಿಂಹ ಹಾಗು ವಾಮನಾವತಾರದ ...ವಾಮನನಿಂದ ಸತ್ತ ಬಲಿಚಕ್ರವರ್ತಿ ತನ್ನ ತಂದೆಯ ...ಕಾರಣನಾದ ನರಸಿಂಹಾವತಾರವನ್ನು ಕರೆದ ಪ್ರಹ್ಲಾದನ ...ಗನಾದರೆ ವರಹಾವತಾರದಲ್ಲಿ ವಿಷ್ಣುವಿನಿಂದ ಸತ್ತ ...ಕ್ಷ ಆತನ ತಂದೆಯ ಸಹೋದರ.. ಅಂದರೆ ಆವತ್ತಿನ ...ಕ"ಕಲ್ಯಾಣ ಕೇವಲ ಈ ಒಂದು ಕುಟುಂಬದ ...ಯೇ ನಿರ್ಧಾರವಾಗಿತ್ತೆನ್ನಬಹುದು. ವಿಚಿತ್ರವಾಗಿದೆ ...ವೇ?

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಆಹಾರ ಅವರವರ ಆಯ್ಕೆ

...ನುಷ್ಯ ಇನ್ನೊಬ್ಬ ಮನುಷ್ಯನನ್ನು ಆಳುವುದಕ್ಕೆ ಧರ್ಮ, ...ಾಯಗಳನ್ನು ಸೃಷ್ಟಿಮಾಡಿದ. ಒಂದು ಕಾಲದಲ್ಲಿ ...ಇಡೀ ಸಮುದಾಯದ ಕುಟುಂಬದ ಮುಖ್ಯಸ್ಥಳಾಗಿ ...ಆಕೆಯನ್ನು ಗುಲಾಮಳನ್ನಾಗಿ ಮಾಡಿಕೊಳ್ಳಲು ...ಮಾದ. ಮುಂದುವರಿದ ಸಮುದಾಯ ಜಾತಿಜನಾಂಗ ...ಂದುಳಿದವರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ...ಕುತಂತ್ರವನ್ನು ಮಾಡಿದರು ಮತ್ತು ಈಗಲೂ ...ತ್ತಿದ್ದಾರೆ. ನಾಗರಿಕ ಮನುಷ್ಯ ಆಧುನಿಕ ಪಟ್ಟುಗಳನ್ನು ...ಕೊಂಡು ಧರ್ಮದ ಹೆಸರಿನಲ್ಲಿ ಜನಗಳ ನಡುವೆ ...ಬಿತ್ತುತ್ತಿದ್ದಾರೆ. ತಮ್ಮ ಒಳಿತಿಗೋಸ್ಕರ ಎಂತಹ ...ನಕ್ಕೂ ಕೈ ಹಾಕುತ್ತಿದ್ದಾನೆ.

...ತ್ತೀಚಿನ ದಿನಗಳಲ್ಲಿ ದೇಶದಲ್ಲಿ ಕಂಡುಬರುತ್ತಿರುವ ...ಗೇಯ ಧಾರ್ಮಿಕ, ಜಾತಿಯ ಅಸಹನೆ ಪ್ರಜ್ಞಾವಂತರ ...ಶಕ್ಕೆ ಕಾರಣವಾಗಿದೆ. ದಾದ್ರಿ ಘಟನೆ ಎಲ್ಲರನ್ನು ...ಗೊಳಿಸಿದೆ. ಆಹಾರದ ಆಯ್ಕೆ ಅವರವರ ಆಯ್ಕೆಗೆ ...ಟ್ಟ, ಅದನ್ನು ನಿರ್ಬಂಧಿಸಹೊರಟರೆ ಆಯ್ಕೆಯ




...ಕಿದಂತೆ. ಪೂರ್ವಯೋಜಿತ ಈ ಘಟನೆಯನ್ನು ...ರಾಜಕಾರಣಿಗಳು ಸಹಜ ಘಟನೆ ಎನ್ನುವಂತೆ ...ಹಿಡಿದರೆ, ದೇಶದ ಅರ್ಧದಷ್ಟಿರುವ ದಲಿತ, ...ಜನಾಂಗದ ಅನ್ನದ ತಟ್ಟೆಯನ್ನು ಕಸಿದ ಹಾಗೆ. ...ಈ ದೇಶದ ಜನ ಎಂಥ ಊಟ ಮಾಡಬೇಕು. ...ಬಟ್ಟೆ ಧರಿಸಬೇಕು ಎಂದು ಬಹುಸಂಖ್ಯಾತರು ...ಹಾಗೆ ಕೇಳಬೇಕಾ, ಇಲ್ಲದಿದ್ದರೆ ಸಾವಾ?

- ಶಾಂತೂ ಯಾಳಗಿ, ಗುರುಮಠಕಲ್

ಹುಡುಗೀರಿಂದ ಎಲ್ಲರಿಗಾಗಿ ಮಾಡಿದ ಚಿತ್ರ

ಪ್ರಿಯಾ ಬೆಳ್ಳಿಯಪ್ಪ ನಿರ್ದೇಶನದ 'ರಿಂಗ್‌ರೋಡ್' ಚಿತ್ರ ಹಲವು ಕಾರಣಗಳಿಂದಾಗಿ ಕುತೂಹಲ ಮೂಡಿಸಿದೆ. ಈ ವಾರ ರಾಜ್ಯಾದ್ಯಂತ ಚಿತ್ರವು ಬಿಡುಗಡೆ ಆಗುತ್ತಿದ್ದು, ಈ ಸಂದರ್ಭದಲ್ಲಿ ನಿರ್ದೇಶಕಿ ಪ್ರಿಯಾ ಚಿತ್ರದ ಕುರಿತು ಮಾತಾಡಿದ್ದಾರೆ.



** ಹುಡುಗಿಯರೇ ಸೇರಿಕೊಂಡು ಸಿನಿಮಾ ಮಾಡಬೇಕು ಅಂತ ಅನಿಸಿದ್ದು ಯಾಕೆ?*

ಇದು ನನ್ನ ಕಾನ್ಸೆಪ್ಟ್ ಅಲ್ಲ, ನಿರ್ಮಾಪಕಿ ರಂಜನಿ ರವೀಂದ್ರ ದಾಸ್ ಅವರು ಇಂಥದ್ದೊಂದು ಯೋಜನೆ ಸಿದ್ಧಪಡಿಸಿ ನನಗೆ ಹೇಳಿದರು. ಜಗತ್ತಿನಲ್ಲೇ ಈ ರೀತಿಯ ಪ್ರಯೋಗ ಆಗಿಲ್ಲ, ಹಾಗಾಗಿ ನಾನೂ ಒಪ್ಪಿಕೊಂಡೆ.

** ತಂತ್ರಜ್ಞರನ್ನು ಹುಡುಕುವುದು ಕಷ್ಟ ಆಗಲಿಲ್ಲವಾ?*

ಕಲಾವಿದರನ್ನು ಹುಡುಕಬಹುದು. ಆದರೆ ತಂತ್ರಜ್ಞರನ್ನು ಹುಡುಕುವುದು ಕಷ್ಟ. ಎಲ್ಲರೂ ಹುಡುಗಿಯರೇ ಆಗಿರಬೇಕು ಎಂಬ ಕಡ್ಡಾಯ ಇರುವ ಕಾರಣ, ತುಂಬಾ ಕಷ್ಟಪಟ್ಟೆವು. ಕನ್ನಡದಲ್ಲಿ ಮಾತ್ರವಲ್ಲ, ದೇಶದ ನಾನಾ ಭಾಗಗಳನ್ನು ಸುತ್ತಿದೆವು. ಹಲವು ಭಾಷೆಯ ತಂತ್ರಜ್ಞರು ಈ ಚಿತ್ರಕ್ಕಾಗಿ ಕೆಲಸ ಮಾಡಿದ್ದಾರೆ.

** 'ರಿಂಗ್‌ರೋಡ್' ಸಿನಿಮಾದ ಅಸಲಿ ಕತೆಯೇನು?*

ಇದೇ ವಾರ ಸಿನಿಮಾ ಬಿಡುಗಡೆ ಆಗುತ್ತಿದೆ. ಹೀಗಾಗಿ ಚಿತ್ರವನ್ನು ನೋಡಿ ಎಂದು ಹೇಳುತ್ತೇನೆ. ಈವರೆಗೂ ಕೇಳಿಬಂದ ಕತೆಯು ಇಲ್ಲಿ ಇಲ್ಲ. ಈ ಸಿನಿಮಾದ ಕತೆಯೇ ಬೇರೆ ಇದೆ. ರಿಂಗ್‌ರೋಡ್ ಶುಭಾಳ ಕತೆಗೂ, ನನ್ನ ಚಿತ್ರದ ಕತೆಗೂ ಹೋಲಿಕೆ ಇಲ್ಲ. ಮಹಿಳಾ ಪರ ಆಶಯವನ್ನು ಈ ಸಿನಿಮಾ ಬಿಂಬಿಸಲಿದೆ ಎಂದು ಹೇಳಬಹುದು.

** ನಿರ್ದೇಶಕಿಯಾಗಿ ನಿಮಗೆ ಚಾಲೇಂಜ್ ಆಗಿದ್ದು ಹೇಗೆ?*

ನಿರ್ದೇಶಕಿ ಅಂತಲ್ಲ, ಇಂತಹ ಕತೆಯನ್ನು ಯಾರೇ ಎತ್ತಿಕೊಂಡರೂ ಅಲ್ಲಷ್ಟು ಸಮಸ್ಯೆಗಳು ಖಂಡಿತಾ ಎದುರಾಗುತ್ತವೆ. ಇದು ಮಾಮೂಲಿ ಕತೆಯಲ್ಲ, ಇಲ್ಲೊಂದು ಸೇಡಿದೆ. ಇಲ್ಲೊಂದು ನೋವಿದೆ. ಎಲ್ಲೋ ಒಂದು ಕಡೆ ಅದು ಸೇಡಾ ಅಥವಾ ನೋವಾ ಅನ್ನುವ ಗೊಂದಲ ಮೂಡುತ್ತದೆ. ಈ ಚಿತ್ರವನ್ನು ಹುಡುಗಿಯರೇ ಮಾಡಬೇಕಿತ್ತಾ ಅನಿಸಲೂಬಹುದು. ಸಿನಿಮಾದ ಕತೆಯಿಂದ ಬಿಡುಗಡೆ ವರೆಗೂ ಚಾಲೇಂಜ್ ತೆಗೆದುಕೊಂಡೆ ಎಲ್ಲರೂ ಕೆಲಸ ಮಾಡಿದ್ದೇವೆ.



** ಮಹಿಳಾ ಪ್ರಧಾನ ಆಕ್ಷನ್ ಸಿನಿಮಾ ಎಂದು ಇದನ್ನು ಕರೆಯಬಹುದಾ?*

ಇಂಥದ್ದೇ ಕ್ಯಾಟಗರಿಯಲ್ಲಿ ಈ ಸಿನಿಮಾವನ್ನು ತೂರಿಸಲು ನನಗೆ ಇಷ್ಟವಿಲ್ಲ. ಮಹಿಳೆಯರೇ ಸಿನಿಮಾ ಮಾಡಿದ್ದೇವೆ ಅಂದಮಾತ್ರಕ್ಕೆ ಇದು ಮಹಿಳಾ ಪ್ರಧಾನ ಸಿನಿಮಾ ಅಂತಲೂ ಅಲ್ಲ, ಇದು ಎಲ್ಲರ ಬದುಕಿನ ಸಿನಿಮಾ. ಎಲ್ಲರೂ ನೋಡುವ ಚಿತ್ರ.

** ಸಿನಿಮಾದಲ್ಲಿ ಏನೆಲ್ಲ ವಿಶೇಷತೆಗಳಿವೆ?*

ಸಾಕಷ್ಟು ವಿಶೇಷತೆಗಳಿವೆ. ಇದೇ ಮೊದಲ ಬಾರಿಗೆ ಮಹಿಳೆಯರೇ ಸೇರಿ ಸಿನಿಮಾ ಮಾಡಿದ್ದಾರೆ. ಕತೆಯಲ್ಲಿ ಹಲವು ದೃಷ್ಟಿಕೋನಗಳಿವೆ. ದುನಿಯಾ ವಿಜಯ್, ಪ್ರೇಮ್, ನಿಖಿತಾ ಸೇರಿದಂತೆ ಹೆಸರಾಂತ ಕಲಾವಿದರು ನಟಿಸಿದ್ದಾರೆ. ಖುಷಿ ಅನ್ನುವ ಹೊಸ ಹುಡುಗಿಯನ್ನು ಈ ಸಿನಿಮಾದ ಮೂಲಕ ಸ್ಯಾಂಡಲ್‌ವುಡ್‌ಗೆ ಪರಿಚಯ ಮಾಡಿಸುತ್ತಿದ್ದೇವೆ. ಹುಡುಗಿಯರು ಮನಸು ಮಾಡಿದರೆ ಏನೆಲ್ಲ ಮಾಡಬಹುದು ಎಂಬುದಕ್ಕೆ ಸಿನಿಮಾ ಸಾಕ್ಷಿ ಆಗಲಿದೆ.

** ಪೋಸ್ಟರ್‌ನಲ್ಲಿ ಏನೇನೋ ಬರಹಗಳು ಇವೆಲ್ಲ, ಅದೆಲ್ಲ ಯಾಕೆ?*

ಚಿತ್ರಕತೆಯ ಒಂದಿಷ್ಟು ಅಂಶಗಳನ್ನು ಆ ಬರಹದಲ್ಲಿ ಸೂಕ್ಷ್ಮವಾಗಿ ಹೇಳಿದ್ದೇವೆ. ಅಲ್ಲದೇ ನಮಗೂ ಒಂದು ಅಹಂ ಅನ್ನೋದು ಇರತ್ತಲ್ಲ, ಅದನ್ನು ತೋರಿಸುವ ಪ್ರಯತ್ನ ಅಲ್ಲಿದೆ. ಜತೆಗೆ ಕುತೂಹಲ ಮೂಡಲಿ ಎಂಬ ಉದ್ದೇಶವೂ ಅದರ ಹಿಂದಿದೆ. ಆ ಸಾಲುಗಳನ್ನು ಓದಿ ಹಲವು ಹುಡುಗರು ಕಿಂಡಲ್ ಮಾಡಿದ್ದಾರೆ. ಅದೇನ್ ಮಾಡಿದ್ದೀರೋ ನೋಡೋಣ ಅಂತ ಸವಾಲು ಹಾಕಿದ್ದಾರೆ. ಫೇಸ್‌ಬುಕ್‌ನಲ್ಲಿ ತುಂಬಾ ಚರ್ಚೆ ನಡೆದಿದೆ. ಈ ಸಿನಿಮಾ ಖಂಡಿತಾ ಯಾರಿಗೂ ನಿರಾಸೆ ಮಾಡಲ್ಲ.

** ದುನಿಯಾ ವಿಜಯ್ ಅವರ ಜೀವನದ ಒಂದಿಷ್ಟು ಭಾಗಗಳು ಚಿತ್ರಕತೆಯಲ್ಲಿ ಇವೆ ಎಂಬ ಗುಲ್ಲಿದೆ?*

ಕತೆಯ ಬಗ್ಗೆ ಏನೂ ಹೇಳಲ್ಲ ಅಂತ ಹೇಳಿದ್ದೇನೆ. ಎಲ್ಲರ ಜೀವನದಲ್ಲೂ ನಡೆಯುವ ಘಟನೆಗಳೂ ಸಿನಿಮಾದಲ್ಲಿವೆ. ಅವುಗಳು ಯಾರಿಗೆ ಬೇಕಾದರೂ ಹೋಲಿಕೆ ಆಗಬಹುದು. ಆದರೆ ಯಾರ ಮನಸಿಗೂ ನೋವು ಆಗುವಂಥ ದೃಶ್ಯಗಳು ಚಿತ್ರದಲ್ಲಿ ಇಲ್ಲ, ಚೀಪ್ ಗಿಮಿಕ್ಸ್ ಮಾಡುವುದಕ್ಕೆ ಹೋಗಿಲ್ಲ.

** ಅಷ್ಟೊಂದು ಕಾಂಟ್ರೊವರ್ಸಿಯ ಅಗತ್ಯ ಇತ್ತಾ?*

ಒಳ್ಳೆಯ ಕೆಲಸ ಮಾಡುವಾಗ ಅದಕ್ಕೆ ಅಡೆತಡೆಗಳು ಬರುವುದು ಸಹಜ. ನಮ್ಮ ಸಿನಿಮಾಗೂ ಅಂತಹ ಅಡೆತಡೆ ಬಂದಿವೆ. ಈವರೆಗೂ ನಾವು ಸಿನಿಮಾದ ಕತೆಯನ್ನು ಹೇಳಿಲ್ಲ, ಆದರೂ ತಮಗಿಷ್ಟ ಬಂದಂತೆ ಕತೆ ಹೆಣೆದುಕೊಂಡವರೇ ಹೆಚ್ಚು, ಹೀಗಾಗಿ ಕಾಂಟ್ರೊವರ್ಸಿ ಆಯಿತು. ಎಲ್ಲದಕ್ಕೂ ನಾನು ಉತ್ತರ ಕೊಟ್ಟಿದ್ದೇನೆ. ಸಿನಿಮಾದ ಬಗ್ಗೆ ಈವರೆಗೂ ಏನೆಲ್ಲ ಅಂದುಕೊಂಡಿದ್ದಾರೋ, ಅದೆಲ್ಲವನ್ನೂ ಈ ಸಿನಿಮಾ ಸುಳ್ಳಾಗಿಸುತ್ತದೆ.

** ಈ ಪ್ರಯೋಗ ಇದೊಂದೇ ಚಿತ್ರಕ್ಕೆ ನಿಲ್ಲುತ್ತಾ? ಮುಂದುವರೆಸುತ್ತೀರಾ?*

ನಾವು ಎಷ್ಟೇ ಕತೆಗಳನ್ನು ಮಾಡಬಹುದು. ಅದೆಷ್ಟೇ ಟ್ಯಾಲೆಂಟ್ ಇರಬಹುದು. ಬಂಡವಾಳ ಹಾಕೋರು ಇಲ್ಲದೇ ಇದ್ದರೆ, ನಮ್ಮ ಪ್ರತಿಭೆ ಏನೂ ನಡೆಯಲ್ಲ. ರಂಜನಿ ನನ್ನ ಕನಸಿಗೆ ಬಣ್ಣ ತುಂಬಿದರು. ನಿರ್ಮಾಣ ಮಾಡಿದರು. ಅಂಥೋರು ಮತ್ತೆ ಮುಂದು ಬಂದರೆ ನಾನಂತೂ ಸಿನಿಮಾ ಮಾಡೋಕೆ ಸಿದ್ಧ. ಸಿನಿಮಾ ರಂಗದಲ್ಲಿ ಮಹಿಳಾ ತಂತ್ರಜ್ಞರ ಕೊರತೆ ಸಾಕಷ್ಟಿದೆ. ಇಂತಹ ಚಿತ್ರಗಳು ಬಂದರೆ ಒಂದಿಷ್ಟು ಕೊರತೆ ನೀಗಬಹುದು.

** ಸಿನಿಮಾ ರಂಗದ ಸಹಕಾರ ಹೇಗಿತ್ತು? ನಿರ್ದೇಶಕಿಗೆ ಪೂರಕವಾಗಿದೆಯಾ ಕನ್ನಡ ಇಂಡಸ್ಟ್ರಿ?*

ಹುಡುಗಿಯರೇ ಸೇರಿ ನಿರ್ಮಾಣ ಮಾಡುವ ಚಿತ್ರ ಎಂಬ ಸುದ್ದಿ ಹರಡಿದಾಗ, ಅಚ್ಚರಿಯಿಂದ ನಮ್ಮನ್ನು ಸ್ವಾಗತಿಸಿದರು. ಚಲನಚಿತ್ರ ವಾಣಿಜ್ಯ ಮಂಡಳಿಯೂ ಮೊದಮೊದಲು ಸಹಕಾರ ನೀಡಿತು. ಆನಂತರ ನಾವು ಅಂದುಕೊಂಡಂತಹ ಸಹಾಯ ಸಿಗಲಿಲ್ಲ, ಬಿಡುಗಡೆಯ ಟೈಮ್‌ನಲ್ಲಿ ಮತ್ತೆ ಹಲವರು ಕೈ ಹಿಡಿದಿದ್ದಾರೆ. 160ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆ ಮಾಡುತ್ತಿದ್ದಾರೆ.

12 ◀◀ ಹಾವಾಡಿಗನ ಮಗಳು

"ಕಾಣಿಸಲ್ವಾ ನಿಮಗೆ, ಅವು ಗೂಡು ಕಟ್ಟಿಕೊಂಡಿವೆ?" ಎಂದಳು ಆಗ್ರಹದಿಂದ ಕಾಗದದ ಚೂರು ತೋರಿಸುತ್ತಾ.

"ಇಲಿಗಳು ತಂದಿರಬಹುದು" ಎಂದ ಮೃತ್ಯುಂಜಯ.

"ಇರಬಹುದು. ಆದರೆ, ನಾನೇಳುವೆ ಅಲ್ಲಿ ಜೋಡಿ ಹಾವು ಇವೆ" ಎಂದಳು ದೃಢವಾಗಿ ಬಿಲಾಸಿ.

ಅವಳ ಮಾತು ಖರೆ ಇತ್ತು, ಆ ದಿನ ಅಂತೂ ಹೃದಯವಿದ್ರಾವಕ ದುರಂತದಲ್ಲಿ ಅಂತ್ಯ ಕಂಡಿತು. ಸುಮಾರು ಹತ್ತು ನಿಮಿಷದೊಳಗೆ ಮನೆಯಿಂದ ಮೃತ್ಯುಂಜಯ ಹೊರಬಂದ ಒಂದು ಭಾರಿ ನಾಗರಹಾವಿನೊಂದಿಗೆ. ನಾನು ಅದನ್ನು ಬುಟ್ಟಿಯೊಳಗೆ ಇಟ್ಟು ಹಿಂದಿರುಗಿದೆ. ಪುನಃ ಮೃತ್ಯುಂಜಯ ನೋವೆಂದು ಮುಲುಕುತ್ತ ಹೊರಗೆ ಬಂದ. ಅವನ ಕೈ ಹಿಂಭಾಗದಲ್ಲಿ ರಕ್ತ ಧಾರಾಕಾರವಾಗಿ ಸೋರುತ್ತಿತ್ತು.

ಪ್ರಾರಂಭಕ್ಕೆ ನಾವೆಲ್ಲ ಮೂಕರಾದೆವು. ಬಿಲಾಸಿ ಗೋಳೋ ಎಂದು ಅಳುತ್ತಾ ಓಡಿಬಂದವಳೇ ತನ್ನ ಸೀರೆಯ ಸೆರಗಿನ ಅಂಚಿನಿಂದ ಅವನ ಮುಂಗೈಯನ್ನು ಭದ್ರವಾಗಿ ಬಿಗಿದಳು. ಬಗೆ ಬಗೆ ಗಿಡ್ಡೆಗಳನ್ನು ಜಗಿಯಲು ಕೊಟ್ಟಳು. ಮೃತ್ಯುಂಜಯನಿಗೆ ತಾಯಿತ ಕಟ್ಟಿತ್ತು, ನಾನು ನನ್ನದನ್ನು ಅವನ ಕೈಗೆ ಕಟ್ಟಿದೆ, ವಿಷ ಮುಂದಕ್ಕೆ ಹರಿಯಲಾರದೆಂಬ ಭರವಸೆಯಿಂದ. ನಾನು ತೀವ್ರ ಹುರುಪಿನಿಂದ ಬಿಸಹಾರಿ ಸೂತ್ರದ ಶ್ಲೋಕವನ್ನು ಪಠಿಸಿದೆ. ಗುಂಪು ನೆರೆಯಿತು. ನೆರೆಹೊರೆಯ ಎಲ್ಲ ಹಾವಾಡಿಗರಿಗೆ ವಿಷಯ ತಿಳಿಸಲು ಮಂದಿ ಓಡಿದರು. ಬಿಲಾಸಿಯ ಅಪ್ಪನಿಗೂ ಸುದ್ದಿ ಮುಟ್ಟಿತು.

ನಿಲುಗಡೆ ಕೊಡದೆ ಮಂತ್ರೋಚ್ಚಾರಣೆಯ ಪಠಣ ಮುಂದುವರಿಯಿತಾದರೂ ಫಲ ಅಷ್ಟೇನೂ ಹೇಳಿಕೊಳ್ಳುವಂತಿರಲಿಲ್ಲ, ವಾಂತಿ ಮಾಡಲು ಶುರುಮಾಡಿದ ಮೃತ್ಯುಂಜಯ ಮೂಗಿನಲ್ಲಿ ಮಾತನಾಡಲು ಸಾಹಸ ಪಟ್ಟ. ಬಿಲಾಸಿ ಮೂರ್ಛೆ ಹೋದಳು. ಬಿಸಹಾರಿ ಮಂತ್ರೋಪಚ್ಚಾರಣೆ ಕೆಲಸ ಮಾಡಲಿಲ್ಲವೆಂದು ನನಗೆ ಮನವರಿಕೆಯಾಯಿತು.

ಬೇರೆ ಬೇರೆ ಹಾವಾಡಿಗರು ಬಂದರು ಹಾಗೂ ನಾವೆಲ್ಲ ಒಟ್ಟಿಗೆ, ಒಮ್ಮೊಮ್ಮೆ ಬೇರೆ ಬೇರೆಯಾಗಿ, ಮೂವತ್ತು ಸಾವಿರ ದೇವ-ದೇವತೆಗಳನ್ನು ಪ್ರಾರ್ಥಿಸಿದೆವು. ಆದರೂ ಮೃತ್ಯುಂಜಯನ ಸ್ಥಿತಿ ಹದಗೆಟ್ಟಿತು. ಯಾವಾಗ ನಮ್ಮ ಕುಲೀನ ನುಡಿಗಳು ನಿಷ್ಪ್ರಯೋಜಕವೆನಿಸಿದವೋ, ಆಗ ಕೆಲವರು ವಿಷ ಕುರಿತಂತೆ ಬಹು ಅಶ್ಲೀಲದ ಬೈಗುಳಗಳ ಮಳೆ ಸುರಿಸಲಾರಂಭಿಸಿದರು. ವಿಷಕ್ಕೇನಾದರೂ ಕಿವಿ ಇದ್ದಿದ್ದರೆ, ಈ ಬೈಗುಳ ಕೇಳಿ ಅಂದೇ ಅದು ಈ ಭೂಮಿಯಿಂದ ಕಾಲ್ಕಿಳುತ್ತಿತ್ತು, ಮೃತ್ಯುಂಜಯ ಇರಲಿ.

ಅರ್ಧ ಗಂಟೆಯ ಹೋರಾಟದ ತರುವಾಯ, ಮೃತ್ಯುಂಜಯ, ಮೃತ್ಯು ವಿಜೇತ, ಇಹಲೋಕ ತ್ಯಜಿಸಿದ. ಬಿಲಾಸಿ ಪತಿಯ ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡು ಶಿಲೆಯಂತಾಗಿಬಿಟ್ಟಳು!

ಪತಿ ಹೋದ ಮೇಲೆ ಅವಳು ಒಂದು ವಾರಕ್ಕಿಂತ ಹೆಚ್ಚು ದಿನ ಬದುಕುಳಿಯಲಿಲ್ಲ, ಒಂದು ದಿನ ಅವಳ ಮನೆ ಹತ್ತಿರ ಬಂದ ನನಗೆ ಅವಳು ಆತ್ಮಹತ್ಯೆ ಮಾಡಿಕೊಂಡಳೆಂದು ತಿಳಿಯಿತು ಹಾಗೂ ನಮ್ಮ ಪವಿತ್ರ ಗ್ರಂಥಗಳ ಪ್ರಕಾರ ಆಕೆ ಪ್ರಾಯಶಃ ನರಕಕ್ಕೆ ಹೋಗಿರಬಹುದು.

ಬೆಂಗಾಲಿ ಮೂಲ: ಶರತ್‌ಚಂದ್ರ ಚಟರ್ಜಿ (1876-1938)

ಕನ್ನಡಕ್ಕೆ: ಸೊಂದಲಗೆರೆ ಲಕ್ಷ್ಮೀಪತಿ



ಮನೋರಂಜನ್

ಪ್ರೇಮ್ ಖಾಲಿ ಖಾಲಿ

'ನೆನಪಿರಲಿ' ಸಿನಿಮಾದ ಮೂಲಕ ಪ್ರಸಿದ್ಧಿ ಪಡೆದ ನಟ ಪ್ರೇಮ್, ಸದ್ಯ ಖಾಲಿ ಇದ್ದಾರೆ. ಅವರ ಕೈಯಲ್ಲಿ ಯಾವುದೇ ಸಿನಿಮಾ ಇರದ ಕಾರಣ ಅವರು ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಾ ಕಾಲ ದೂಡುತ್ತಿದ್ದಾರೆ.

ಸಿನಿರಂಗ ಕಂಡ ಪ್ರತಿಭಾವಂತ ನಟ ಪ್ರೇಮ್. ಇವರ ನಟನೆಯ ಒಂದಿಷ್ಟು ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಸದ್ದೂ ಮಾಡಿವೆ. ಸಂಭಾವನೆ ವಿಷಯದಲ್ಲೂ ಅವರು ಹೆಸರು ಕೆಡಿಸಿಕೊಂಡಿಲ್ಲ, ಇಷ್ಟೆಲ್ಲ ಆದರೂ ಅವರು ಬಿಜಿ ಆಗಿಲ್ಲ. ಕಾರಣ, ಪ್ರೇಮ್ ನಟನೆಯ ಒಂದೆರಡು ಚಿತ್ರಗಳು ಡಬ್ಬಾದಲ್ಲಿ ಕೊಳೆಯುತ್ತಿರುವುದು. ಅದಕ್ಕಾಗಿಯೇ ನಿರ್ಮಾಪಕರು ಹೆದರಿಕೊಂಡು ಇವರತ್ತ ಸುಳಿಯುತ್ತಿಲ್ಲ.

ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ, ಇಷ್ಟೊತ್ತಿಗೆ 'ದಳಪತಿ' ಸಿನಿಮಾ ರಿಲೀಸ್ ಆಗಬೇಕಿತ್ತು, ಅಲ್ಲದೇ 'ಮೊಹಬತ್' ಚಿತ್ರವೂ ತೆರೆ ಕಾಣಬೇಕಿತ್ತು. ನಾನಾ ಕಾರಣಗಳಿಂದಾಗಿ ಅವುಗಳ ಚಿತ್ರೀಕರಣ ಕಂಪ್ಲೀಟ್ ಆಗಿಲ್ಲ, 'ದಳಪತಿ' ಚಿತ್ರದ ಶೂಟಿಂಗ್ ಮುಂದುವರೆಯುವಂತೆ ಕಾಣುತ್ತಿಲ್ಲ, ಹೀಗಾಗಿಯೇ ಪ್ರೇಮ್‌ಗೆ ಮಾರ್ಕೆಟ್ ಬಿದ್ದುಹೋಗಿದೆ. 'ಮೊಹಬತ್' ಗೆಲುವು ಕಂಡರೆ ಮಾತ್ರ ಪ್ರೇಮ್‌ಗೆ ಚಿತ್ರಗಳು ಸಿಗಲಿವೆ. ಅಲ್ಲಿವರೆಗೂ ಈ ವನವಾಸ ಇದ್ದದ್ದೆ.

ಶಿವರಾಜ್‌ಕುಮಾರ್ ಜತೆ ಕಾಣಿಸಿಕೊಂಡ ಪ್ರೇಮಾ

ಮದುವೆಯ ನಂತರ ಪ್ರೇಮಾ ಸಿನಿಮಾರಂಗವನ್ನೇ ತೊರೆದಿದ್ದರು. ಆನಂತರ ಅವರು ತೆರೆಯ ಮೇಲಲ್ಲ, ಸಿನಿಮಾ ಲೋಕದ ಯಾವ ಚಟುವಟಿಕೆಯಲ್ಲೂ ಭಾಗವಹಿಸಲಿಲ್ಲ, ಎಷ್ಟೋ ವರ್ಷಗಳ ನಂತರ ಮಂಜು ಸ್ವರಾಜ್ಯ ನಿರ್ದೇಶನದ 'ಶಿಶಿರ' ಎಂಬ ಚಿತ್ರದಲ್ಲಿ ಇವರು ಕಾಣಿಸಿಕೊಂಡಿದ್ದರಾದರೂ ಆನಂತರ ಮತ್ತೆ



ಮಾಯವಾದರು. ಈಗ ಇದೇ ನಿರ್ದೇಶಕರ ಮತ್ತೊಂದು ಚಿತ್ರದಲ್ಲಿ ನಟಿಸಲು ಪ್ರೇಮಾ ಒಪ್ಪಿಕೊಂಡಿದ್ದಾರೆ. ಅದು ಶಿವರಾಜ್‌ಕುಮಾರ್ ನಾಯಕನಾಗಿ ನಟಿಸುತ್ತಿರುವ ಚಿತ್ರದಲ್ಲಿ ಎನ್ನುವುದು ವಿಶೇಷ.

'ಓಂ' ಸೇರಿದಂತೆ ಒಂದಿಷ್ಟು ಚಿತ್ರಗಳಲ್ಲಿ ಶಿವರಾಜ್‌ಕುಮಾರ್ ಜತೆ ಪ್ರೇಮಾ ನಟಿಸಿದ್ದಾರೆ. ಈ ಜೋಡಿ ಪಾಪ್ಯುಲರ್ ಕೂಡ ಆಗಿತ್ತು, ಈಗ ಮತ್ತೆ ಕಾಣಿಸಿಕೊಳ್ಳುವ ಸೂಚನೆ ನೀಡಿದ್ದಾರೆ. ಮೊನ್ನೆಯಷ್ಟೇ ಚಿತ್ರದ ಮುಹೂರ್ತ ನಡೆದದ್ದು, ಅಂದು ಪ್ರೇಮಾ ಕೂಡ ಹಾಜರಿದ್ದರು. ಆದರೆ, ನಟಿಸುವ ಯಾವ ಸುಳಿವನ್ನೂ ಅವರು ನೀಡಲಿಲ್ಲ, ಆದರೆ, ಈ ಚಿತ್ರದಲ್ಲಿ ನಟಿಸುವುದು ಗ್ಯಾರಂಟಿ ಅನ್ನುತ್ತಿದೆ ಚಿತ್ರತಂಡ.



ತೆಲುಗಿಗೆ ರಾಯ

ದರ್ಶನ್ ನಟನೆಯ 'ಸಂಗೊಳ್ಳಿ ರಾಯಣ್ಣ' ತೆಲುಗಿಗೆ, ದ ಮುಂದಿನ ತಿಂಗಳು ಈ ಚಿತ್ರವನ್ನು ಬಿಡುಗಡೆ ಮಾಡುವ ತಯಾ ನಿರ್ಮಾಪಕ ಆನಂದ ಅಪ್ಪುಗೋಳು. ಈ ಚಿತ್ರವನ್ನು 18 ಬಿಡುಗಡೆ ಮಾಡುವ ಯೋಜನೆ ನಿರ್ಮಾಪಕರದ್ದಾಗಿತ್ತು, ಆದ ಆಗಿದ್ದು ಕೇವಲ ಕನ್ನಡದಲ್ಲಿ ಮಾತ್ರ.

ಈ ಹಿಂದೆಯೇ ಮರಾಠಿಗೂ ಚಿತ್ರವನ್ನು ಡಬ್ ಮಾಡಲಾ ಅಲ್ಲಿನ್ನೂ ರಿಲೀಸ್ ಆಗಿಲ್ಲ, ಮರಾಠಿ ಮತ್ತು ತೆಲುಗಿನಲ್ಲಿ ಏಕಕಾಲ ಆಗಲಿದೆಯಂತೆ. ಅಲ್ಲಿಂದ ರಾಯಣ್ಣ ಬಾಲಿವುಡ್‌ಗೂ ಹಾರಲಿ

ಕನ್ನಡದಲ್ಲಿ ನೂರಕ್ಕೂ ಹೆಚ್ಚು ದಿನ ಓಡಿದ ಚಿತ್ರವಿದು. ನಿ ಜೇಬು ತುಂಬಿಸಿದ್ದಷ್ಟೇ ಅಲ್ಲ, ಅನೇಕ ಪ್ರಶಸ್ತಿಗಳನ್ನೂ ಈ ಸಿನಿಮ ಈಗ ಹಲವು ಭಾಷೆಗೆ ಡಬ್ ಆಗುತ್ತಿದೆ.

'ನಮಗಾಗಿ' ಸಿನಿಮಾ ಗ್ಯಾರಂಟಿ




ರಾಧಿಕಾ ಸಿನಿಮಾ ರಂಗವನ್ನೇ ತೊರೆದಿದ್ದಾರೆ ಎಂಬ ಸುದ್ದಿ ಹರಡಿದೆ. ಬೆಂಗಳೂರಿನಿಂದ ಅವರು ಮಂಗಳೂರಿಗೆ ಶಿಫ್ಟ್ ಆಗಿದ್ದಾರೆ ಎನ್ನುವ ಮಾಹಿತಿಯೂ ಸಿಕ್ಕಿದೆ. ಇವರ ನಟನೆಯ 'ನಮಗಾಗಿ' ಸಿನಿಮಾ ಟೇಕಾಫ್ ಆಗುವುದು ದೌಟು ಎಂಬ ಮಾತೂ ಕೇಳಿಬಂದಿತ್ತು, ಇದೆಲ್ಲವೂ ಸುಳ್ಳು ಅಂತಿದ್ದಾರೆ ರಾಧಿಕಾ. ತಾವು ಸಿನಿಮಾ ರಂಗವನ್ನೂ ತೊರೆಯುವುದಿಲ್ಲ, ಬೆಂಗಳೂರನ್ನೂ ಬಿಡುವುದಿಲ್ಲ ಅಂದಿದ್ದಾರೆ.

ವಿಜಯ ರಾಘವೇಂದ್ರ ಮತ್ತು ರಾಧಿಕಾ ನಟನೆಯ 'ನಮಗಾಗಿ' ಸಿನಿಮಾದ ಚಿತ್ರೀಕರಣ ಮುಕ್ಕಾಲು ಭಾಗ ಮುಗಿದಿದೆ. ಹಾಡುಗಳ ಶೂಟಿಂಗ್ ಮುಗಿದರೆ ಸಿನಿಮಾ ಕಂಪ್ಲೀಟ್. ಈ ಮಧ್ಯೆ ರಾಧಿಕಾ ಸುತ್ತ ಹಬ್ಬಿದ್ದ ಸುದ್ದಿ ನಿರ್ದೇಶಕರನ್ನು ಕಂಗೆಡಿಸಿತ್ತು, ಈಗ ಎಲ್ಲವೂ ಸುಖಾಂತ್ಯವಾಗಿದೆ. 'ನಮಗಾಗಿ' ಸಿನಿಮಾ ತೆರೆಗೆ ಬರುವುದು ಗ್ಯಾರಂಟಿ ಅಂದಿದ್ದಾರೆ ರಾಧಿಕಾ. ಅಲ್ಲದೇ ಶೂಟಿಂಗ್‌ಗೆ ದುಡ್ಡಿನ ಅವಶ್ಯಕತೆ ಬಿದ್ದರೆ, ತಾವೇ ಹಾಕುವುದಾಗಿಯೂ ಹೇಳಿದ್ದಾರೆ.


ಅಪ್ಪ ಮಗನ ಕನಸು ಈಡೇರಲಿಲ್ಲ



ಮಗನನ್ನು ದೊಡ್ಡ ಮಟ್ಟದಲ್ಲಿ ಲಾಂಚ್ ಮಾಡುವ ಕನಸು ರವಿಚಂದ್ರನ್ ಅವರದ್ದಾಗಿತ್ತು, ಅದರಂತೆ ಭರ್ಜರಿಯಾಗಿ ಚಿತ್ರದ ಮುಹೂರ್ತವನ್ನೂ ಕ್ರೇಜಿಸ್ಟಾರ್ ಆಯೋಜಿಸಿದ್ದರು. ಕಾಲು ಕೋಟಿಗೂ ಹೆಚ್ಚು ಖರ್ಚು ಮಾಡಿ ಮುಹೂರ್ತ ಮಾಡಿದರು. ಆ ಪ್ರಾಜೆಕ್ಟ್ ಈಗ ಅರ್ಧಕ್ಕೆ ನಿಂತಿದೆ. ಮನೋರಂಜನ್ ನಟಿಸುತ್ತಿದ್ದ 'ರಣಧೀರ' ಸಿನಿಮಾ ಡ್ರಾಪ್ ಆದ ಕಾರಣ, ಮತ್ತೊಂದು ಹೊಸ ಚಿತ್ರ ಒಪ್ಪಿಕೊಂಡಿದ್ದಾರೆ ಮನೋರಂಜನ್. ಪತ್ರಕರ್ತರಿಗೆ ರವಿಚಂದ್ರನ್ ಸಿಕ್ಕಾಗೆಲ್ಲ ಮಗನ ಚಿತ್ರದ ಬಗ್ಗೆ ಹೇಳುತ್ತಿದ್ದರು. ಅವರ ಪಕ್ಕದಲ್ಲೇ ಇರುತ್ತಿದ್ದ ಮಗ ಕೂಡ, ಅಪ್ಪನೇ ತಮ್ಮನ್ನು ಲಾಂಚ್ ಮಾಡಬೇಕು ಅನ್ನುವ ಕನಸು ಹಂಚಿಕೊಳ್ಳುತ್ತಿದ್ದರು. ಈಗ ಇಬ್ಬರ ಕನಸು ಈಡೇರುತ್ತಿಲ್ಲ. ಹಣಕಾಸಿನ ಮುಗ್ಗಟ್ಟಿನಿಂದಾಗಿ 'ರಣಧೀರ' ಪ್ರಾಜೆಕ್ಟ್ ಅನ್ನು ಅರ್ಧಕ್ಕೆ ನಿಲ್ಲಿಸಿದ್ದಾರೆ ರವಿಚಂದ್ರನ್. ಅದರ ಬದಲು ಜಯಣ್ಣ-ಭೋಗೇಂದ್ರ ಬ್ಯಾನರ್ ಅಡಿ ಮನೋರಂಜನ್ ನಟಿಸುತ್ತಿದ್ದಾರೆ.



ನನಗೂ ಹಿಂದಿ ಚೆನ್ನಾಗಿ ಗ



ಹರ್ಷಿಕಾ ಪೂಣಚ್ಚ ಬಾಲಿವುಡ್‌ಗೆ ಹೋಗು ಎಂಬ ಸುದ್ದಿ ಹರಡಿದೆ. ಅಲ್ಲದೇ ಬಾಲಿವುಡ್ ನಿ ಮಧು ಭಂಡಾರ್ಕರ್ ಜತೆ ತೆಗೆಸಿಕೊಂಡ ಫೋ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ ಹ ಹೀಗಾಗಿ ಮಧು ನಿರ್ದೇಶನದ ಚಿತ್ರದಲ್ಲಿ ಹರ್ಷಿ ನಟಿಸಲಿದ್ದಾರೆ ಎಂಬ ಚರ್ಚೆಯೂ ನಡೆದಿದೆ. ಈ ಬಾಲಿವುಡ್‌ಗೆ ಹೋಗಲು ನಿಮಗಿರುವ ಅರ್ಹತೆ ಏನು ಎಂಬ ಪ್ರಶ್ನೆಯನ್ನು ಪತ್ರಕರ್ತರೊಬ್ಬರು ಕೇಳಿದಾಗ "ನನಗೆ ಹಿಂದಿ ಚೆನ್ನಾಗಿ ಬರುತ್ತದೆ" ಎಂಬ ಹೇಳಿಕೆ ನೀಡಿದ್ದಾರೆ. ಅಲ್ಲಿಗೆ ಹಿಂದಿ ಬರುವವರೆಲ್ಲರೂ ಬಾಲಿವುಡ್‌ಗೆ ಹೋಗಬಹುದು ಎನ್ನುವಂತಾಗಿದೆ.

ಕನ್ನಡದ ಇನ್ನೋರ್ವ ನಟಿ ನಿಧಿ ಸುಬ್ಬಯ್ಯ ಕೂಡ ಇಂಥದ್ದೇ ಒಂದು ಹೇಳಿಕೆ ನೀಡಿದ್ದರು. "ಬಾಲಿವುಡ್‌ನಲ್ಲಿ ಫ್ರೆಂಡ್ಸ್ ಇದ್ದಾರೆ. ಅವರ ಸಹಾಯದಿಂದ ನಾನು ಒಳ್ಳೊಳ್ಳೆ ಚಿತ್ರಗಳನ್ನು ಮಾಡುತ್ತೇನೆ" ಅಂದಿದ್ದರು. ಆದರೆ, ಸದ್ಯ ನಿಧಿ ಕೈಯಲ್ಲಿ ಯಾವುದೇ ಹಿಂದಿ ಚಿತ್ರಗಳು ಇಲ್ಲ, ನಟಿಸಿದ ಒಂದೆರಡು ಚಿತ್ರಗಳೂ ಗೆಲ್ಲಲಿಲ್ಲ.

ಕನ್ನಡದಲ್ಲಿ ಸಾಕಷ್ಟು ಅವಕಾಶಗಳು ಇದ್ದರೂ ನಿಧಿ ಅವುಗಳನ್ನು ತಿರಸ್ಕರಿಸಿ ಹೊರಟುಹೋಗಿದ್ದರು. ಹರ್ಷಿಕಾಗೂ ಸ್ಯಾಂಡಲ್‌ವುಡ್‌ನಲ್ಲಿ ಅವಕಾಶಗಳು ಇವೆ. ಎಚ್ಚರಿಕೆಯಿಂದ ನಿರ್ಣಯ ತೆಗೆದು ಕೊಳ್ಳಬೇಕು ಅಷ್ಟೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676
Fax : 26604536, E-mail :lankesh70@rediffmail.com